ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೫೪
ವಿಚಾರ ಸಾಹಿತ್ಯಮಾಲೆ – ೬೭
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಆಧುನಿಕ ಭಾರತಕ್ಕೆ ನಮ್ಮ ಪರಂಪರೆಯ ಅಗತ್ಯ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಆರ್. ಆರ್. ದಿವಾಕರ್**
**ಎಸ್. ರಾಮಕೃಷ್ಣನ್**


ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**
(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಆಧುನಿಕ ಭಾರತಕ್ಕೆ ನಮ್ಮ ಪರಂಪರೆಯ ಅಗತ್ಯ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I ೮೯–೧**


ಮೂಲ
**ಶೈಲೇಂದ್ರಕುಮಾರ್ ಗಾಂಗುಲಿ**
ಮತ್ತು
**ಅರ್ಧೇಂದು ಶೇಖರ್ ಘೋಷ್**

ಅನುವಾದ
**ಗಿರಿಜಾ ಶಾಸ್ತ್ರಿ**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Adunika Bharatakke Namma Parampareya Agatya:** Kannada translation of *Relevance of Our Cultural Heritage to Modern India* : **Sailendra Kumar Ganguly and Ardhendushekhar Ghosh;** Kannada translation by **Girija Shastri;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxvi + 44. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxvi + ೪೪
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ,

ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ, **'ಕನಕದಾಸರ ಕೃತಿ'**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು 'ಸಂಶೋಧನ ಕೇಂದ್ರ' ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ 'ಕಾವೇರಿ ನ್ಯಾಯಾಧಿಕರಣದ ತೀರ್ಪಿ'ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ **'ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ'** ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

16/12/11

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಶೈಲೇಂದ್ರಕುಮಾರ್ ಗಾಂಗುಲಿ ಮತ್ತು ಅರ್ಧೇಂದು ಶೇಖರ್ ಘೋಷ್ ಅವರ *Relevance of Our Cultural Heritage to Modern India* ಎಂಬ ಕೃತಿಯ ಕನ್ನಡ ಅನುವಾದ. ಇದನ್ನು 'ಆಧುನಿಕ ಭಾರತಕ್ಕೆ ನಮ್ಮ ಪರಂಪರೆಯ ಅಗತ್ಯ' ಎಂಬ ಹೆಸರಿನಲ್ಲಿ ಗಿರಿಜಾ ಶಾಸ್ತ್ರಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



## ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನ್ಯಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ–ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಅರ್ಪಣೆ

ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದು, ಅರ್ಜುನನಂತೆ ಹೋರಾಡಿದ್ದ ಶ್ರೀ ಈಶ್ವರ ಐಯ್ಯರ್, ಶ್ರೀಮದ್ ಭಗವದ್ಗೀತೆಯಲ್ಲಿ ಪ್ರತಿಪಾದಿಸಲಾಗಿರುವ ಧ್ಯೇಯಗಳ ನಿಷ್ಠಾವಂತ ಅನುಯಾಯಿಗಳು. ಪರಮ ಸತ್ಯದತ್ತ ತಮ್ಮ ಗಮನವನ್ನು ಸ್ಥಿರವಾಗಿಟ್ಟುಕೊಂಡು, ಸರ್ವೋಚ್ಚ ಶಕ್ತಿಗೆ ಶರಣಾಗಿ, ಮನೆಯಲ್ಲಿ ಉಪನಿಷತ್ತುಗಳು, ಸೂತ್ರಗಳು, ಗೀತೆ ಮುಂತಾದ ಎಲ್ಲಾ ಪವಿತ್ರ ಗ್ರಂಥಗಳ ಬಗ್ಗೆ ವಿಚಾರ ಮಾಡುತ್ತಿದ್ದ ಶ್ರೀ ಈಶ್ವರ ಐಯ್ಯರರಿಗೆ ಮತ್ತು ಜನಗಳ ನಡುವೆಯೇ ಇದ್ದರೂ ಹೆಚ್ಚಿನವರ ದೃಷ್ಟಿಗೆ ಬೀಳದೆ, ವಿನಯಪರರಾಗಿರುವ ಎಲ್ಲಾ ಸಂತರಿಗೂ ಮತ್ತು ಶ್ರೇಷ್ಠಾತ್ಮರಿಗೂ ಈ ಪುಸ್ತಕ ಅರ್ಪಿತವಾಗಿದೆ.

# ಮುನ್ನುಡಿ

ಭಾರತೀಯ ಸಂಸ್ಕೃತಿ, ನಾಗರಿಕತೆ ಮತ್ತು ಮೂರ್ತ–ಅಮೂರ್ತ ಬಳುವಳಿಯ ಬಗ್ಗೆ ಸಾಕಷ್ಟು ವಿಶ್ವಾಸಾರ್ಹ ಶಾಸ್ತ್ರಗ್ರಂಥಗಳಿವೆ. ಅಚ್ಚಾದ ಸಾಹಿತ್ಯದ ಪುಸ್ತಕಗಳು ಅಗಾಧ ಪ್ರಮಾಣದವು. ಅವು ಇಂಗ್ಲಿಷ್ ಮತ್ತು ಎಷ್ಟೋ ಪ್ರಾಂತೀಯ ಭಾಷೆಗಳಲ್ಲಿ ದೊರಕುತ್ತವೆ. ಅದೇನೇ ಇದ್ದರೂ, ಭಾರತದ ಸದ್ಯದ ವಿದ್ಯಾಭ್ಯಾಸದ ಕ್ರಮದಲ್ಲಿ, ಅವುಗಳ ಒಂದಂಶದಷ್ಟೂ, ಪಠ್ಯಸೂಚಿಯಲ್ಲಿ ಕಂಡುಬರುವುದಿಲ್ಲ. ಕೆಲವು ವಿಷಯಗಳಲ್ಲಿ ಮಾತ್ರ ಎಂದರೆ, ಪುರಾತನ ಭಾಷೆಗಳು ಆಧ್ಯಾತ್ಮ ಮುಂತಾದವುಗಳಲ್ಲಿ, ವಿದ್ಯಾರ್ಥಿಗಳು ಅತ್ಯಲ್ಪ ಸಂಖ್ಯೆಯಲ್ಲಿ ಆಸಕ್ತಿ ತೋರಿಸುವುದರಿಂದ, ಅವುಗಳಲ್ಲಿ ಇರುತ್ತವೆ. ಈ ರೀತಿಯಾಗಿ, ವಿದ್ಯಾವಂತ ಯುವಕರಲ್ಲಿ ಹೆಚ್ಚಿನವರು, ನಮ್ಮ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಮೂರ್ತ ಅಮೂರ್ತ ಬಳುವಳಿಯಿಂದ ದೂರವಾಗುತ್ತಿದ್ದಾರೆ ಮತ್ತು ಇವುಗಳ ಬಗ್ಗೆ ಅಪಾಯಕರವಾದ ತಪ್ಪು ಅಭಿಪ್ರಾಯಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಈ ವಿಧಾನವು, 'ಆಧುನಿಕತೆ' ಮತ್ತು 'ವಿಜ್ಞಾನ ಹಾಗೂ ತಂತ್ರಶಾಸ್ತ್ರ' ಮುಂತಾದ ಹೆಸರುಗಳಲ್ಲಿ ಹೊರಬರುತ್ತಿರುವ ಮತ್ತು ಸುಖವಾಗಿ ಕೈಗೆಟುಕುವಂಥ ಪ್ರಕಾಶನಗಳ ಪ್ರವಾಹಗಳಿಂದ ಇನ್ನೂ ಹೆಚ್ಚು ವೇಗವನ್ನು ಪಡೆಯುತ್ತಿದೆ.

ಈ ಪ್ರಬಂಧವು, ವಿದ್ಯಾವಂತರಾದ ಭಾರತೀಯ ಯುವಕರಿಗೆಂದು, ಎಂದರೆ, ಯಾರು ಅದರ ಯೋಗ್ಯತೆಗಳನ್ನೆಲ್ಲಾ ಸ್ವತಂತ್ರವಾಗಿ, ಎಂದರೆ, ಸದ್ಯದಲ್ಲಿ ನಮ್ಮ ದೇಶದಲ್ಲಿ ಹರಡಲಾಗುತ್ತಿರುವ ಆಕರ್ಷಕ ಧ್ಯೇಯ ವಚನಗಳು, ಆಧಾರವಿಲ್ಲದೆ ಭಾವಿಸಿದ ಭಾವನೆಗಳು, ಮುನ್ನೊಲವುಗಳು ಎಲ್ಲವನ್ನೂ ಬಿಟ್ಟು, ಅದರ ಯೋಗ್ಯತೆಯನ್ನು ನಿರ್ಣಯಿಸುವರೋ ಅವರಿಗಾಗಿ, ಇದೆ. ನಮ್ಮ ಸಂಸ್ಕೃತಿಯ ವಿವೇಕಯುಕ್ತ ಮೂಲವನ್ನು ಹೊರಕ್ಕೆ ತರಲು, ಪ್ರಯತ್ನವನ್ನು ಮಾಡಲಾಗುತ್ತಿದೆ. ಅದರಿಂದ ಕೆಲವು ಸಾಮಾನ್ಯ ತಪ್ಪು ತಿಳಿವಳಿಕೆಗಳನ್ನು ತೆಗೆದುಹಾಕುವ ನಂಬಿಕೆಯೂ ಇದೆ. ಜೊತೆಗೆ ಭಾರತದ ಇಂದಿನ ಸನ್ನಿವೇಶಕ್ಕೆ ತಕ್ಕಂತೆ ಪ್ರಸ್ತುತತೆಯನ್ನುಂಟುಮಾಡುವ ಆಸೆಯೂ ಇದೆ. ನಮ್ಮ ಸಾಂಪ್ರದಾಯಿಕ ಧರ್ಮಗ್ರಂಥಗಳಲ್ಲಿ, ಯಾವುದೇ ರೀತಿಯ ಶಿಷ್ಟಾಚಾರದ ಬಗ್ಗೆ ಅಥವಾ ನೈತಿಕ ಸಿದ್ಧಾಂತಗಳ ಬಗ್ಗೆ, ಯಾವ ಊಹೆಗಳೂ ಇಲ್ಲ. ಜೊತೆಗೆ, ಆಧುನಿಕ ವಿಜ್ಞಾನದ ಬಗ್ಗೆ ಇಂದಿನ ಯುವಕರು ಹೊಂದಿರುವ ನಿಕಟ ಪರಿಚಯದಿಂದಾಗಿ, ಅವರೊಂದಿಗೆ ಉತ್ತಮವಾದ ಸಾಮಾಜಿಕ ಸಂಬಂಧವನ್ನು ಇಟ್ಟುಕೊಳ್ಳಲು, ನಿರೂಪಣೆಯ ಕ್ರಮವನ್ನು ಆದಷ್ಟೂ ಮುಕ್ತವಾಗಿಟ್ಟು, ಅದನ್ನು ಸಂಪ್ರದಾಯಬದ್ಧ ಶಾಸ್ತ್ರಗ್ರಂಥಗಳಲ್ಲಿ ಬಳಸುವ ರೀತಿನೀತಿಯ ಪಾರಿಭಾಷಿಕ ಪದಾವಳಿಗಳಿಂದ ದೂರವಾಗಿಸಲಾಗಿದೆ. ಒಳ ಅಂಶಗಳು ನಮ್ಮ ಸಂನ್ಯಾಸಗಳು ಮತ್ತು ಅವಧೂತರ ಬೋಧನೆಗಳನ್ನೇ ಅನುಸರಿಸಿವೆ. ಆದ್ದರಿಂದ ಇಲ್ಲಿ ಯಾವ ನೂತನತೆಯನ್ನು ಆಶಿಸುವಂತಿಲ್ಲ. ಆಧುನಿಕ ವೈಜ್ಞಾನಿಕ ಮನೋಭಾವದ ಸೊಬಗು ಮತ್ತು ಕೆಲವು ಔದ್ಯೋಗಿಕ ವಿಜ್ಞಾನದ ಪ್ರಗತಿಯ ಮಹತ್ತರ ಪರಿಣಾಮಗಳನ್ನು



ಸಂಕ್ಷಿಪ್ತವಾಗಿ ಸ್ಪರ್ಶಿಸಲಾಗಿದೆ. ಆಧುನಿಕ ವಿಜ್ಞಾನದ ಮನೋಭಾವ ಮತ್ತು ನಮ್ಮ ಪ್ರಾಚೀನ ಸಂಸ್ಕೃತಿಯ ನಿಜವಾದ ಅಭಿಪ್ರಾಯ ಎರಡೂ ಮುಖ್ಯವಾಗಿ ಒಂದೇ ಆಗಿವೆ ಎಂದು ತೋರಿಸಲಾಗಿದೆ. ಮೊದಲನೆಯದು ಲೌಕಿಕ ಪ್ರಪಂಚಕ್ಕೆ ಮಾತ್ರ ಸಂಬಂಧಿಸಿದ ಮಾನವೀಯ ಅನುಭವವಾಗಿದ್ದರೆ, ಎರಡನೆಯದು ಮಾನವೀಯ ಅನುಭವದ ಪೂರ್ಣತ್ವವನ್ನು ಎಂದರೆ, ಭಾವನಾತ್ಮಕ, ಬೌದ್ಧಿಕ ಮತ್ತು ಮನೋವೈಜ್ಞಾನಿಕ ಮಟ್ಟಗಳ ಅನುಭವಗಳ ಪೂರ್ಣತ್ವವನ್ನೂ ಒಳಗೊಳ್ಳುತ್ತವೆ.

ಆದ್ದರಿಂದ ಒಂದು ಕೇವಲ ವಿವೇಚನಾಯುಕ್ತ ಪ್ರಾರಂಭದ ರೀತಿಯು, ನಮ್ಮ ಪುರಾತನ ಸಂಸ್ಕೃತಿ ಮತ್ತು ನಾಗರೀಕತೆಯ ಮೂಲ ಆಧಾರವನ್ನು ಪ್ರಭಾವಾತ್ಮಕವಾಗಿ ಖಂಡಿತವಾಗಿಯೂ ಹೊರಕ್ಕೆ ತರಲಾರದು ಎಂಬುದಂತೂ ನಿಜ. ಜೊತೆಗೆ ಅಂಥ ಪ್ರವೇಶ, ಇತರ ಪ್ರವೇಶಗಳಿಗೆ ಅಭಿನಂದನಾ ಕೊಡುಗೆಯಾಗಿ ಇರುತ್ತದೆ. ಇತರ ಪ್ರವೇಶಗಳು ಎಂದರೆ ಸಂಸ್ಕರಿತ ಭಾವ ಅಥವಾ ಅಸಾಮಾನ್ಯ ಜ್ಞಾನದ ಅಂತರ್ದೃಷ್ಟಿ ಮೊದಲಾದವು. ಹೀಗೆ ಅಭಿನಂದನಾ ಕೊಡುಗೆಯಾಗಿದ್ದು, ವಿವೇಕವು ಶ್ರದ್ಧೆಯನ್ನು ಮತ್ತೂ ಹೆಚ್ಚಿಸಬಹುದು. ಕಡೆಗೆ ಅದರತ್ತ ಗಮನ ಹರಿಸುವ ಜನರ ಶ್ರದ್ಧೆಯನ್ನಾದರೂ ಹೆಚ್ಚಿಸಬಹುದು. ಈ ಪ್ರಬಂಧದಲ್ಲಿ, ಯಾವ ದೃಷ್ಟಿಕೋನವನ್ನು ಬಳಸಿಕೊಳ್ಳಲಾಗಿದೆ ಎಂದರೆ, ಮಹತ್ವಪೂರ್ಣವಾಗಿರಲು, ಸಂಸ್ಕೃತಿಯು ಪುರಾತನದ್ದೇ ಆಗಿರಬೇಕೆಂದೇನೂ ಇಲ್ಲ, ಆದರೆ, ಇತರ ಎಲ್ಲಾ ಉಪಯುಕ್ತ ಸಿದ್ಧಾಂತಗಳಂತೆ, ಅದೂ ಸಹ ಸಮರ್ಥನೀಯದ್ದೇ ಆಗಿರಬೇಕು ಎಂದಷ್ಟೇ.

ಸದ್ಯದ ಈ ವಿಮರ್ಶಾತ್ಮಕ ಲೇಖನ, ಶಾಸ್ತ್ರೋಕ್ತ ವಿದ್ಯೆಯು ಮುಗಿದ ನಂತರ, ನಮ್ಮ ಯುವ ಪೀಳಿಗೆ, ತಮಗೇ ಅರಿವಿಲ್ಲದಂತೆ ಮನೋವೈಜ್ಞಾನಿಕ ಭಿನ್ನಾಭಿಪ್ರಾಯಗಳನ್ನು (ಅಂಕಿ ಅಂಶಗಳಲ್ಲಿ ಹೇಳಬೇಕಾದರೆ) ಬೆಳೆಸಿಕೊಳ್ಳುತ್ತದೆ ಎಂದು ತೋರಿಸುತ್ತದೆ. ವ್ಯಕ್ತಿಯು ಸ್ವಂತದ ಸಾಂಸ್ಕೃತಿಕ ಮೂರ್ತ ಅಮೂರ್ತ ಬಳವಳಿಯನ್ನು, ಕೀಳಾಗಿ ನೋಡಲು ಹೊರಗಿನ ಯಾವುದನ್ನೋ, ಅದು ಬಹಿರಂಗವಾಗಿ ಪ್ರಭಾವಾತ್ಮಕವಾಗಿ ಹಾಗೂ ಮೋಹಕವಾಗಿದೆಯೆಂದು ನಕಲು ಮಾಡುವುದು. ಬುದ್ಧಿವಂತಿಕೆ ಅಲ್ಲ. ಏಕೆಂದರೆ ಅದು ಕಾಲಾಂತರದಲ್ಲಿ ಒಳಗಿನ ಮನೋವೈಜ್ಞಾನಿಕ ಸಮಸ್ಥಿತಿಯನ್ನು ಕದಡುತ್ತದೆ. ಈ ಮನೋವೈಜ್ಞಾನಿಕ ಆಂದೋಳನ, ಕೆಲವು ಗುಣಾತ್ಮಕ ಗುರುತುಗಳ ಮೂಲಕ ಮೈದೋರುತ್ತದೆ. ಉದಾಹರಣೆಗೆ, ವಿದ್ಯಾವಂತರ ನಡವಳಿಕೆಯ ವಿಧಾನಗಳಲ್ಲಿ ಮತ್ತು ಮೌಲ್ಯಮಾಪನದ ರೀತಿಗಳಲ್ಲಿ ವಿರೋಧ ಕಂಡುಬಂದು, ಅವೇ ಇಂದು ನಾವು ನರಳುತ್ತಿರುವ ಸಾಕಷ್ಟು ತೊಂದರೆಗಳಿಗೆ ಕಾರಣವಾಗಿವೆ. ಅದರಲ್ಲಿ ಸಮಾಜದ ವಿವಿಧ ಗುಂಪುಗಳ ನಡುವಿನ ಅಪನಂಬಿಕೆ ಕೂಡ ಸೇರಿದೆ. ಅಂಥಾ ಆಧಾರಭೂತವಾದ ಮನೋವೈಜ್ಞಾನಿಕ ಪ್ರಶ್ನೆಗಳನ್ನು ಅವು ದೀರ್ಘವ್ಯಾಪ್ತಿಯ ಶಾಖೋಪಶಾಖೆಗಳಾಗಿದ್ದರೂ, ದೇಶದ ವಿದ್ಯಾಭ್ಯಾಸ ವಿಧಾನಗಳನ್ನು ರೂಪಿಸುತ್ತಿರುವರೋ ಅಥವಾ ಸಾಮಾನ್ಯನಾದ ವಿದ್ಯಾವಂತ ಭಾರತೀಯನಾದರೋ, ಪರಿಗಣಿಸುತ್ತಿರುವರೇ ಎಂದು ಲೇಖಕರು ಆಶ್ಚರ್ಯ ಪಡುತ್ತಾರೆ.

'ಜೀವನದಲ್ಲಿ ಗ್ರಹಿಸತಕ್ಕ ದೃಷ್ಟಿ'ಯ ಬಗ್ಗೆಯ ನಮ್ಮ ಸಾಂಪ್ರದಾಯಿಕ ಮಹತ್ವವನ್ನು ನಮ್ಮ ವಿದ್ಯಾರ್ಥಿಗಳ ಮುಂದೆ ತೆರೆದಿಡಬೇಕು. ಇಂದಿನ ದಿನಗಳ ಕೇವಲ ಆರ್ಥಿಕ ಮತ್ತು ಲೌಕಿಕ ಪ್ರಾಮುಖ್ಯತೆಗಳ ಬದಲಿಗೆ ಅದು ಮುಖ್ಯ. ಆರ್ಥಿಕ, ಲೌಕಿಕ

ಪ್ರಾಮುಖ್ಯತೆಗಳಿಗೆ ಕೂಡ ಅವುಗಳದ್ದೇ ಆದ ಪ್ರಾಧಾನ್ಯ ಇರುವುದು ನಿಜ. ಆದರೆ ಅದಕ್ಕೊಂದು ಮಿತಿ ಇದೆ. ಒಂದು ರಈತಿಯ ನಿರ್ಲಿಪ್ತತೆ ಮತ್ತು ವಸ್ತುನಿಷ್ಠವಾದ ದೃಷ್ಟಿಕೋನ, ವಿದ್ಯಾವಂತರೆದುರಿನಲ್ಲಿ ಅತ್ಯಾವಶ್ಯಕವೆಂದು ಕಾಣಿಸಿಕೊಳ್ಳುತ್ತದೆ. ಇದು, ಸಮಾಜದಲ್ಲಿ ಅರ್ಥಪೂರ್ಣ ನೇತೃತ್ವಕ್ಕಾಗಿ ಹಾತೊರೆಯುವುದರಲ್ಲಿ, ಇನ್ನೂ ಹೆಚ್ಚಿಗೆ ಕಂಡುಬರುತ್ತದೆ.

ನಮ್ಮ ಸಂಸ್ಕೃತಿ ಮತ್ತು ಮೂರ್ತ ಅಮೂರ್ತ ಬಳುವಳಿಯ ಪ್ರಸ್ತುತತೆ ಮತ್ತೆ ಹಿಂದಿರುಗಿ ಬರುವುದು, ಇಂದಿನ ಸಾಮಾಜಿಕ ಏರುಪೇರಿನ ಸಂದರ್ಭದಲ್ಲಿ, ಮತ್ತು ನಮ್ಮ ಸ್ಪಷ್ಟ ಅನೇಕತ್ವದಲ್ಲಿ ಸಮಚಿತ್ತ ಜೀವನ ವಿಧಾನವನ್ನು ನಡೆಸಲು, ಸಂಪ್ರದಾಯಿಕ ಒತ್ತು ನೀಡಿದಾಗಲೇ. ಸನಾತನ ಧರ್ಮ, ಒಂದು ಅಖಂಡ ಶಿಲೆಯಂಥ ಸಂಸ್ಕೃತಿಯ ಮೇಲೆ ಹೊಂದಾಣಿಕೆ ಹೇರುವುದಿಲ್ಲ. ಅದಕ್ಕೆ ಬದಲಾಗಿ, ಅದು ಮಾನವ ಪ್ರಕೃತಿಯ ವಿವಿಧ ರೀತಿಗಳು, ವಿವಿಧ ಚಿತ್ತಾಕರ್ಷಕ ಜಾತಿಗಳಲ್ಲಿ, ಶ್ರದ್ಧೆಗಳಲ್ಲಿ ಹಾಗೂ ಸಮಾಜದಲ್ಲಿ ರೂಪ ತಾಳಿರುವುದನ್ನು ಗುರುತಿಸುತ್ತದೆ. ಒಟ್ಟಿನ ಚಿತ್ರದಲ್ಲಿ ಪ್ರತಿಯೊಂದು ಗುಂಪೂ, ಒಂದು ಮಿತವಾದ ಆದರೆ ಮುಖ್ಯವಾದ ಪಾತ್ರ ನಟಿಸುವಾಗ, ಇತರರ ದೃಷ್ಟಿಕೋನಗಳನ್ನೂ ಗ್ರಹಿಸಲು ಮುಂದಾಗಿರಬೇಕು. ಇಂದಿನ ದಿನಗಳಲ್ಲಿನ ಇಕ್ಕಟ್ಟಾದ ದುರಾಸೆಯ ಮಿತಿಗಾಗಿ ಜಗಳಗಳೇ ಆರಂಭವಾಗುವಂತೆ ನಟನೆ ಮತ್ತು ಆಧಾತ್ಮಿಕತೆ ಎಂಬ ಕಣ್ಣಿಗೆ ಕಾಣಿಸದ, ದಾರದ ಮೂಲಕ ನಾವೆಲ್ಲರೂ ಬಂಧಿತರಾಗಿದ್ದೇವೆ ಎಂಬುದರ ಮರೆವು, ಎಲ್ಲವನ್ನೂ ಬಿಡಬೇಕು.

ವಿದ್ಯಾವಂತ ಭಾರತೀಯರು, ತಮ್ಮನ್ನು ತಾವ ಪಠ್ಯೇತರ ವ್ಯಾಸಂಗಳು ಮತ್ತು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ, ಅವು ನಮ್ಮ ಸಾಂಪ್ರದಾಯಿಕ ವಿದ್ಯೆಗೆ ಪೂರಕವಾಗಿರಬಹುದು ಎಂದು ಅರಿಯುವ ಅತ್ಯಾವಶ್ಯಕತೆ ಇದೆ. ಜೊತೆಗೆ ಭಾರತೀಯ ಸಂಸ್ಕೃತಿಯ ಮೂಲಭೂತ ಸಿದ್ಧಾಂತಗಳು ಮತ್ತು ಅತ್ಯಾವಶ್ಯಕ ಸೂತ್ರಗಳನ್ನು ಯಾವುದು ನಿಯೋಜಿಸಿದೆ ಎಂಬುದನ್ನು ನೇರವಾಗಿ ವಿಶ್ವಾಸಾರ್ಹ ಗ್ರಂಥಗಳಿಂದ ಕಂಡುಕೊಳ್ಳುವುದನ್ನು ಬಿಟ್ಟು, ಅವರಿವರು ಹೇಳಿದ್ದನ್ನು ಕೇಳಿ, ಕಪ್ಪಾದ ಹಾಗು ಅಪಾರ್ಥದ ಭಾವನೆಗಳನ್ನು ಸೃಷ್ಟಿಸಿಕೊಳ್ಳುವುದು ಅಥವಾ ಇಂದಿನ ಅಧಃಪತನದ ಸ್ಥಿತಿಯಲ್ಲಿ ಸಾಗುತ್ತಿರುವ ಭಾರತೀಯ ಸಮಾಜದ ಸದ್ಯದ ಅತೃಪ್ತ ಸ್ಥಿತಿಯ ಬಗ್ಗೆ ಮಾಡಿಕೊಂಡ ಒಂದು ಪಾಷಂಡ ಅಭಿಪ್ರಾಯ ಕಲ್ಪಿಸಿಕೊಳ್ಳುವುದು ತಪ್ಪು. ಈ ಹೀನಸ್ಥಿತಿಯ ಗುರುತು, ಉದಾಹರಣೆಗೆ, ಅತಿರೇಕದ, ಸಂಕುಚಿತ ದೃಷ್ಟಿ ಮತ್ತು ಅಸಮಂಜಸತೆಯಾಗಿದ್ದು, ಅದು, ಆಧುನಿಕತೆ ಮತ್ತು ಆಧುನಿಕ ವಿಜ್ಞಾನ ಹಾಗೂ ಔದ್ಯೋಗಿಕ ವಿಜ್ಞಾನದ ಬಗ್ಗೆ ಸಾಮಾನ್ಯವಾಗಿ ಮಾತನಾಡುವವರಲ್ಲಿ ಮತ್ತು ಸ್ವಯಂಸಿದ್ಧರು ಹಾಗೂ ಅನುಷ್ಠಾನವಂತರು ಆಗಿದ್ದಾಗ್ಯೂ ಸ್ವಾಭಾವಿಕ ಸ್ಫೂರ್ತಿ ಇಲ್ಲದಂಥವರಲ್ಲಿ ಇರುತ್ತದೆ.

ಈ ಪುಸ್ತಕವನ್ನು ಓದುವವರಿಗೆ, ಕ್ರಿಯೆಯ ಸಕಾರಾತ್ಮಕ ಕಾರ್ಯಕ್ರಮದ ಬಗ್ಗೆ ಎಂದರೆ ರಾಜಕೀಯದ ಮತ್ತು ಸಾಮಾಜಿಕ ಅರ್ಥಶಾಸ್ತ್ರದಲ್ಲಿನ ಇಂದಿನ ಅಸಂಬದ್ಧ ವೈಷಮ್ಯತೆಗೆ ಉತ್ತರವನ್ನು ಕಂಡುಕೊಳ್ಳಲು ಇನ್ನೂ ಹೆಚ್ಚಿಗೆ ರಚನಾತ್ಮಕವಾಗಿ ಕ್ರಿಯೆಗಳ ಕಾರ್ಯಕ್ರಮಗಳ ಬಗ್ಗೆ ಇದರಲ್ಲಿ ಹೇಳಬಹುದಾಗಿತ್ತು ಎನ್ನಿಸಬಹುದು. ಇಂಥವೇ ಇತರ ಎಷ್ಟೋ ಸಮಕಾಲೀನ ಪ್ರಶ್ನೆಗಳೂ ಇದ್ದು, ಅವೆಲ್ಲಕ್ಕೂ ತಕ್ಷಣದ ಗಮನದ ಆವಶ್ಯಕತೆ ಇರುವುದೂ ನಿಜ. ಒಟ್ಟಿನಲ್ಲಿ ಲೇಖಕರು, ತಮ್ಮ ಮನೋವೈಜಾನಿಕ



ನಿಲುವಿನ ನಿರ್ಧಾರಕ ತೊಂದರೆಯನ್ನು ಗಮನ ಸೆಳೆಯುವವರೆಗೆ ಮಾತ್ರ ತಮ್ಮ ಮಾತುಕತೆ ನಡೆಸಲು ನಿರ್ಧರಿಸಿದ್ದಾರೆ. ಜೊತೆಗೆ ಅದಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಶಿಸ್ತು ಕ್ರಮವನ್ನೂ ಸೇರಿಸಿದ್ದಾರೆ. ಏಕೆಂದರೆ, ಅದನ್ನು ಕಡೆಗಣಿಸಿದರೆ ಅಥವಾ ಉಪಮಾರ್ಗ ಹಿಡಿದರೆ, ಗಾಡಿಯನ್ನು ಕುದುರೆಯ ಮುಂದೆ ಕಟ್ಟಿದಂತಾಗುತ್ತದೆ. ಹಾಗಿದೆ ನಮ್ಮ ಸದ್ಯದ ಭಾರತದ ಪರಿಸ್ಥಿತಿ. ಅದನ್ನೇ ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ ಯಾವುದು ಸ್ಪಷ್ಟವಾಗಿ ಆಧಾರಭೂತವಾದದ್ದೆಂದು ಕಂಡುಬರುತ್ತದೆಯೋ ಅದೇ ಮುಖಂಡತ್ವದ ಉಕ್ಕಟ ಪರಿಸ್ಥಿತಿ. ಅದು ವಿದ್ಯಾಭ್ಯಾಸದ ಕಾರ್ಯನೀತಿಯಲ್ಲಿನ ಆದ್ಯತೆಗಳನ್ನು ಸರಿಪಡಿಸುವ ಪ್ರಶ್ನೆಯೊಂದಿಗೆ ಸೇರಿಕೊಂಡಿದೆ. ಹಾಗೆ ಸೇರಿರುವುದು ಸಾಮಾಜಿಕ ಮಟ್ಟದಲ್ಲಷ್ಟೇ ಅಲ್ಲದೆ, ವೈಯಕ್ತಿಕ ಮಟ್ಟದಲ್ಲಿಯೂ ಹೌದು.

**ಕೃತಜ್ಞತೆಗಳು:** ಇದರೊಳಗಿನ ಭಾವನೆಗಳು ಹಲವಾರು ಸ್ನೇಹಿತರು ಹಾಗೂ ವಋತ್ತಿನಿರತ ಮನೋವೈಜ್ಞಾನಿಕರು ಹಾಗೂ ಶಿಕ್ಷಣ ತಜ್ಞರೂ ಸೇರಿದಂತೆ ಸಾಕಷ್ಟು ಮಂದಿ ಮಾತುಕತೆ ನಡೆಸಿ ಸ್ಪಷ್ಟರೂಪಕ್ಕೆ ತಂದಿರುವ ಭಾವನೆಗಳು. ಲೇಖಕರ ಉತ್ತರದಾಯಿತ್ವಕ್ಕೇ ಸೇರಿದ ದೃಷ್ಟಿಕೋನಗಳನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ಬೆರಳಚ್ಚು ಪ್ರತಿಯನ್ನು ಉತ್ತಮಗೊಳಿಸಿಕೊಟ್ಟ ಎಲ್ಲಾ ಹಿತಚಿಂತಕರಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು. ಮುಖ್ಯವಾಘಿ ಶ್ರೀ ಎ.ಪಿ.ಎಸ್. ಕೃಷ್ಣನ್ ಮತ್ತು ಮುಂಬೈನ ದೇವನಾರ್‌ನ ಸರಸಬಾಗ್‌ನ ಬಿನಯ್ ಕೆ. ಬ್ಯಾನರ್ಜಿಯವರಿಗೆ ವಿಶೇಷ ವಂದನೆಗಲು. ಈ ಮಾಹಿತಿಗಳನ್ನು (೧೯೮೭ನೇ ಇಸವಿಯ ಜನವರಿಯಿಮದ ಮಾರ್ಚ್‌ವರೆಗೆ) ಭವನ್ಸ್ ಜರ್ನಲ್‌ನಲ್ಲಿ ಕ್ರಮವಾಗಿ ಪ್ರಕಾಶಗೊಳಿಸಲಾಯಿತು.

**ಶೈಲೇಂದ್ರಕುಮಾರ್ ಗಂಗೂಲಿ,** ಜಬ್ಬಲ್‌ಪುರ
**ಅರ್ಧೇಂದು ಶೇಖರ್ ಘೋಷ್,** ಮುಂಬಯಿ

Blank



## ಪರಿವಿಡಿ

| | | |
|---|---|---|
| | ಮುನ್ನುಡಿ | v |
| | ಸಂದೇಶ | vii |
| | ಹಾರೈಕೆ | viii |
| | ಪ್ರಾಸ್ತಾವಿಕ ನುಡಿ | ix |
| | ಪೀಠಿಕೆ | xi |
| | ಅರಿಕೆ | xiv |
| | ಕುಲಪತಿಗಳ ಪ್ರಸ್ತಾವನೆ | xv |
| | ಅರ್ಪಣೆ | xvii |
| | ಮುನ್ನುಡಿ | xviii |
| ೧. | ಪೀಠಿಕೆ | ೧ |
| ೨. | ಆಧುನಿಕ ವಿಜ್ಞಾನ ಮತ್ತು ತಂತ್ರಶಾಸ್ತ್ರ | ೪ |
| ೩. | ನಮ್ಮ ಸಂಸ್ಕೃತಿ ಮತ್ತು ಮೂರ್ತ ಅಮೂರ್ತ ಬಳುವಳಿ | ೧೨ |
| ೪. | ಭಾರತದ ಇಂದಿನ ವಿದ್ಯಾಭ್ಯಾಸದ ಪದ್ಧತಿಯನ್ನು ಕುರಿತಾದ ಒಂದು ವಿಮರ್ಶಾತ್ಮಕ ಲೇಖನ | ೨೭ |
| ೫. | ನಿರ್ಣಯಾತ್ಮಕ ಅಥವಾ ಸಿದ್ಧಾಂತಕ್ಕೆ ಬರುವ ಹೇಳಿಕೆಗಳು | ೩೬ |
| | ಅನುಬಂಧ | ೪೦ |

Blank



# ಆಧುನಿಕ ಭಾರತಕ್ಕೆ ನಮ್ಮ ಪರಂಪರೆಯ ಅಗತ್ಯ

# ೧. ಪೀಠಿಕೆ

ಒಂದು ದೇಶದಲ್ಲಿ, ಇತರ ಯಾವುದೋ ಮಾನವೀಯ ಸಂಸ್ಥೆಯಂತೆ, ಅಭ್ಯುದಯದ ದಿನಗಳು ಮತ್ತು ಭವ್ಯತೆ, ನಂತರ ಅವನತಿಯು ಬರುತ್ತವೆ. ಪ್ರಾಚೀನ ವೇದಕಾಲದಿಂದ ಭಾರತದ ಚರಿತ್ರೆ, ಅಂಥ ಏಳಿಗೆ ಮತ್ತು ಕುಸಿತಗಳ ಪರ್ಯಾಯದ ಆವರ್ತಗಳ ಸಾಕ್ಷಿಯನ್ನು ತೋರಿಸುತ್ತದೆ. ಈಗ ನಾವು ಮತ್ತೊಮ್ಮೆ ಅವನತಿಯ ಕಾಲದಲ್ಲೇ ಸಾಗುತ್ತಿದ್ದೇವೆ, ಇದು ಕೆಲವು ಶತಮಾನಗಳ ಹಿಂದೆ ಆರಂಭವಾಗಿದೆ ಎನ್ನಿಸುತ್ತಿದೆ. ಆ ಸಮಯದಲ್ಲಿ ಪಾಶ್ಚಾತ್ಯ ಪ್ರಪಂಚ, ಮುಖ್ಯವಾಗಿ ಆಧುನಿಕ ವಿಜ್ಞಾನ ಮತ್ತು ತಂತ್ರಶಾಸ್ತ್ರದ ಮೂಲಕ ಹಿಂದೆಂದೂ ಕಂಡಿರದಂಥ ಉನ್ನತಿ ಪಡೆದಿದೆ. ಆ ಉನ್ನತಿಗೆ ಕಾರಣ ಆಧುನಿಕ ವಿಜ್ಞಾನ ಮತ್ತು ಔದ್ಯೋಗಿಕ ವಿಜ್ಞಾನಗಳೇ ಹೌದು. ಪ್ರಾಚೀನ ಭಾರತ ತನ್ನದೇ ಆದ ಸ್ವಂತದ ವೈಜ್ಞಾನಿಕ ಮತ್ತು ತಂತ್ರಶಾಸ್ತ್ರದ ಆಧಾರ ಹೊಂದಿತ್ತು. ಜೊತೆಗೆ ಉನ್ನತಿಯನ್ನೂ ಹೊಂದಿತ್ತು (ಇಲ್ಲದಿದ್ದಲ್ಲಿ ಅವಳಿಗೆ ಅಷ್ಟೊಂದು ಪಾಶ್ಚಾತ್ಯ ಬುಡಕಟ್ಟುಗಳನ್ನು ಆಕರ್ಷಿಸಲಾಗುತ್ತಿರಲಿಲ್ಲ.) ಆದರೆ ಆ ವೇಳೆಗಾಗಲೇ ನಾವು ನಮ್ಮ ಸಂಪ್ರದಾಯದಿಂದ ಪೂರ್ಣ ಮುಕ್ತರಾಗಿದ್ದೆವಾಗಿ, ನಾವು ಪಾಶ್ಚಾತ್ಯರತ್ತ ಮಾರ್ಗದರ್ಶನ ಮತ್ತು ಜ್ಞಾನಕ್ಕಾಗಿ, ವಿಧಿಯಿಲ್ಲದೆ ನಿರೀಕ್ಷೆ ಮಾಡತೊಡಗಿದೆವು.

ಕ್ರಮರಹಿತ ಚರಿತ್ರೆ ಮತ್ತು ಎಷ್ಟೋ ಪಾಶ್ಚಾತ್ಯ ದಾಳಿಗಳಾದ ನಂತರವೂ ಹುರುಪಿನ ಒಂದ ಅಂತಃಪ್ರವಾಹ ಇದ್ದೇ ಇತ್ತು. ಆರಿರಲೇ ಇಲ್ಲ. ಕೆಲವೊಮ್ಮೆ ಅದು ಜಾಜ್ವಲ್ಯಮಾನವಾಗಿದ್ದರೆ, ಕೆಲವು ಸಲ ತೀಕ್ಷ್ಣತೆ ಬಹಳ ಕಡಿಮೆ ಇರುತ್ತಿತ್ತು. ಅದರಿಂದ ಅದು ಅಂಥ ಕಷ್ಟದ ದಿನಗಳಲ್ಲಿಯೂ ಸಂತರು ಮತ್ತು ಅವಧೂತರಂಥ ಸುಧಾರಕರ ಪಾತ್ರ ವಹಿಸುವಿಕೆಯ ಬಗ್ಗೆ ಅರಿವುಂಟಾಗಿಸುತ್ತದೆ. ಭಾರತದಲ್ಲಿ ರೂಢಿಯಲ್ಲಿರುವ ಕಾರ್ಯನೀತಿಯನ್ನು ಪಾಶ್ಚಾತ್ಯೀಕರಿಸಿಕೊಂಡ ವಿದ್ಯಾವಂತ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಅದನ್ನು ಸಮರ್ಥಿಸುತ್ತಿದ್ದರೂ, ಅದು ಮತ್ತೊಂದು ರೀತಿಯಲ್ಲಿ, ಅತ್ಯಂತ ಮುಂದುವರಿದ ಪಾಶ್ಚಾತ್ಯ ದೇಶಗಳಿಂದ ಬರುತ್ತಿರುವ ಆಧುನಿಕ ವಿಚಾರಗಳತ್ತ ಪ್ರೋತ್ಸಾಹಿಸುತ್ತದೆ. ಈ ಕಾರ್ಯನೀತಿಯ ಕ್ರಿಯಾತ್ಮಕ ಬಳಕೆಯಲ್ಲಿ, ನಮ್ಮ ಸಂನ್ಯಾಸಿಗಳು ಮತ್ತು ಜ್ಞಾನಿಗಳ ಬೋಧನೆಗಳು, ಹಿನ್ನೆಲೆಗೆ ಹೋಗಿವೆ. ಆದರೂ ಅವರ ಜನ್ಮದಿನಗಳು ಮುಂತಾದವನ್ನು ಭವ್ಯವಾಗಿ, ಬಿಡದೆ, ಆಚರಿಸಲಾಗುತ್ತಿದೆ. ಹಾಗೆ ನೋಡಿದರೆ, ಆಧುನಿಕತೆಯ ಬೆಂಬಲಿಗರು, ನಮ್ಮ

ಸಾಂಪ್ರದಾಯಿಕ ಮೌಲ್ಯಗಳು ಮತ್ತು ಆನುವಂಶಿಕ ಪ್ರಾಪ್ತಿಗಳ ನಡುವೆಯ ಸಂಪರ್ಕವನ್ನು ಪುನಃ ಸ್ಥಾಪಿಸಲು ಮಾಡುವ ಯಾವುದೇ ಪ್ರಯತ್ನವನ್ನೂ ಉಗ್ರವಾಗಿ ನಿಷೇಧಿಸುತ್ತಿರುವುದು ಒಂದೇ ಒಂದು ಕಾರಣದಿಂದ – ಎಂದರೆ, ಹಾಗೆ ಮಾಡುವುದರಿಂದ ಚರಿತ್ರೆಯ ವಿಧಾನಕ್ಕೆ ವಿರೋಧವಾಗಿ ಹೋಗುವ ಅವನತಿಯತ್ತಣ ಹೆಜ್ಜೆಯಾಗುತ್ತದೆ ಎಂಬ ಕಾರಣದಿಂದ.

ನಮ್ಮಲ್ಲಿ ಹೆಚ್ಚಿನವರು ನಮ್ಮ ಸ್ವಂತ ಸಂಸ್ಕೃತಿಯನ್ನು ಬಿಟ್ಟು, ಏಕೆ ಹೊಂದಾಣಿಕೆಯಿಲ್ಲದ ಪಾಶ್ಚಾತ್ಯ ಸಂಸ್ಕೃತಿಯತ್ತ ಗಾಢವಾಗಿ ಸೆಳೆಯಲ್ಪಡುತ್ತಿದ್ದಾರೆ ಎಂಬುದಕ್ಕೆ ಸಾಕಷ್ಟು ಕಾರಣಗಳಿವೆ. ಮುಖ್ಯವಾದ ಕಾರಣ, ಆಧುನಿಕ ಕಾಲದಲ್ಲಿನ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಮಹತ್ತರ ಬದಲಾವಣೆಯೇ ಎನ್ನಿಸುತ್ತದೆ. ನಮ್ಮಲ್ಲಿ ಹೆಚ್ಚಿನವರು, ಇಂಥ ಯುಗವಿಶೇಷ ವಿಕಾಸ ನಡೆದಿರುವ ರಾಷ್ಟ್ರಗಳ ಸಂಸ್ಕೃತಿಯತ್ತ, ವಿವೇಚನಾಯುಕ್ತತೆಯಿಂದಲೇ ಸೆಳೆಯಲ್ಪಡುತ್ತಾರೆ.

ಏನೇ ಆದರೂ, ನಮ್ಮ ಜೀವನ, ವಿದ್ಯಾಭ್ಯಾಸ, ರಾಜಕೀಯ, ತಂತ್ರಶಾಸ್ತ್ರ, ಅರ್ಥಶಾಸ್ತ್ರಗಳ ಬಗ್ಗೆ ವಿಶೇಷವಾಗಿ ಸ್ವಾತಂತ್ರ್ಯಾನಂತರದ ಮೂವತ್ತೈದು ವರ್ಷಗಳಲ್ಲಿ, ಪಾಶ್ಚಾತ್ಯ ಭಾವನೆಗಳ ಅನಿಯಂತ್ರಿತ ಪ್ರಾಧಾನ್ಯ ಕಂಡುಕೊಂಡು ಕೆಲವೇ ಮಂದಿ ಭಾರತೀಯರು, ಆಧುನಿಕ ಕಾಲದಲ್ಲಿಯೂ ನಮ್ಮ ಸ್ವಂತ ಸಂಸ್ಕೃತಿ ಮತ್ತು ಆನುವಂಶಿಕ ಪ್ರಾಪ್ತಿಯ ಬಗ್ಗೆ ಪುನರಾಲೋಚನೆಯನ್ನು ವಿಚಾರಶೀಲತೆಯಿಂದ ಮಾಡಲು ಪ್ರಾರಂಭಿಸಿದ್ದಾರೆ. ನಮ್ಮ ಸಾಂಪ್ರದಾಯಿಕ ಹಾಗೂ ಸ್ವದೇಶೀ ಗೃಹಕೈಗಾರಿಕೆಗಳು ನಿಂತೇ ಹೋಗುತ್ತಿವೆ. ಮತ್ತು ಒಬ್ಬ ನ್ಯಾಯವಂತ, ಕಾನೂನುಬದ್ಧ ನಾಗರಿಕನ ಜೀವನ ದಿನದಿನಕ್ಕೂ ಹೆಚ್ಚು ತೊಂದರೆಗೀಡಾಗುತ್ತಿದೆ. ಒಂದು ರೀತಿಯ ಅನೈತಿಕತೆ ಎಲ್ಲೆಲ್ಲೂ ಕ್ರಮವಾಗಿ ಹೆಚ್ಚುತ್ತಿದ್ದು, ನೀತಿಬಾಹಿರ ಜನರೇ ತಮ್ಮ ಧೋರಣೆಯನ್ನು ಎಲ್ಲೆಲ್ಲೂ ಪ್ರದರ್ಶಿಸುವಂತಾಗುತ್ತಿದೆ. ಅನಿಶ್ಚಿತತೆ, ಅಸಾಧಾರಣ ಉದ್ವಿಗ್ನತೆ, ಮನಸ್ತಾಪಗಳು ಎಲ್ಲವೂ ವೇಗವಾಗಿ ಹೆಚ್ಚುತ್ತಿವೆ. ಅದೇ ವೇಗದಲ್ಲಿ ಪರಿಸರದ ಮಾಲಿನ್ಯ, ದೈಹಿಕವಾಗಿ ಮತ್ತು ನೈತಿಕವಾಗಿ, ಹೆಚ್ಚುತ್ತಿರುವಂತೆಯೇ ಇದೆ.

ಈ ಪುಸ್ತಕದಲ್ಲಿ ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯ ತರ್ಕಾಧಾರಿತ ಮೂಲವನ್ನು ಹೊರಕ್ಕೆ ತರುವ ಮತ್ತು ಆಧುನಿಕ ದಿನಗಳಲ್ಲಿನ ವಿಜ್ಞಾನ ಮತ್ತು ತಂತ್ರಶಾಸ್ತ್ರದ ಬಗ್ಗೆಯ ಪ್ರಸಕ್ತತೆಯ ಬಗ್ಗೆ, ಇಂದಿನ ಯುವಕರು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದಾದಂಥ ಭಾಷೆಯಲ್ಲಿ ಬರೆಯಲಾಗಿದೆ. ಈ ಬಗ್ಗೆ ಕಾರಣಪೂರ್ವಕ ಊಹೆಗಳನ್ನು ಯಾವುವನ್ನೂ, ನಮ್ಮ ಪವಿತ್ರಗ್ರಂಥಗಳಲ್ಲಿನ ನೈತಿಕ ಮೂಲತತ್ತ್ವಗಳ ಬಗ್ಗೆಯ ಔಚಿತ್ಯ ಅಥವಾ ಬೇರೆ ಯಾವುದರ ಬಗ್ಗೆಯೋ ಮಾಡಲಾಗಿಲ್ಲ. ಈ ಪುಸ್ತಕವನ್ನು ಓದುವವರೂ ಕೂಡಾ, ತಾವಾಗಿ, ಇದರ ಬಗ್ಗೆಯ ಯೋಗ್ಯತೆಯನ್ನು, ತಾವು ಮೊದಲೇ ಭಾವಿಸಿದ್ದ ಭಾವನೆಗಳ ಆಧಾರದ ಮೇಲೆ ನಿರ್ಣಯಿಸದೆ, ಈ



ಕೆಳಗೆ ಕೊಟ್ಟಿರುವ ನಿರ್ಣಾಯಕ ಅಂಶಗಳ ಆಧಾರದ ಮೇಲೆ ನಿರ್ಣಯಿಸಬೇಕು. ಏಕೆಂದರೆ ಮೂಲ ತಪಾಸಣೆಗಳ ಬಗ್ಗೆ ಚೆನ್ನಾಗಿ ಅರಿತಿರುವವರಿಗೇ ಇದು ತಿಳಿಯುವುದು.

ಆತ್ಮನಿಷ್ಠೆ – ಅದು ಆತ್ಮವಿರೋಧಿಯಾಗಿರಬಾರದು.

ಆಪಾತರಮಣೀಯತೆ – ಅದು ಯುಕ್ತಾಯುಕ್ತ ಪರಿಜ್ಞಾನವನ್ನು ಹಾನಿಗೊಳಿಸಬಾರದು.

ಸಂಗತಿಗಳೊಂದಿಗೆ ಸಾಮರಸ್ಯ: ಎಲ್ಲಾ ಮುಖ್ಯವಾದ ವಿಚಾರಗಳು ಮತ್ತು ಅನುಭವದ ಬಗ್ಗೆ, ಎಂದರೆ ಶಾರೀರಿಕ ಮತ್ತು ಮಾನಸಿಕ ವಿಚಾರಗಳು ಮತ್ತು ಅನುಭವದ ಬಗ್ಗೆ ಅತ್ಯಂತ ಹೆಚ್ಚಿನ ವ್ಯಾಪ್ತಿಯವರೆಗೆ ತೀರ್ಮಾನಗಳು ಅನುರೂಪವಾಗಿರಬೇಕು.

* * * *

# ೨. ಆಧುನಿಕ ವಿಜ್ಞಾನ ಮತ್ತು ತಂತ್ರಶಾಸ್ತ್ರ

ಸದ್ಯದ ಯುಗವನ್ನು ವಿಜ್ಞಾನ ಮತ್ತು ತಂತ್ರಶಾಸ್ತ್ರದ ಯುಗವೆಂದು ಯೋಗ್ಯವಾಗಿಯೇ ಕರೆಯಲಾಗಿದೆ. ಕೆಲವು ಗಮನಾರ್ಹ ಔದ್ಯೋಗಿಕ ಪ್ರಗತಿಗಳು ಮತ್ತು ಮಾನವೀಯ ಭಾವನೆಗಳು ಹಾಗೂ ಸಂಸ್ಕೃತಿಯ ಮೇಲೆ ಅವುಗಳ ಬಹುದೂರದ ಪರಿಣಾಮವುಳ್ಳ ಬಲವಾದ ಪ್ರಭಾವ ಎರಡನ್ನೂ, ಮೊದಲು ನೆನಪಿಸಿಕೊಳ್ಳಲಾಗುತ್ತಿದೆ.

ದೇಶದ ಮುನ್ನಡೆಯ ಸೂಚಕಗಳಲ್ಲಿ ಒಂದಾಗಿ, ಪ್ರತಿಯೊಬ್ಬರ ದೀಪದ ಬಳಕೆಯನ್ನೂ ಸಹ ತೆಗೆದುಕೊಳ್ಳಲಾಗಿದೆ. ಹಿಂದಿನ ಕಾಲಗಳಲ್ಲಿ, ಹರಿಯುವ ನದಿ ನೀರಿನ ಶಕ್ತಿಯಂಥ ಪ್ರಾಕೃತಿಕ ಮೂಲಗಳ ಮೇಲಷ್ಟೇ ಅಲ್ಲದೆ, ಮಾನವ ಜಾತಿಯು, ಜೀವವೈಜ್ಞಾನಿಕ ಮೂಲಗಳ ಶಕ್ತಿಗಳ ಮೇಲೆ, ಎಂದರೆ, ಪ್ರಾಣಿಶಕ್ತಿ, ಮಾನವ ಶಕ್ತಿಯ ಮೇಲೆ ಆಧಾರಿತವಾಗಿತ್ತು. ಅದರಲ್ಲಿ ಹೆಚ್ಚಾಗಿ ಜೀವನದ ಒಂದು ಸಂಭಾವಿತ ರೀತಿಯನ್ನು ನಿಭಾಯಿಸಲು ಮಾನವ ಶಕ್ತಿಯನ್ನೇ ಆಧರಿಸಿತ್ತು. ಆದ್ದರಿಂದ, ಎಲ್ಲೆಲ್ಲಿ ನಾಗರಿಕತೆ ಬೆಳೆಯಿತೋ, ಅಲ್ಲೆಲ್ಲಾ ಜೊತೆಯಾಗಿಯೇ, ಒಂದು ರೀತಿಯ ಬಲವಂತದ ಅಥವಾ ಕಡಿಮೆ ಕೂಲಿಯ ಗೆಯ್ಮೆ ಬೆಳೆಯಬೇಕಾಗಿ ಬಂತು. ಇಂದಿಗೂ ಭಾರತದಲ್ಲಿ, ಮುಂದುವರಿದ ಜಾತಿಯವರು, (ಹಾಗೂ ಕೂಲಿಗಳ ಮುಖಂಡರೆನ್ನಿಸಿ ಕೊಂಡವರು) ಬಿಡದೆ, ಮನೆಕೆಲಸಕ್ಕಾಗಿ ಜವಾನರನ್ನು ಇಟ್ಟುಕೊಂಡೇ ಇರುತ್ತಾರೆ. ಈ ರೀತಿಯ ಪದ್ಧತಿ, ಇಂದು ಔದ್ಯೋಗಿಕ ವಿಜ್ಞಾನದ ಮೂಲಕ ಮುಂದುವರಿದಿರುವ ದೇಶಗಳಲ್ಲಿ ಹೆಚ್ಚುಕಡಿಮೆ ಕ್ರಿಯಾತ್ಮಕವಾಗಿ ನಶಿಸಿಹೋಗಿದೆ. ಅದನ್ನೇ ಬೇರೆ ಪದಗಳಲ್ಲಿ ವಿವರಿಸಬೇಕೆಂದರೆ, ಔದ್ಯೋಗಿಕ ವಿಜ್ಞಾನವು ಸಮಾಜಕ್ಕೆ ಒಂದು ರೀತಿಯ ಸಹಾಯವನ್ನೊದಗಿಸಿದೆ. ಅದರ ಮೂಲಕ, ಸಾಕಷ್ಟು ಶಕ್ತಿಯನ್ನು, ಪ್ರಾಕೃತಿಕ ಮೂಲಗಳಿಂದ ಪಡೆದು, ಒಳ್ಳೆಯ ನಾಗರಿಕತೆಯ ವಿಧಾನದಲ್ಲಿ ಜೀವನ ನಡೆಸಬಹುದು. ಜೊತೆಗೆ, ಮತ್ತೊಬ್ಬ ವ್ಯಕ್ತಿಯನ್ನು ಆ ಉದ್ದೇಶಕ್ಕಾಗಿ, ಗೋಳುಹುಯ್ಯುವ ಜವಾಬ್ದಾರಿಯಿಂದ ಸಮಾಜವನ್ನು ಕಾಪಾಡಬಹುದು.

ಈಗ ನಾವು ಆಧುನಿಕ ರೀತಿಗಳ ಸಂಪರ್ಕ ವ್ಯವಸ್ಥೆ ಮತ್ತು ಸಾರಿಗೆಯ ಪ್ರಭಾವದ ವಿಷಯಕ್ಕೆ ಬರೋಣ. ಆಧುನಿಕ ಪ್ರಪಂಚ ಅಳತೆಯಲ್ಲಿ ಕುಗ್ಗಿದೆ ಮತ್ತು ರಾಷ್ಟ್ರೀಯ ಪ್ರತಿಬಂಧಗಳು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿವೆ. ಪರಿಣಾಮವಾಗಿ, ಹೆಚ್ಚು



ಮಂದಿ ಚಿಂತಕರು ಏಕೈಕ ಪ್ರಾಪಂಚಿಕ ನಾಗರಿಕತೆಯ ಬಗ್ಗೆ ಮಾತನಾಡುತ್ತಿದ್ದಾರೆ. ಈ ಕ್ರಮವಾದ ಬೆಳವಣಿಗೆಯಲ್ಲಿ ಭಾರತದ ಒಂದು ಪ್ರಜ್ಞಾತ್ಮಕ ಹಾಗೂ ಐಚ್ಛಿಕ ಭಾಗವಹಿಸುವಿಕೆಯು ನಿಜಕ್ಕೂ ಆಶ್ಚರ್ಯಕಾರಕವೂ ಮತ್ತು ಚೈತನ್ಯಕಾರಕವೂ ಆಗಿರುತ್ತದೆ.

ಇದೇ ರೀತಿಯ ಇತರ ಎಷ್ಟೋ ಯುಗವಿಶೇಷ ಔದ್ಯೋಗಿಕ ವಿಜ್ಞಾನದ ಮುನ್ನಡೆಗಳೂ ಆಗಿದ್ದು, ಅವುಗಳನ್ನು ಯಾವ ದೇಶವೂ ಕಡೆಗಾಣಿಸದಂತಾಗಿದೆ. ಜೊತೆಗೆ, ಭಾರತದಂಥ ದೇಶದಲ್ಲಿ, ಎಂದರೆ ಎಲ್ಲಿ ಹೆಚ್ಚಿನ ಜನರು ಆರ್ಥಿಕವಾಗಿ ಹಿಂದಿದ್ದಾರೆಯೋ ಅಲ್ಲಿ, ನಮ್ಮ ಮುಖಂಡತ್ವಕ್ಕೆ ಆಧುನಿಕ ತಂತ್ರಶಾಸ್ತ್ರದತ್ತ ಕಣ್ಣು ಹಾಯಿಸಿ, ಬಡತನವನ್ನು ಅಳಿಸಿಕೊಳ್ಳಬೇಕಾದದ್ದು ಪ್ರಾಕೃತಿಕವೇ ಹೌದು.

ಜೊತೆಗೆ ಆಧುನಿಕತೆಗಾಗಿ ಪ್ರತಿಯೊಂದನ್ನೂ ಆಯಾತ ಮಾಡಿಕೊಳ್ಳುವುದೂ ಬುದ್ಧಿವಂತಿಕೆಯಲ್ಲ. ಏಕೆಂದರೆ ಔದ್ಯೋಗಿಕ ವಿಜ್ಞಾನ ಮತ್ತು ಆಧುನಿಕ ಆರ್ಥಿಕ ಸ್ಥಿತಿ ಎರಡೂ, ಸೂಕ್ತ ಸಾಂಸ್ಕೃತಿಕ ಮೌಲ್ಯಮಾಪನವಿಲ್ಲದೆ ಕೆಲಸ ಮಾಡಲಾರವು. ಭಾರತೀಯ ಪರಿಸ್ಥಿತಿಗೆ ಸೂಕ್ತವೆನಿಸುವ ಕೆಲವು ಅಂಶಗಳು ಹೀಗಿವೆ:

೧. ಭಾರತದಂಥ ದೇಶದ ರಾಷ್ಟ್ರೀಯ ಆರ್ಥಿಕ ಸ್ಥಿತಿಯಲ್ಲಿ, ಗ್ರಾಮೋದ್ಯೋಗ ಅತ್ಯಂತ ಮುಖ್ಯವಾದ ಪಾತ್ರ ವಹಿಸುತ್ತದೆ. ಇದನ್ನು ಬಹಳ ಹಿಂದೆ, ಮಹಾತ್ಮಾ ಗಾಂಧೀಜಿಯವರೂ ಸೇರಿದಂತೆ, ಅನೇಕ ಮುಖಂಡರು, ಅನೇಕ ಸಲ ಸೂಚಿಸಿದ್ದಾರೆ. "ಅಧಿಕೋತ್ಪತ್ತಿಯಿಂದ ವಿಶ್ವದ ಬಡವರಿಗೆ ಸಹಾಯವಾಗುವುದಿಲ್ಲ. ಆದರೆ ಜನಸಮೂಹಗಳೆಲ್ಲರ ಉತ್ಪತ್ತಿಯಿಂದ ಸಹಾಯ ದೊರಕುತ್ತದೆ" ಎಂದು ಗಾಂಧಿ ಹೇಳಿದ್ದಾರೆ. ಹಾಗೆ ನೋಡಿದರೆ, ಪಾಶ್ಚಾತ್ಯ ಔದ್ಯೋಗಿಕ ವಿಜ್ಞಾನದ ಹತೋಟಿಯಲ್ಲಿಲ್ಲದ ಜಾಣತನ ಮತ್ತು ಅದರ ಸಾಂಸ್ಕೃತಿಕ ಗುಣವಿಶೇಷಗಳ ಭಾವನೆಯ ಬಗ್ಗೆ ಅಂದಿನ ದಿನಗಳಲ್ಲಿ ಸಾಕಷ್ಟು ಹೇಳುತ್ತಿದ್ದರಷ್ಟೇ ಅಲ್ಲದೆ, ಪಾಶ್ಚಾತ್ಯ ಔದ್ಯೋಗಿಕ ವಿಜ್ಞಾನದ ವಿಶೇಷದ ಹೆಚ್ಚಿನ ಭಾಗವನ್ನು ಭಾರತಕ್ಕೆ ಸಾಗಿಸುವುದಕ್ಕಿಂತ ಅದೇ ಎಷ್ಟೋ ಒಳ್ಳೆಯದೆಂದೂ ಭಾವಿಸಿದ್ದರು. ಹಾಗೆ ತರಿಸಿಕೊಂಡ ತಂತ್ರಜ್ಞಾನವು, ಸಾಂಪ್ರದಾಯಿಕವಾದ ಭಾರತೀಯ ಗ್ರಾಮೋದ್ಯೋಗಕ್ಕೆ ಸಹಾಯಕವಾಗಿದ್ದು, ಅದನ್ನು ಅಳಿಸಿಹಾಕದೆ, ಮುಂದುವರಿಸಲು ಸಾಧ್ಯವೆಂಬ ಭಾವನೆಯೂ ಇತ್ತು. ನಿಜವಾಗಿ ಹೇಳಬೇಕೆಂದರೆ, ನಮ್ಮ ಸ್ವಾತಂತ್ರ್ಯಾನಂತರದ ಪಾಶ್ಚಾತ್ಯ ತಂತ್ರಶಾಸ್ತ್ರದ ಹತೋಟಿಯಲ್ಲಿಲ್ಲದ ಆಮದು, ಬಡವರಿಗೆ ಅಷ್ಟಾಗಿ ಸಹಾಯಕವಾಗಿರದೆ, ದೊಡ್ಡ ವಾಣಿಜ್ಯೋದ್ಯಮಿಗಳಿಗೆ ಮತ್ತು ಅವರ ಸಹಾಯಕರಿಗೆ, ಆಮದನ್ನು ನಿಯಂತ್ರಿಸುವುದರ ಮೂಲಕ ಕಾಪಾಡಿತ್ತು. ನಮ್ಮ ರಾಷ್ಟ್ರೀಯ ತ್ಯಾಗವಿದ್ದರೂ (ಅತ್ಯಂತ ಹೆಚ್ಚಿನ ಪಾಶ್ಚಾತ್ಯ ಸಾಲದ ರೂಪದಲ್ಲಿ ಮತ್ತು ಸಾಮಾನ್ಯ ಮನುಷ್ಯನ ಉಳಿತಾಯವನ್ನು ಅಳಿಸಿಹಾಕುವಂತೆ ಬಿಡದೆ ಬೆಳೆಯುತ್ತಿದ್ದ ಮೌಲ್ಯಗಳು ಇತ್ಯಾದಿ, ಒಂದು ವಿಶ್ವಾಸಾರ್ಹ ತಾಂತ್ರಿಕ

ಆಧಾರ ಎಂದರೆ, ತನ್ನ ಕಾಲಿನ ಮೇಲೆ ತಾನು ನಿಲ್ಲುವಂಥ ಮತ್ತು ಸ್ವತಂತ್ರ ಬೆಳವಣಿಗೆ ಹೊಂದಿದಂಥ ಒಂದು ವಿಶ್ವಾಸಾರ್ಹ ತಾಂತ್ರಿಕ ಆಧಾರ, ನಮ್ಮ ದೇಶದಲ್ಲಿ ಇನ್ನೂ ಕಂಡುಬಂದಿಲ್ಲ.

೨. ಆಧುನಿಕ ಪಾಶ್ಚಾತ್ಯ ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ, ಅವು ಎಷ್ಟೋ (ನಿಜವಾಗಿಯೂ ಭಾರತದ ದೃಶ್ಯವನ್ನು ಅದುಮಿಹಾಕುತ್ತಿರುವ) ತಂತ್ರಶಾಸ್ತ್ರದ ಮುನ್ನಡೆಗಳ ಹಳೆಯದಾಗಿರುವ ಕುಡಿಗಳು (ಅವು ನಿಜವಾಗಿ ಧನಿಕ ದೇಶಗಳಿಗಾಗಿಯೇ ಇವೆ) ಮತ್ತು ಮುನ್ನಡೆ ಹಾಗೂ ಲಾಭಗಳನ್ನು ಅರಸಿಕೊಂಡೇ ಹೊರಟಿವೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಈ ರೀತಿಯಾಗಿ, ಅವು ಬೃಹತ್ ಸಂಸ್ಥೆಗಳನ್ನು ಮತ್ತು ತಜ್ಞರನ್ನು ಪ್ರೋತ್ಸಾಹಿಸಿ, ಪರಿಣಾಮಪೂರ್ವಕವಾಗಿ ಪ್ರಶ್ನಾರ್ಹವಾದ ಆರ್ಥಿಕ ದಕ್ಷತೆ, (ಸಂಬಂಧಪಟ್ಟ ನಿರರ್ಥಕವಾದ ಅತ್ಯಂತ ಮೇಲಾಡಳಿತ ವೆಚ್ಚ) ಪರಿಸರದ ಮಾಲಿನ್ಯ ಮತ್ತು ಪೂರ್ಣ ಮಾನವೀಯವಲ್ಲದ ಕೆಲಸದ ಪರಿಸ್ಥಿತಿಗಳನ್ನು (ಉತ್ಪತ್ತಿ ಮತ್ತು ಲಾಭಗಳೇ ಆದ್ಯ ಗುರಿಗಳು) ಮತ್ತು ಅತ್ಯಂತ ದುರ್ಬಲ ಔದ್ಯೋಗಿಕ ವಿಜ್ಞಾನವನ್ನು ಅಧರಿಸಿದ ಬಡದೇಶಗಳು. ಮೇಲೆ ಹೇಳಿದ ಆರ್ಥಿಕ ಗ್ರಹಿಕೆಗಳನ್ನು, ದೈಹಿಕವಾಗಿ ದತ್ತುಸ್ವೀಕಾರ ಮಾಡಿದ್ದುದರಿಂದ, ಅದು ಇನ್ನೂ ಹೆಚ್ಚಿನ ಕೆಟ್ಟ ಪರಿಣಾಮಗಳನ್ನು ಉಂಟುಮಾಡಿತು. ಉದಾಹರಣೆಗೆ, ನಾವಿಂದು ಭಾರತದಲ್ಲಿ ನೋಡುತ್ತಿರುವ ಸಾಮೂಹಿಕ ನಿರುದ್ಯೋಗ, ನಗರಗಳಿಗೆ ಸಾಮೂಹಿಕ ವಲಸೆ ಹೋಗುವಿಕೆ, ಗ್ರಾಮೀಣ ಅವನತಿ ಮತ್ತು ಸಹಿಸಲಸಾಧ್ಯವಾದ ಹಾಗೂ ನಾವಿಂದು ಭಾರತದಲ್ಲಿ ನೋಡುತ್ತಿರುವ ಸಾಮಾಜಿಕ ಪ್ರಕ್ಷುಬ್ಧತೆಗಳು. ಇವೆಲ್ಲವೂ ಜನಸಂಖ್ಯೆಯು ಹೆಚ್ಚಿದ್ದರಿಂದಲೇ ಆಗುತ್ತಿವೆ ಎಂದು ವಿವರಿಸುವುದು ಕಷ್ಟ. ಬೃಹತ್ ಪ್ರಮಾಣದ ಕೈಗಾರಿಕೆಗಳು ತಮ್ಮ ಪ್ರಯೋಜನವನ್ನು ಹೊಂದಿಯೇ ಇರುತ್ತವೆ. ಆದರೆ, ಕೇವಲ ಒಂದು ಅಂಶದವರೆಗೆ ಮಾತ್ರ. ಉದಾಹರಣೆಗೆ, ಅಸಲನ್ನು ಹೆಚ್ಚಿಸುವ ಯೋಜಿಸುವ ಯೋಜನೆಗಳೇ ಪ್ರಭಾವ ಬೀರುವಂತೆ ಬಿಟ್ಟಾಗ, ತಮ್ಮ ಬಳಿ ಮಾರಲು ಏನೂ ಇಲ್ಲದೆ, ತಮ್ಮ ದುಡಿಮೆಯನ್ನೇ ಹೊಂದಿದ್ದರೆ, ಅವರು ಅತ್ಯಂತ ಕಡಿಮೆ ಲಾಭ ಪಡೆಯುವ ಸ್ಥಿತಿಯಲ್ಲಿರುತ್ತಾರೆ. ಆದ್ದರಿಂದ ಕೆಲವರು ಹೆಸರಾಂತ ಅರ್ಥಶಾಸ್ತ್ರಜ್ಞರು, ನೈಸರ್ಗಿಕ ಪ್ರಸಂಗಗಳ ವಸ್ತುನಿಷ್ಠ ರೀತಿಗಳನ್ನು ಪರಿಗಣಿಸಿ, 'ಮಧ್ಯದ ತಂತ್ರಶಾಸ್ತ್ರ' ಎಂದು ಅರಿಯಲಾಗಿರುವುದನ್ನು ಈ ದೇಶಕ್ಕೆ ಶಿಫಾರಸು ಮಾಡುತ್ತಾರೆ. ಈ ರೀತಿಯು ಚಿಂತನೆಯಿಂದ, ಆಧುನಿಕ ಕ್ಷೇತ್ರವೂ, ಸ್ವಲ್ಪ ಕಾರ್ಯಭಾರ ನಿರ್ವಹಿಸಬೇಕಾಗುತ್ತದೆ. ಆದರೆ, ಇಡೀ ಜನಸಂಖ್ಯೆಯಲ್ಲಿ, ಪ್ರಮುಖ ಪಾತ್ರ ನಿರ್ವಹಣೆ ಮಾಡಬೇಕಾಗಿಲ್ಲ. ಈ ಪ್ರವೇಶವು ಕಾಲಾಂತರದಲ್ಲಿ ಆಧುನಿಕ ವಲಯದಲ್ಲಿಯೂ ಸಹಾಯಕವಾಗುವುದು, ಇಡೀ ವ್ಯವಸ್ಥೆಯಲ್ಲಿ ಉತ್ತಮವಾದ ಸ್ಥಿರತೆಯನ್ನು ದೃಢಪಡಿಸಿಕೊಂಡ ನಂತರವೇ. ಇಲ್ಲಿ ಬೇಕಾಗಿರುವ ನಿಸ್ಸಂದಿಗ್ಧ ಸಾಂಸ್ಕೃತಿಕ ಅಗತ್ಯತೆ



ಏನೆಂದರೆ, ಸಾಮಾಜಿಕ ಹಾಗೂ ಉದ್ಯೋಗಸ್ಥ ಆಸಕ್ತಿಯನ್ನು ಸಾಮಾನ್ಯ ಮಾನವನಿಗೆ ಬೇಕಾಗಿರುವ ಮೂಲ ಆವಶ್ಯಕತೆಗಳಾದ ಆಹಾರ, ಬಟ್ಟೆ ಮತ್ತು ಆಶ್ರಯಗಳತ್ತ ಹರಿಸಬೇಕು. (ವಿವರಗಳಿಗೆ, ಡಿ.ಆರ್.ಗಾಡ್ಗೀಳರ 'ಪ್ಲಾನಿಂಗ್ ಅಂಡ್ ಎಕನಾಮಿಕ್ ಪಾಲಿಸಿ ಇನ್ ಇಂಡಿಯ' ಪುಸ್ತಕದ ಪುಟ ೩೪೫ ನೋಡಿ: ಇ.ಎಫ್. ಷೂಮ್ಯಾಕರರ 'ಸ್ಮಾಲ್ ಈಸ್ ಬ್ಯೂಟಿಫುಲ್' ಅಬಕಸ್ ಪಬ್ಲಿಕೇಷನ್ ಲಂಡನ್, ೧೯೭೪ ನೋಡಿ.)

೩. ಆಧುನಿಕ ಆರ್ಥಿಕ ಸಂಪ್ರದಾಯದ ಪ್ರಕಾರ, ಜನರಿಗಿಂತ ಸಾಮಾನುಗಳೇ ಮುಖ್ಯ ಮತ್ತು ಸೃಷ್ಟ್ಯಾತ್ಮಕ ಚಟುವಟಿಕೆಗಿಂತ ಸಂಪತ್ತಿನ ಅನಾವಶ್ಯಕ ಮೆರೆತವೇ ಮುಖ್ಯ. 'ಹಣವೇ ಎಲ್ಲಕ್ಕಿಂತಲೂ ಶಕ್ತಿಯುತವಾದದ್ದು.' ಅದಕ್ಕೆ, ನ್ಯಾಯ, ಸಮರಸತೆ, ಸೌಂದರ್ಯ ಅಥವಾ ಆರೋಗ್ಯ ಮುಂತಾದ ಆಧ್ಯಾತ್ಮಿಕವಲ್ಲದ ಜೀವನ ಮೌಲ್ಯಗಳನ್ನು ಕೊಂಡುಕೊಳ್ಳಲಾಗದಿದ್ದರೆ, ಅದು ಅವುಗಳ ಆವಶ್ಯಕತೆಯನ್ನು ತಳ್ಳಿಹಾಕುತ್ತದೆ ಅಥವಾ ಅವುಗಳ ನಷ್ಟಕ್ಕೆ ಪರಿಹಾರ ಕೊಡುತ್ತದೆ" (ಇ.ಎಫ್.ಷ್ಯೂಮಾಕರರ ಹೇಳಿಕೆ ಓದಿಕೊಳ್ಳಿ. ಅದಕ್ಕೆ ವಿರುದ್ಧವಾಗಿ, ಭಾರತೀಯ ಸಾಂಪ್ರದಾಯಿಕ ಸಂಸ್ಕೃತಿಯ ಪ್ರಕಾರ, ಗುರಿಯು ಅತ್ಯಂತ ಹೆಚ್ಚಿನ ಹಿತಚಿಂತನೆಯಾಗಿರಬೇಕು ಮತ್ತು ಅತ್ಯಂತ ಕಡಿಮೆಯ ಆಡಂಬರದ ಬಳಕೆ ಆಗಬೇಕು.

೪. ಕಡೆಯದಾಗಿ, ತಂತ್ರಶಾಸ್ತ್ರವನ್ನು ತಾನೇ ತಾನಾಗಿ ಜೀವಂತಗೊಳಿಸಲು ಆಗುವುದಿಲ್ಲ ಮತ್ತು ಕ್ರಿಯಾಶೀಲದ್ದನ್ನಾಗಿಯೂ ಮಾಡಲಾಗುವುದಿಲ್ಲ. ಹಾಗೆ ಸಾಧ್ಯವಾಗುವುದು ಮೂಲ ವಿಜ್ಞಾನದ ದೃಢವಾದ ಬೆಂಬಲದಿಂದ ಮಾತ್ರ.

ಆದ್ದರಿಂದ ಮೂಲ ವಿಜ್ಞಾನವು, ಎಲ್ಲಾ ಔದ್ಯೋಗಿಕ ವಿಜ್ಞಾನಗಳ ಮೂಲಕ ಮುಂದುವರಿದ ದೇಶಗಳಲ್ಲಿಯೂ ಒಂದು ಪರಮೋಚ್ಚ ಸ್ಥಿತಿಯನ್ನು ಪಡೆದಿದೆ. ವಿಜ್ಞಾನವು ಅದರ ಚೈತನ್ಯದ ವಿನಾ ಅರ್ಥಹೀನವಾದದ್ದಾಗುತ್ತದೆ. ವೈಜ್ಞಾನಿಕ ಚೈತನ್ಯ ಎಂಬುದರ ಅರ್ಥವೇನೆಂದು ಅರಿತುಕೊಳ್ಳಲು ನಾವು ಈಗ ಮೊದಲಿನಿಂದ ಪ್ರಾರಂಭಿಸಿ, ಎಲ್ಲಾ ವೈಜ್ಞಾನಿಕ ವಿಚಾರಗಳ ಬುಡದಲ್ಲಿ ಏನಿದೆ ಎಂಬುದನ್ನು ಅರಿಯಬೇಕು. ಇದನ್ನು ನೈಸರ್ಗಿಕ ಅನ್ವೇಷಣೆಯ ಹೆಸರಿನಲ್ಲಿ ಪ್ರತಿಯೊಬ್ಬ ಬುದ್ಧಿವಂತ ಮಾನವನ ಮನಸ್ಸಿನಲ್ಲಿಯೂ, ಒಂದು ಕ್ರಮಬದ್ಧವಾದ ರೀತಿಯಲ್ಲಿ ಹುಡುಕಬಹುದು. ಹುಡುಕಾಟ ಏತಕ್ಕೆಂದರೆ, ವಿಶ್ವದ ಈ ಸ್ಪಷ್ಟ ವಿಷಯಾಂತರಕ್ಕೆ ಈ ವಿಶ್ವವು ಪೂರ್ತಿಯಾಗಿ ವೈವಿಧ್ಯಗಳಿಂದಲೇ ತುಂಬಿದೆಯಲ್ಲದೆ, ಬಿಡದೆ ಅದು ಆಕಾರವನ್ನೂ ಬದಲಾಯಿಸುತ್ತಿರುತ್ತದೆ. ಆದ್ದರಿಂದಲೇ ಒಂದು ಶೋಧನೆ ಮಾಡುವ ಮನಸ್ಸು, ಪ್ರಾಕೃತಿಕವಾಗಿಯೇ ಇರವಿಗಾಗಿ ಹವಣಿಸುತ್ತದೆ. ಅಂಥ ಇರವು ಯಾವುದಾದರೂ ಈ ಬದಲಾಗದ ಸೂತ್ರದ ಹಿಂದೆ, ಈ ನಿರಂತರ ಬದಲಾಗುತ್ತಿರುವ ವಿಶ್ವದಲ್ಲಿ ಇರಬಹುದೇ? ಕಡೆಗೆ ಒಂದು ಸೂಕ್ಷ್ಮವಲ್ಲದ ಕೂಲಂಕಷ ಪರೀಕ್ಷೆ ತೋರ್ಪಡಿಸುವುದೇನೆಂದರೆ, ಮನಸ್ಸು ಮತ್ತು ಜ್ಞಾನೇಂದ್ರಿಯಗಳು ಎರಡೂ ಎಂದರೆ, ಯಾವುದರ

ಮೂಲಕ ಮಾನವ ಪ್ರಪಂಚವನ್ನು ಅರಿಯುತ್ತಾನೆಯೋ ಅವೂ, ಆಗಾಗ ಅವನನ್ನು ಸೋಲಿಸಬಹುದು, ಎಂತಲೇ ಹೌದು. ಉದಾಹರಣೆಗೆ, ನಾವು ಸೂರ್ಯ ಪ್ರತಿದಿನವೂ ಹುಟ್ಟುವುದನ್ನು ಮತ್ತು ಮುಳುಗುವುದನ್ನು ನೋಡುತ್ತೇವೆ. ಆದರೆ, ನಿಜವಾಗಿ ಹೇಳಬೇಕೆಂದರೆ, ಸೂರ್ಯ ನಮ್ಮ ಕಣ್ಣುಗಳು ನೋಡುವಂತೆ ಸಂಚರಿಸುವುದೇ ಇಲ್ಲ. ಭೂಮಿ ತನ್ನ ಅಕ್ಷರೇಖೆಯಲ್ಲಿ ಸಂಚರಿಸುತ್ತದೆ. ಇದರಿಂದ ಸತ್ಯತೆ ಅಥವಾ ಯಥಾಸ್ಥಿತಿ, ನೋಟಗಳಿಗಿಂತ ಬೇರೆಯಾಗಿರಬಹುದು ಎಂಬುದನ್ನು ತಿಳಿಯಬಹುದು. ಹೀಗೆ ಮನೋವೈಜ್ಞಾನಿಕ ಸ್ಥಿತಿಗಳು ಅಥವಾ ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಆತ್ಮ ಎಂದರೆ, ಯಾವುದೇ ಜೀವಂತ ವೈಜ್ಞಾನಿಕ ಚಟುವಟಿಕೆಗೆ ಬೇಕಾಗಿರುವ ಆತ್ಮ, ಇತರ ವಿಷಯಗಳೊಂದಿಗೆ ಸತ್ಯಕ್ಕಾಗಿ ಅಪಾರ ಶ್ರದ್ಧೆ ಹೊಂದಿದ್ದು, ನಮ್ಮ ಸುತ್ತಲ ಅಪೂರ್ವ ಪ್ರಪಂಚದ ಹಿಂದಿನ ಸ್ಪಷ್ಟ ವೈವಿಧ್ಯವನ್ನು ಹೊಂದಿರುತ್ತದೆ.

ಈ ಅನ್ವೇಷಣೆಯಲ್ಲಿ ಪ್ರಕೃತಿಯ ಎಷ್ಟೋ ಗುಟ್ಟುಗಳು ಅರಿವಿಗೆ ಬರುತ್ತವೆ ಮತ್ತು ಅಂಥ ಜ್ಞಾನದ ಎಷ್ಟೋ ಕ್ರಿಯಾತ್ಮಕ ಉಪಯೋಗಗಳು ಹತ್ತಿರವಾಗಿ ಸಂಬಂಧಿಸಿದ್ದರೂ, ಒಂದೇ ಆಗಿರುವುದಿಲ್ಲ.

ವಿಜ್ಞಾನವು ಮಾನವ ವರ್ಗಕ್ಕೆ ಯಾವ ಹಾನಿಯನ್ನೂ ಉಂಟುಮಾಡದಿದ್ದರೂ, ತಂತ್ರಶಾಸ್ತ್ರವು ಒಳ್ಳೆಯದರೊಂದಿಗೆ ಸಾಕಷ್ಟು ಕೆಟ್ಟದ್ದನ್ನೂ ಮಾಡಬಹುದು. ಅದಕ್ಕೆ ಉದಾಹರಣೆ ಅಣ್ವಸ್ತ್ರ ಸಮರ ಅಥವಾ ಬೈಜಿಕ ಯುದ್ಧ.

## ಬೌದ್ಧಿಕ ವಿಷಯ ನಿಷ್ಕೃಷ್ಟತೆ

ಪ್ರಕೃತಿಯ ಕಾನೂನುಗಳು ನಮ್ಮ ರುಚಿಗಳು ಮತ್ತು ಅರುಚಿಗಳತ್ತ ಗಮನ ಕೊಡುವುದಿಲ್ಲ. ಆದ್ದರಿಂದ ಒಂದು ವಿಚಾರಣೆಯ ಪರಿಣಾಮಗಳಲ್ಲಿನ ಯಾವುದೇ ರೀತಿಯ ವೈಯಕ್ತಿಕ ಒಳಗೊಳ್ಳುವಿಕೆ, ವಿಚಾರಣೆಯ ವಿಧಾನವನ್ನೇ ಕಲುಷಿತ ಗೊಳಿಸುತ್ತದೆ. ಈ ತೊಂದರೆಯೂ ಸುಮಾರಾಗಿ ತನ್ನ ಹತ್ತಿರದವರನ್ನು ಪರೀಕ್ಷಿಸುವ ವೈದ್ಯನೊಬ್ಬ ಅನುಭವಿಸುವ ತೊಂದರೆಯಂತೆಯೇ. ಅಸ್ಮಿತೆಯನ್ನು ಸುತ್ತುವರಿದಿರುವ ವೈಯಕ್ತಿಕ ಅಭಿಮಾನಗಳನ್ನು ಪ್ರಭಾವಾತ್ಮಕವಾಗಿ ಅಧೀನದಲ್ಲಿ ಇಟ್ಟುಕೊಳ್ಳದಿದ್ದಲ್ಲಿ, ವೈಜ್ಞಾನಿಕ ಅನ್ವೇಷಣೆಯಲ್ಲಿ ಮುಂದುವರಿಯುವುದು ಅಸಾಧ್ಯ. ಅದನ್ನೇ ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಒಂದು ವಸ್ತುನಿಷ್ಠವಾದ ಭಾವನೆ ಅಥವಾ ಯಾವುದೋ ರೀತಿಯ ಪ್ರತ್ಯೇಕಿಸಲ್ಪಟ್ಟ ಮತ್ತು ಉದ್ರೇಕವಿಲ್ಲದ (ಪ್ರಶಾಂತ) ಕಾಲುದಾರಿಯೇ ವೈಜ್ಞಾನಿಕ ಸಮಾಜದ ಪ್ರಭಾವಾತ್ಮಕ ಸಂಸ್ಕೃತಿ. ಇದು ಕೇವಲ ಒಂದು ಆಳವಿಲ್ಲದ ಪ್ರೌಢವಿದ್ಯೆಯ ದೃಷ್ಟಿಕೋನವಷ್ಟೇ ಅಲ್ಲದೆ, ಒಬ್ಬ ನಿಜವಾದ ವಿಜ್ಞಾನಿಯ ವ್ಯಕ್ತಿತ್ವದ ಅಂಶವಾಗಬೇಕು.



ವೈಜ್ಞಾನಿಕ ಸ್ಫೂರ್ತಿಯು, ಒಂದು ಭವ್ಯವಾದ ಮಹಾಸೌಧದಲ್ಲಿ ಸೂಕ್ಷ್ಮಾಭಿರುಚಿಯ ಸಲಕರಣೆ ಸ್ಥಾಪಿಸಿದ ಮಾತ್ರಕ್ಕೆ ಉಂಟಾಗುವುದಿಲ್ಲ. ಅದನ್ನು ಒಂದು ಬದುಕಿರುವ ಗಿಡ ಅಥವಾ ಬೆಳೆಯುತ್ತಿರುವ ಮಗುವಿನಂತೆ ಲಾಲನೆ ಪಾಲನೆ ಮಾಡಬೇಕು ಮತ್ತು ಆರೈಕೆ ಮಾಡಬೇಕು. ಹೊರಗಿನ ವಿಕಸನಗಳನ್ನು ಸುಲಭವಾಗಿ ನಕಲು ಮಾಡಬಹುದು. ಆದರೆ ಒಳಗಿನ ಚೇತನವನ್ನಲ್ಲ. ಈ ಚೇತನವಿಲ್ಲದಿದ್ದಲ್ಲಿ ಬಾಹ್ಯ ಆಕಾರಗಳು ಮತ್ತು ಅಭ್ಯಾಸಗಳು ಜೀವವಿಲ್ಲದಂತಾಗುತ್ತವೆ ಮತ್ತು ಕ್ರಮೇಣ ಅಳಿದುಹೋಗುತ್ತವೆ. ಸ್ವಾತಂತ್ರ್ಯದ ನಂತರ ಅಪಾರ ಧನ ಖರ್ಚು ಮಾಡಿ ಕಟ್ಟಿದ ಸಾಕಷ್ಟು ವೈಜ್ಞಾನಿಕ ಪ್ರಯೋಗಾಲಯಗಳು, ಬದುಕಬಹುದಾದ ವೈಜ್ಞಾನಿಕ ವಾತಾವರಣವನ್ನೇ ಹೊಂದಿಲ್ಲ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ನಮ್ಮ ದೇಶದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ವಿಜ್ಞಾನಿಗಳ ಅಲ್ಪ ಉತ್ಪಾದನೆಗಳ ಬಗ್ಗೆ ವಿವರಗಳು ಪ್ರಕಟಗೊಳ್ಳುವುದನ್ನು ನಾವು ಕಂಡಿದ್ದೇವೆ. ಅದೇ ವಿಜ್ಞಾನಿ ಹೊರದೇಶಗಳಲ್ಲಿ ಕೆಲಸ ಮಾಡಿದಾಗ ಅವನ ಉತ್ಪಾದನೆ ಎಷ್ಟೋ ಪಟ್ಟು ಹೆಚ್ಚಿಗೆ ಇರುತ್ತದೆ. (ಉದಾಹರಣೆಗೆ ಬಿ.ವಿ. ರಂಗರಾವ್ ಬರೆದಿರುವ ಸೈನ್ಸ್ ಅಂಡ್ ಕಲ್ಚರ್ ಪುಸ್ತಕ, ೪೦, ೧೯೭೪ರ ಪುಟ ೪೪೧ ನೋಡಿ). ಈ ರೀತಿಯ ಘಟನೆಗಳು, ಹೆಚ್ಚಾಗಿ ತಿಳಿಸುವುದು, ಪಾಶ್ಚಾತ್ಯ ತಂತ್ರಶಾಸ್ತ್ರದ ಆಕರ್ಷಣೆ ಬಗ್ಗೆಯೇ ಹೆಚ್ಚು ಸೆಳೆತವಿದೆಯೇ ಹೊರತು ವಿಜ್ಞಾನದ ಅಂತರ್ಗತ ಭಾವನೆಗಳ ಕಡೆಗಲ್ಲ, ಎಂತಲೇ.

ಇದೇ ಸಂದರ್ಭದಲ್ಲಿ ಮತ್ತೊಮ್ಮೆ ನಮ್ಮ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಆನುವಂಶಿಕ ಪ್ರಾಪ್ತಿಯ ಪ್ರಸಕ್ತತೆಯ ಪ್ರಶ್ನೆ ಏಳುತ್ತದೆ. ಶ್ರೀ ರಾಮಕೃಷ್ಣರು ಹೇಳುತ್ತಿದ್ದ ದೃಷ್ಟಾಂತ ಕಥೆಯನ್ನು ನೆನಪಿಸಿಕೊಳ್ಳೋಣ: ಸಾವಿತ್ರಿ ಎಂಬ ಹೆಂಗಸಿದ್ದಳು. ಜನರು ಅವಳನ್ನು ಚಿಕ್ಕದಾಗಿ ಸಬಿ ಎಂದು ಕರೆಯುತ್ತಿದ್ದರು. ಅವಳಿಗೆ ಧನವೇ ಇಲ್ಲದೆ ಬಹಳ ಕಷ್ಟವಾದಾಗ, ಕಷ್ಟಪಟ್ಟು ಕೆಲಸ ಮಾಡಿ, ಹಣ ಸಂಪಾದಿಸಬೇಕಾಯಿತು. ಒಂದು ದಿನ ಅವಳಿಗೆ ಒಂದು ಉಪಾಯ ಹೊಳೆಯಿತು. ಅವಳು ಮಾರುಕಟ್ಟೆಯ ಬಳಿ ಒಂದು ಕೋಣೆಯನ್ನು ಬಾಡಿಗೆಗೆ ಪಡೆದಳು. ತಕ್ಷಣವೇ ಅವಳ ದರ್ಜೆ ಬದಲಾಯಿತು. ಜನರು, "ಸಬಿ ಈಗ ಧನಿಕಳಾಗಿದ್ದಾಳೆ. ಹೆಚ್ಚಿನ ಸಂಖ್ಯೆಯಲ್ಲಿ ಗಂಡಸರನ್ನು ಸೆಳೆಯುತ್ತಾಳೆ. ಅವಳ ಮನೆಯಲ್ಲಿ ಒಳ್ಳೆಯ ಪೀಠೋಪಕರಣಗಳಿವೆ. ಅವಳೀಗ ಸಾಕಷ್ಟು ಒಡವೆಗಳನ್ನೂ ಧರಿಸುತ್ತಾಳೆ" ಎಂದೆಲ್ಲಾ ಮಾತನಾಡುತ್ತಿದ್ದರು. ಒಬ್ಬ ಸಂನ್ಯಾಸಿ ಅವಳನ್ನು ಗಮನಿಸುತ್ತಿದ್ದ. "ಏತರಿಂದ ಇವೆಲ್ಲಾ ಬಂದಿವೆ?" ಕೆಲವು ಹೊಳೆಯುವ ಚಿನ್ನದ ಚೂರುಗಳಿಗಾಗಿ ಅವಳು ತನ್ನ ಮರ್ಯಾದೆಯನ್ನೇ ಮಾರಿಕೊಂಡಿದ್ದಳಲ್ಲವೇ!

**ಆಧುನಿಕ ವಿಜ್ಞಾನದ ಮಿತಿಗಳು**

ಆಧುನಿಕ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಸಿದ್ಧಿಗಳು ಭೌತಿಕ ಮಟ್ಟದಲ್ಲೇ ಇರುತ್ತವೆ ಎಂಬುದನ್ನು ಗಮನಿಸಿ. ಅವುಗಳ ಶಕ್ತಿ ಭೌತವಿಜ್ಞಾನದಲ್ಲಿರುತ್ತದೆ. ಭೌತವಿಜ್ಞಾನವು ವಿವಿಧ ಆಕಾರಗಳ ನೈಸರ್ಗಿಕ ಶಕ್ತಿ ಮತ್ತು ಪದಾರ್ಥಕ್ಕೆ ಸಂಬಂಧಿಸಿರುತ್ತದೆ ಮತ್ತು ಭೌತಿಕ ಕಾನೂನುಗಳು ಹಾಗೂ ಸಿದ್ಧಾಂತಗಳ ಅನ್ವಯಕ್ಕೂ ಸಂಬಂಧಿಸಿರುತ್ತದೆ. ಈ ವಿಜ್ಞಾನವು ಸ್ಪಷ್ಟವಾಗಿ ಪ್ರಾಯೋಗಿಕ ಅಂಶಗಳನ್ನೇ ಆಧರಿಸಿರುತ್ತದೆ. ಆದರೆ ಭೌತಿಕ ಪ್ರಪಂಚಕ್ಕೆ ಸಂಬಂಧಿಸಿದವುಗಳಿಗೇ ಸೀಮಿತವಾಗಿರುತ್ತದೆ. ಆದ್ದರಿಂದ, ಅದು, ಮಾನವನ ಅನುಭವದ ಒಂದು ಅಂಶವನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆಯೇ ಹೊರತು ಇಡೀ ಮಾನವೀಯ ಅನುಭವವನ್ನಲ್ಲ. ಇಡೀ ಅನುಭವವು ಪರಮೋಚ್ಚ ಮಾನಸಿಕ (ಭಾವನಾತ್ಮಕ ಮತ್ತು ಬೌದ್ಧಿಕ) ಮತ್ತು ಮಾನಸಿಕಾತೀತೀತ ಪ್ರಜ್ಞೆಯ ಇತರ ಮಟ್ಟಗಳಿಗೂ ಮುಂದುವರಿಯುತ್ತದೆ. ಆಧ್ಯಾತ್ಮಿಕ ಅನುಭವದಲ್ಲಿನ ಕಡೆಯದನ್ನು ಸದ್ಯಕ್ಕೆ ನಮ್ಮ ತರ್ಕದಿಂದ ದೂರವಿಟ್ಟರೂ, ನಮಗೆ ಅರಿವಾಗುವುದು ಮನುಷ್ಯನೊಬ್ಬನು ಕೇವಲ ದೈಹಿಕ ಮತ್ತು ಪ್ರಾಪಂಚಿಕ ಸೌಲಭ್ಯಗಳು ಹಾಗೂ ವಸ್ತುಗಳಿಂದ ತೃಪ್ತನಾಗಿರಲಾರ ಎಂಬುದೇ ಹೌದು. ಜೊತೆಗೆ ಇತರ ಮಟ್ಟಗಳ ಆವಶ್ಯಕತೆಗಳೂ ಅದೇ ಹೊತ್ತಿನಲ್ಲಿ ಪೂರೈಕೆಗೊಂಡರೆ ಮಾತ್ರ ತೃಪ್ತನಾಗಿರಬಲ್ಲ. ಆದ್ದರಿಂದ ಹೆಚ್ಚಿನ ಯುವಕರು ಮತ್ತು ಯುವತಿಯರು, (ಎಂದರೆ ಸಂಪನ್ನ ರಾಷ್ಟ್ರಗಳಲ್ಲಿನ ಎಂದರೆ ತಾಂತ್ರಿಕ ವಿಜ್ಞಾನಗಳಲ್ಲಿ ಮುಂದುವರಿದಿರುವ ರಾಷ್ಟ್ರಗಳ ಯುವಕರು ಮತ್ತು ಯುವತಿಯರು) ಕಠಿಣವಾದ ಲೌಕಿಕ ಅಭ್ಯುದಯಕ್ಕೆ ವಿರುದ್ಧವಾಗಿ ಕೋಪವನ್ನು ಪ್ರಕಟಿಸಲು ಮುಂದೆ ಬರುತ್ತಾರೆ. ಅದಕ್ಕೆ ಉದಾಹರಣೆಯಾಗಿ ಹಿಪ್ಪಿ ಚಳುವಳಿ ಮುಂತಾದವು ಇವೆ. ಆಧುನಿಕ ವಿಜ್ಞಾನ ಮತ್ತು ತಾಂತ್ರಿಕತೆಗಳ ಮಿತಿಗಳನ್ನು ಗಮನಿಸುತ್ತಾ, ನಾವು, ಆಗಾಗ ಎಷ್ಟೋ ಮಂದಿ ಮುಂದುವರಿದ ಪಾಶ್ಚಾತ್ಯ ವಿಜ್ಞಾನಿಗಳು, ವಿಜ್ಞಾನವನ್ನು ಪವಿತ್ರೀಕರಿಸುವ ಆವಶ್ಯಕತೆಯ ಬಗ್ಗೆ ಮಾತನಾಡುವುದನ್ನು ಕೇಳಿದ್ದೇವೆ.

ಏನೇ ಆದರೂ, ಆಧುನಿಕ ವಿಜ್ಞಾನ ಒಂದು ಸತ್ಯಾನ್ವೇಷಣೆಯ ಶಿಸ್ತುಕ್ರಮ ಮತ್ತು ಅದು ಪೂರ್ಣವಾಗಿ ವಿವಿಧತೆಯಲ್ಲಿ ಏಕತೆ ಎಂಬ ಪ್ರಾಜ್ಞ ಅನ್ವೇಷಣೆಯಲ್ಲಿ ತೊಡಗಿದೆ. ಆದ್ದರಿಂದ, ಲೆಕ್ಕವಿಲ್ಲದಷ್ಟು ಸೃಷ್ಟಿಗಳು ಹಾಗೂ ನಾಶಗಳು ನಮ್ಮ ಸುತ್ತಲೂ ನಡೆಯುತ್ತಿರುವುದು, ಕೇವಲ ನಿಜವೆಂದು ತೋರುವವು ಮಾತ್ರ ಮತ್ತು ನಿಜವಾಗಿ ಹೇಳಬೇಕೆಂದರೆ, ಅವು ಒಂದೇ ಒಂದು ನಾಶಮಾಡಲು ಅಸಾಧ್ಯವಾದ ಅಸ್ತಿತ್ವದ ರೂಪಾಂತರಗಳು ಅಷ್ಟೇ ಎನ್ನಬೇಕು. ಅದು ಕೆಲವು ಸಲ ತಾನಾಗಿ ಸ್ಥೂಲವಾದ ಜಡವಸ್ತುವಾಗಿ ಕಾಣಿಸಿಕೊಳ್ಳುತ್ತದೆ, ಮತ್ತೆ ಕೆಲವು ಸಲ ಶಕ್ತಿಯಾಗಿ ಕಂಡುಬರುತ್ತದೆ. ಈ ಮೂಲಾಧಾರವಾದ ವೈಜ್ಞಾನಿಕ ನಿರ್ಣಯ ಆಧ್ಯಾತ್ಮಿಕ



ಸತ್ಯದೊಂದಿಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ನಾವು ಮುಂದಿನ ಅಧ್ಯಾಯದಲ್ಲಿ ನೋಡಬಹುದು. ಈ ರೀತಿಯಾಗಿ, ಆಧುನಿಕ ವಿಜ್ಞಾನ, ಆಧ್ಯಾತ್ಮಿಕತೆಯ ವಿರುದ್ಧವಾಗಿ ಇಲ್ಲ. ಆದರೂ ಕೆಲವರು ಹಾಗೆ ಚಿಂತಿಸುತ್ತಿರಬಹುದು. ಹಾಗೆ ನೋಡಿದರೆ ಆಧುನಿಕ ಭೌತಶಾಸ್ತ್ರ (ಉದಾ. ಸಾಪೇಕ್ಷತೆ, ಪರಿಮಾಣದ ಯಂತ್ರಶಾಸ್ತ್ರ ಮುಂತಾದವು ನ್ಯೂಟನ್ನಿನ ಶಾಸ್ತ್ರೀಯ ಭೌತಶಾಸ್ತ್ರದ ಅಂಗವೇ ಆಗುವುದಿಲ್ಲ), ಮತ್ತು ಪ್ರಾಚೀನ ಅಧ್ಯಾತ್ಮ ಜ್ಞಾನಗಳ ನಡುವೆ ಸಾಕಷ್ಟು ಸಾದೃಶ್ಯಗಳಿವೆ. (ಉದಾಹರಣೆಗೆ, ಫ್ರಿಟ್‌ಜಾಫ್ ಕಾಪ್ರರ "ತಾವೋ ಆಫ್ ಫಿಸಿಕ್ಸ್", ವೈಲ್ಡ್‌ವುಡ್ ಹೌಸ್, ಲಂಡನ್, ೧೯೭೫; ಡಿ.ಎಸ್. ಕೊಠಾರಿ ಅವರ "ಆಟಮ್ ಅಂಡ್ ಸೆಲ್ಫ್" ಭಾರತೀಯ ವಿದ್ಯಾಭವನ, ೧೯೮೩; ನೋಡಬೇಕು)

ವೈಜ್ಞಾನಿಕ ಅನ್ವೇಷಣೆಗಳು ಇತ್ತೀಚೆಗೆ ಜೀವಶಾಸ್ತ್ರದ ನಿಗೂಢತತ್ತ್ವಗಳನ್ನು ಆಮೂಲಾಗ್ರವಾಗಿ ಶೋಧಿಸಲು ಪ್ರಾರಂಭಿಸಿವೆ. ಹಾಗೆ ಮಾಡುತ್ತಿರುವುದು ಜೈವಿಕ ವಿಧಾನಗಳ ವಿಶ್ವದ ಶೋಧನೆಯ ಮೂಲಕವೇ. ಈ ರೀತಿಯಾಗಿ ಲೋಕೋತ್ತರವಾದ ಭೌತಿಕ ಮತ್ತು ಜೀವನಾಧಾರವಾದ ಪ್ರಪಂಚಗಳೆರಡರ ಒಕ್ಕೂಟದ ಸಮಸ್ಯೆಯ ಬಗ್ಗೆ ತನ್ನನ್ನು ತಾನು, ಈ ವಿಜ್ಞಾನವು ತೊಡಗಿಸಿಕೊಂಡರೆ ಆಶ್ಚರ್ಯವೇನೂ ಇಲ್ಲ. ಅದು ಭೌತಶಾಸ್ತ್ರದ ಇಂದಿನ ದಿನಗಳ ವಿಚಾರಗಳ ತಿದ್ದುಪಡಿಯತ್ತ ಕೊಂಡೊಯ್ದರೂ, ತನ್ನನ್ನು ತಾನು ಉದ್ರೇಕ ಮತ್ತು ವಿಚಾರಶಕ್ತಿಯ ಬಗ್ಗೆಯೂ ತೊಡಗಿಸಿಕೊಳ್ಳಬಹುದು.

* * * *

# ೩. ನಮ್ಮ ಸಂಸ್ಕೃತಿ ಮತ್ತು ಮೂರ್ತ–ಅಮೂರ್ತ ಬಳುವಳಿ

ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯ ಇಡೀ ಮಹಾಸೌಧ ನಿಂತಿರುವುದೇ ಆಧ್ಯಾತ್ಮಿಕತೆಯ ಮೇಲೆ. ಅದು ನಮ್ಮ ವಿವಿಧತೆಯಲ್ಲಿನ ಏಕತೆಗಾಗಿ ಮಾಡಬೇಕಾಗಿರುವ ಅನ್ವೇಷಣೆಗಾಗಿ ನಿಂತಿದೆ. ವಿವಿಧತೆಯ ಅಪೂರ್ವ ಪ್ರಪಂಚದಲ್ಲಿ ನಿರ್ವಿಕಲ್ಪದ ಏಕತೆಯ ಅನ್ವೇಷಣೆಗಾಗಿ, ಕೇವಲ ವಿಷಯಿಕ ಪ್ರಪಂಚದಲ್ಲೇ ಅಲ್ಲದೆ, ಜೀವನದ, ಮನೋಭಾವದ, ಬುದ್ಧಿವಂತಿಕೆಯ, ಪವಿತ್ರ ಪ್ರಜ್ಞೆ ಇತ್ಯಾದಿಗಳ ಪ್ರಪಂಚದಲ್ಲಿಯೂ ನಿಂತಿದೆ. ಸಾರಭೂತವಾಗಿ, ಈ ಅನ್ವೇಷಣೆ, ಆಧುನಿಕ ವಿಜ್ಞಾನದ ಅನ್ವೇಷಣೆಗಿಂತ ಯಾವ ರೀತಿಯಲ್ಲಿಯೂ ಬೇರೆಯಾಗಿಲ್ಲ. ಹಾಗೆ ನೋಡಿದರೆ, ಸಂಸ್ಕೃತದ ಪದ ವೇದ (ವಿದ್, ಅರಿವು ಎಂಬುದರಿಂದ ಹುಟ್ಟಿರುವುದು) ಪದಶಃ 'ವಿಜ್ಞಾನ' ಎಂಬರ್ಥ (ಲ್ಯಾಟಿನ್‌ನ ಸಯೋ– ನನಗೆ ತಿಳಿದಿದೆ. ಎಂಬುದರಿಂದ ಬಂದಿದೆ) ಹೊಂದಿದೆ. ಆಧ್ಯಾತ್ಮಿಕತೆ, ಏನೇ ಆದರೂ ಆಧುನಿಕ ವಿಜ್ಞಾನಕ್ಕಿಂತ ಬೇರೆಯೇ ಆಗಿದೆ. (ಕಡೆಗೆ ಸದ್ಯದ ಪ್ರಗತಿಯ ಸ್ಥಿತಿಗೆ ಸಂಬಂಧಿಸಿದಂತೆ). ಅದರಲ್ಲಿ ಅದು ಮಾನವೀಯ ಅನುಭವದ ಪೂರ್ಣತೆಯಲ್ಲಿ ಮುಳುಗಿದೆ. ಆದರೆ ವಿಜ್ಞಾನವು ಕೇವಲ ದೈಹಿಕ ಪ್ರಪಂಚದ ಬಗ್ಗೆ ಮಾತ್ರ ಕಾಳಜಿ ವಹಿಸಿದೆ. ಈ ವಿಷಯವನ್ನು ಇಲ್ಲಿ ಸಾಧಾರಣವಾಗಿ ವಿಜ್ಞಾನದ ಒಬ್ಬ ವಿದ್ಯಾರ್ಥಿಗೆ ಅರಿವಾಗುವ ರೀತಿಯಲ್ಲಿ ವಿವರಿಸಲಾಗಿದೆ. ಹಾಗೆ ನೋಡಿದರೆ, ಅದರ ಬಗ್ಗೆ ಸಾಕಷ್ಟು ಪರ್ಯಾಯವಾದ ಗುಣಮಟ್ಟದ ವಿಧಾನಗಳೂ ಇವೆ.

ಮೊದಲೇ ವಿಚಾರ ಮಾಡಿದಂತೆ, ಯಾವುದೇ ವೈಜ್ಞಾನಿಕ ಅನ್ವೇಷಣೆಗೆ ವ್ಯಕ್ತಿಯು ಸದಾ ಒಂದು ನಿಜವಾಗಿಯೂ ಕ್ರಿಯಾತ್ಮಕವಾದ ಭಾವನೆಯನ್ನೇ ಹೊಂದಿರಬೇಕು. ಆಧ್ಯಾತ್ಮಿಕ ಅನ್ವೇಷಣೆಯೂ ಇದಕ್ಕೆ ಯಾವ ರೀತಿಯಲ್ಲಿಯೂ ಹೊರತಾದುದಲ್ಲ. ಆದರೂ ಇದರಲ್ಲಿ ವ್ಯಕ್ತಿಯು ಒಂದು ಜ್ಞೇಯಕ್ಕೆ ಮಾತ್ರ ಸಂಬಂಧಿಸಿದ ಭಾವನೆಯನ್ನು, ವಿಶೇಷವಾಗಿ ಉದ್ವಿಗ್ನತೆ ಮತ್ತು ಬುದ್ಧಿಮತ್ತತೆಯ ಬಗ್ಗೆ ಬೆಳೆಸಿಕೊಳ್ಳಬೇಕು. ಇದಂತೂ ಕಷ್ಟದ ಕೆಲಸವೇ ಎಂಬುದರಲ್ಲಿ ಅನುಮಾನವೇ ಇಲ್ಲ. ಅಂಥ ವಸ್ತುನಿಷ್ಠತೆಯನ್ನು ಪಡೆಯಲು ಬೇಕಾದ ತರಬೇತಿ ಮತ್ತು ಶಿಸ್ತುಗಳನ್ನೇ ಸಾಧನೆ ಎನ್ನಲಾಗುತ್ತದೆ. ಈ ರೀತಿಯಾಗಿ ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯ ಆಧ್ಯಾತ್ಮಿಕ ಆಧಾರ ಕೆಲವರು ಹೇಳುವಂತೆ ಕೇವಲ ಒಂದು ವಿಚಾರಶಕ್ತಿಯ



ಊಹೆಯಲ್ಲ. ಬದಲಿಗೆ ಸತ್ಯದ ಅರಿವಿಗೆ ಬೇಕಾದ ಒಂದು ಮುಖ್ಯವಾದ ಕ್ರಿಯಾಶೀಲ ಪ್ರಯತ್ನದ ಒಂದು ಮುಖ್ಯವಾದ ಅಂಶವನ್ನು ಹೊಂದಿದೆ.

ವ್ಯಕ್ತಿಯು ನಿಜವಾದ ಕ್ರಿಯಾತ್ಮಕ ಭಾವನೆಯನ್ನು ಪಡೆಯಲು ಶಕ್ತನಾದಾಗ ಎಂದರೆ ಒಂದು ಸಂಪೂರ್ಣವಾಗಿ ನಿರ್ಲಿಪ್ತವಾದ ಮತ್ತು ವೈಯಕ್ತಿಕವಲ್ಲದ ಮನೋಭಾವ ಹೊಂದಲು ಶಕ್ತನಾದಾಗ, ಅವನು ತಕ್ಷಣ ಕಂಡುಕೊಳ್ಳುವುದು, ಮನಸ್ಸು ತನ್ನ ಉದ್ವೇಗ ಮತ್ತು ಬುದ್ಧಿಮತ್ತತೆಯೊಂದಿಗೆ ಮುಂದಾಗಿ, ಅವುಗಳ ಪ್ರಾಕೃತಿಕ ನಿಯಮಗಳಿಗನುಗುಣವಾಗಿ (ಧರ್ಮ) ಮುಂದುವರಿದು, ಕೆಲಸ ಮಾಡುತ್ತವೆ, ಎಂದೇ ಹೌದು ಮತ್ತು ಅಸ್ಮಿತೆಯನ್ನೇ ಕೇಂದ್ರವಾಗಿಸಿಕೊಂಡು ಆಸಕ್ತಿಗಳು ಮತ್ತು ಅನಾಸಕ್ತಿಗಳಿಗನುಗುಣವಾಗಿ ಅಲ್ಲ ಎಂತಲೂ ಹೌದು. ಆಗ ವ್ಯಕ್ತಿಗೆ ತನ್ನ ಮಾನಸಿಕ ಪ್ರಪಂಚದಲ್ಲಿನ ಚಟುವಟಿಕೆಗಳ ಚಲನೆಯನ್ನು ವೀಕ್ಷಕನೊಬ್ಬನು ಒಂದು ಫುಟ್‌ಬಾಲ್ ಪಂದ್ಯವನ್ನು ನೋಡುವಂತೆ, ನೋಡಲು ಸಾಧ್ಯ. ಆಗ ವ್ಯಕ್ತಿಗೆ ಮನಸ್ಸಿನಲ್ಲಿ ಕೆಲಸ ಮಾಡುತ್ತಿರುವ ಅಸ್ಮಿತೆಯನ್ನೇ ಒಂದು ವಿಷಯವಾಗಿ ಚಿಂತಿಸುತ್ತಾ ಇರುವುದರ ತಿಳಿಗೇಡಿತನದ ಅರಿವಾಗುತ್ತದೆ. ಉದಾಹರಣೆಗೆ, ತಾಯಿಯೊಬ್ಬಳು ತಾನೇ, ತಾನೊಬ್ಬಳೇ ತನ್ನ ಮಗುವನ್ನು ಪ್ರೀತಿಸುವುದು ಎಂದುಕೊಳ್ಳಬಹುದು. ಆದರೆ ಈ ಮಾತೃಸಂಬಂಧಿ ಪ್ರೀತಿಯ ಅಪರೂಪದ ಘಟನೆ, ಕೇವಲ ಒಬ್ಬಳೇ ಹೆಂಗಸಿಗೆ ಸೀಮಿತವಾಗಿರದೆ, ಎಲ್ಲಾ ತಾಯಿಯರಲ್ಲೂ, ಕಡೆಗೆ ಮರಿಗಳಿಗೆ ಜನ್ಮ ನೀಡಿರುವ ಪ್ರಾಣಿಗಳಲ್ಲಿಯೂ ಕಂಡುಬರುತ್ತದೆ. ಈ ರೀತಿಯಾಗಿ, ನಿಜವಾಗಿ ಹೇಳಬೇಕೆಂದರೆ, ಮಾತೃಪ್ರೇಮ, ಪ್ರಕೃತಿಯಲ್ಲಿನ ಯಾಂತ್ರಿಕ ವ್ಯವಸ್ಥೆಯಲ್ಲಿ ಕಂಡುಬರುವ ಒಂದು ಗುಣವಾಗಿದ್ದು, ಅದು ಅಸಹಾಯಕ ಹೊಸ ಜೀವಿಗಳನ್ನು ಕಾಪಾಡಲೆಂದೇ ಇರುತ್ತದೆ. ಅಕಸ್ಮಾತ್ತಾಗಿ ಹೊಸದಾಗಿ ಹುಟ್ಟಿದ ಮಗುವನ್ನು ಬಿಟ್ಟು ಒಬ್ಬಳು ಹೆಂಗಸು ಸತ್ತರೆ, ಮತ್ತೊಬ್ಬಳು ಸಂಬಂಧಿ ಹೆಂಗಸು, ಅದರ ಮೇಲೆ ಕರುಣೆ ಇಟ್ಟು, ಅದನ್ನು ಅದರ ನಿಜವಾದ ತಾಯಿ ನೋಡಿಕೊಳ್ಳಬಹುದಾಗಿದ್ದಷ್ಟೇ ಪ್ರೀತಿಯಿಂದ ಸಲಹಲು ಮುಂದಾಗುತ್ತಾಳೆ. ಆಗ ಹಿಂದೆ ಹೇಳಿದ ಈ ಪ್ರಾಕೃತಿಕ ಯಾಂತ್ರಿಕತೆ ಮುಂದುವರಿಯತ್ತದೆ. ಸಾಫಲ್ಯ ಸಾಧಿಸಿದ ಸಾಧಕ, ಪ್ರಕೃತಿ ತನ್ನ ಕಾನೂನುಗಳಿಗೆ ಅನುಗುಣವಾಗಿ ಕೆಲಸ ಮಾಡುತ್ತದೆ. ತನ್ನ ಅಸ್ಮಿತೆ ನಗಣ್ಯದ್ದು ಮತ್ತು ಅದು ಪ್ರಾಕೃತಿಕ ಕಾನೂನುಗಳಿಗೆ ವಿರೋಧವಾಗಿ ಹೋಗುವಂಥದಲ್ಲ ಎಂದು ಅರಿತುಕೊಳ್ಳುತ್ತಾನೆ. ಎಷ್ಟೋ ಮಂದಿ ದೂರದೃಷ್ಟಿ ಇಲ್ಲದವರು ಹಾಗೆ ಮಾಡುವುದೂ ಉಂಟು. ಅಂಥ ಸಾಧಕನು ಕೆಲಸಕ್ಕೆ ಬಾರದ ಚಿಂತೆಗಳು ಮತ್ತು ತಪ್ಪಿಸಿಕೊಳ್ಳಬಹುದಾದ ತೊಂದರೆಗಳಿಂದ ತಕ್ಷಣವೇ ತನ್ನನ್ನು ತಾನು ಬಿಡುಗಡೆ ಮಾಡಿಕೊಳ್ಳುತ್ತಾನೆ. ಜೊತೆಗೆ ಸೂಕ್ಷ್ಮ ಪ್ರಾಕೃತಿಕ ಕಾನೂನುಗಳನ್ನರಿತು, ಅವನು ಮಾನವ ಜಾತಿಯ ಸಾಮಾನ್ಯ ಹಿತಕ್ಕಾಗಿ, ಅದ್ಭುತಗಳನ್ನೂ ಮಾಡಬಲ್ಲ.

ಸಾಧಕನು, ತನ್ನ ಮನಸ್ಸಿನ ವಿಷಯಗಳ ಹಿಂದಿರುವ ನಿಜವಾದ ವಿಷಯ, ಪ್ರಜ್ಞೆಯ ಸೂತ್ರವೆಂದೂ ಮತ್ತು ಅಸ್ಮಿತೆ ಅಲ್ಲವೆಂದೂ ಕಡೆಯದಾಗಿ ಅರಿತುಕೊಳ್ಳುತ್ತಾನೆ. ಪ್ರಜ್ಞೆಯ ಮೇಲೇ ಅವನ ಇಚ್ಛೆ, ಚಿಂತನೆ, ಭಾವನೆ ಮತ್ತು ಅವನ ಇರವಿನ ಎಲ್ಲಾ ಕಾರ್ಯಕ್ರಮಗಳೂ ವಿಶ್ರಮಿಸಿಕೊಳ್ಳುತ್ತಿರುತ್ತವೆ. ಈ ಪ್ರಜ್ಞೆ, ಇರವೂ ಸಹ ಆಗಿದೆ. ಅದು ಸಾಧಕನ ವ್ಯಕ್ತಿತ್ವಕ್ಕೆ ಸೀಮಿತವಾಗಿರುವುದಿಲ್ಲ. ಅದು ಎಲ್ಲವನ್ನೂ, ಎಲ್ಲಾ ಇರವುಗಳನ್ನೂ ಎಂದರೆ ದೊಡ್ಡದರಿಂದ ಸೂಕ್ಷ್ಮದವರೆಗಿನ ಎಲ್ಲಾ ಇರವುಗಳನ್ನೂ, ಮರವು ವಿವಿಧ ರೀತಿ ಆಕಾರಗಳ ಹೆಸರಿನ ಪೀಠೋಪಕರಣಗಳಲ್ಲಿ ಆವರಿಸಿರುವಂತೆ, ಆವರಿಸಿರುತ್ತದೆ. ಈ ಅರಿವು ಮನೋತೀತವಾದದ್ದರಿಂದ ಅದನ್ನು ಯಾವ ಭಾಷೆಯಲ್ಲಿಯೂ ವಿವರಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಭಾಷೆಯನ್ನೂ ಒಂದು ಸೂತ್ರವಾಗಿ, ಮನಸ್ಸೇ ಸೃಷ್ಟಿಸಿದೆ. ಏನೇ ಆದರೂ, ಎಲ್ಲಾ ಸಂತರು ಮತ್ತು ಋಷಿಗಳು ಶತಮಾನಗಳಿಂದ, ಸತ್ಯತೆಯನ್ನು ಅರಿತುಕೊಂಡು, ಒಬ್ಬರು ಮತ್ತೊಬ್ಬರ ಅನುಭವಗಳನ್ನು ಸ್ಥಿರಪಡಿಸಿದ್ದಾರೆ. ಅವರು, ಈ ಅನುಭವ ಪ್ರತಿಯೊಬ್ಬ ಅನ್ವೇಷಿಗೂ ಪ್ರಾಪ್ತವಾಗುವಂಥದ್ದು ಎಂದು ಘೋಷಿಸಿದ್ದಾರೆ. ಈ ರೀತಿಯಾಗಿ ನಾವೆಲ್ಲರೂ ಪರಿಪೂರ್ಣತೆಯನ್ನು, ಪೂರ್ಣತ್ವ ಮತ್ತು ಸಮಗ್ರತೆಯನ್ನು ಹಾಗೂ ಪರಿತೃಪ್ತಿ ಎಂಬ ಕಟ್ಟಕಡೆಯ ಆತ್ಮಸಮಾಧಾನವನ್ನೂ ಪಡೆಯಬಹುದಾಗಿರುವುದು ಸಾಧನೆಯ ಮೂಲಕವೇ ಹೌದು.

ಮುನ್ನಡೆಯು, ಒಂದು ಧ್ಯೇಯದ ಕರಡು ರೂಪದ ರೂಪರೇಖೆ ಮತ್ತು ಒಂದು ರೀತಿಯ ಸಿದ್ಧಾಂತವೇ. ನಮ್ಮಲ್ಲಿ ಹೆಚ್ಚಿನವರಿಗೆ ಆಗಿದ್ದು, ಅದು ತಕ್ಷಣದ ಕ್ರಿಯಾತ್ಮಕ ಗುರಿಯನ್ನು ತಲುಪಿಸಲಾರದು. ಒಂದು ಕ್ರಿಯಾತ್ಮಕ ದೃಷ್ಟಿಕೋನದಿಂದ, ವ್ಯಕ್ತಿಯು ತನ್ನ ಮಾನಸಿಕ ಪ್ರಗತಿಯ ನಿಜವಾದ ಸ್ಥಿತಿಯ ಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಅದು ನಮಗೆ ತಿಳಿದಿದೆಯೋ ಇಲ್ಲವೋ, ನಮ್ಮಲ್ಲಿ ಪ್ರತಿಯೊಬ್ಬರಿಗೂ, ಅತೃಪ್ತಿ ಮತ್ತು ಪ್ರಕ್ಷುಬ್ಧತೆಯ ನಿಜವಾದ ಮಾನಸಿಕ ಸ್ಥಿತಿಯಿಂದ ಆಚೆಗೆ ಹೋಗಿ, ಆ ಮೂಲಭೂತ ತೃಪ್ತಿಯನ್ನು ತಲುಪಬೇಕೆಂಬ ಆಸೆ ಇದೆ. ನಾವೆಲ್ಲರೂ, ಯಾರನ್ನೂ ಬಿಡದಂತೆ, ಪ್ರಜ್ಞಾಪೂರ್ಣತೆಯಿಂದಲೋ ಪ್ರಜ್ಞಾಹೀನತೆಯಿಂದಲೋ, ಆ ಗುರಿಯತ್ತಲೇ ಪ್ರಯಾಣ ಮಾಡುತ್ತಿದ್ದೇವೆ. ಮಾನವ ಮನಃಶಾಸ್ತ್ರದ ಈ ವಿಷಯವು, ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯ ತರ್ಕಾಧಾರಿತ ಆಧಾರದ ಸೂಕ್ತ ಹಿಡಿತ ಹೊಂದಿರುವುದಕ್ಕಾಗಿ, ನಾವು ಮೆಚ್ಚಲೇಬೇಕು. ಈ ಒಳಗಿನ ಮನೋವೈಜ್ಞಾನಿಕ ಚಲನೆ, ಒಂದು ಕೌಶಲದ ರೀತಿಯಲ್ಲಿ, (ಎಂದರೆ ಕಾನೂನುಗಳ ಪೂರ್ಣಜ್ಞಾನದಿಂದ ಈ ರೀತಿಯ ಚಲನೆಯನ್ನು ನಿರ್ವಹಿಸುತ್ತಿರುವ ರೀತಿ) ಧರ್ಮ ಎಂದು ಹೆಸರು ಪಡೆದಿದೆ.



**ಧರ್ಮ (ಪಾಳಿ ಭಾಷೆಯಲ್ಲಿ ಧಮ್ಮ)**

ಧರ್ಮ ಎಂದರೆ ಮತ, ಮತ್ತೇನೂ ಅಲ್ಲ ಎಂಬ ಒಂದು ಸಾಮಾನ್ಯವಾದ ತಪ್ಪು ಭಾವನೆ ಇದೆ. ಧರ್ಮ ಎಂಬ ಪದದ ಅರ್ಥ ಕಾನೂನು, ಪ್ರಾಕೃತಿಕ ಮತ್ತು ನೈತಿಕ ಕಾನೂನು ಆಗಿದ್ದು, ಅದು ನಿಷ್ಠೆಯ ಜೀವನವನ್ನು ದೃಢಪಡಿಸುತ್ತದೆ. ಇದೇ ಅರ್ಥದಲ್ಲಿ ಈ ಪದವನ್ನು ಇನ್ನೂ ಎಷ್ಟೋ ಭಾಷೆಗಳಲ್ಲಿ ಬಳಸಲಾಗುತ್ತದೆ. ಉದಾಹರಣೆಗೆ, ಒಬ್ಬರು, "ಬೆಂಕಿಯ ಧರ್ಮವೇ ಉರಿಯುವುದು" ಎಂದರೆ ಮತ್ತೊಬ್ಬರು "ರಾಜನ ಧರ್ಮ ತನ್ನ ಪ್ರಜೆಗಳನ್ನು ಕಾಪಾಡುವುದು" ಎನ್ನುತ್ತಾರೆ. ಹೀಗೆ ಧರ್ಮ ಮತ್ತು ಮತ ಪರಸ್ಪರ ಸಂಬಂಧಿಸಿದ್ದರೂ, ಒಂದೇ ಅಲ್ಲ.

ಧರ್ಮವು ನಮ್ಮ ಸಂಸ್ಕೃತಿ ಮತ್ತು ನಾಗರಿಕತೆಯಿಂದ ವ್ಯತ್ಯಾಸವಿಲ್ಲದ್ದು. ನಮ್ಮ ಬಾಹ್ಯ ಆಕೃತಿಯು, ಆಧ್ಯಾತ್ಮಿಕತೆಯನ್ನು ಒಳಗಿಟ್ಟುಕೊಳ್ಳಬೇಕು. ನಮ್ಮ ಧರ್ಮಗಳನ್ನು ಕಂಡುಹಿಡಿದ ಋಷಿಗಳು ತಾವಾಗಿ ತಿಳಿದಿದ್ದದ್ದು, "ಇಡೀ ಜನಸಂಖ್ಯೆಯಲ್ಲಿನ ಒಂದು ಚಿಕ್ಕ ಪಾಲು, ಪ್ರಜ್ಞಾತ್ಮಕವಾಗಿ, ಪರಿಶುದ್ಧ ಆಧ್ಯಾತ್ಮಿಕತೆಯಲ್ಲಿ ಆಸಕ್ತಿ ಹೊಂದಿರುತ್ತದೆ ಮತ್ತು ಅವರಲ್ಲಿಯೂ ಕೆಲವೇ ಮಂದಿ, ಮೂಲಭೂತ ಸತ್ಯತೆಯನ್ನು ಅರಿಯುತ್ತಾರೆ" ಎಂದೇ ಆಗಿತ್ತು. ಈ ರೀತಿಯಾಗಿ, ಧರ್ಮ, ಆಧ್ಯಾತ್ಮಿಕ ಜೀವನವನ್ನೇ ವಿಶೇಷವಾಗಿ ಅರಸುತ್ತಿರುವವರಿಗಾಗಿ ಅಥವಾ ಸಾಧಕರ ಜೀವನವನ್ನು ನಡೆಸುತ್ತಿರುವವರಿಗಾಗಿ ಮಾತ್ರ ಅಲ್ಲದೆ, ಅದು ಸಮಾಜದ ಪ್ರತಿಯೊಬ್ಬ ವ್ಯಕ್ತಿಗಾಗಿಯೂ ಇದೆ. ಏಕೆಂದರೆ, ಈ ಸಮಾಜದ ಪ್ರತಿಯೊಬ್ಬರೂ, ಇತರರೊಂದಿಗೆ ಓಡಾಡಿ, ಪರಿಚಯ ಮಾಡಿಕೊಳ್ಳುವುದು, ಪ್ರಕೃತಿಯ ಸಾರ್ವಕಾಲಿಕ ಕಾನೂನುಗಳ ಪ್ರಕಾರವೇ. ಅದನ್ನು ಪ್ರತಿಯೊಬ್ಬರೂ ಅರಿತಿಲ್ಲದಿರಲೂ ಸಾಧ್ಯ. ಧರ್ಮದಲ್ಲಿ ಪ್ರಕೃತಿ ಮತ್ತು ಅದರ ಕಾನೂನುಗಳು ಕೇಂದ್ರದ ಮಾರ್ಗದರ್ಶಿ ದೀಪವಾಗಿ ಕಾಣಿಸಿಕೊಳ್ಳುತ್ತವೆ. ಮೌಢ್ಯತೆ ತುಂಬಿದ ದುರಭಿಮಾನದ ಜೀವನದ ಅನುಸರಣೆ, ದುರಾಸೆ ಮತ್ತು ಇತರ ದೃಷ್ಟಿವೈಶಾಲ್ಯವಿಲ್ಲದ ಪ್ರತಿಫಲಕ್ಕಾಗಿ, ಕಾನೂನುಗಳನ್ನು ಅತಿಕ್ರಮಿಸಲು ಸಿದ್ಧವಾದರೆ, ಅದೇ ಅಧರ್ಮ.

ನಾವೀಗ ಒಂದು ಯುಕ್ತ ಪ್ರಶ್ನೆಗೆ ಬರುತ್ತಿದ್ದೇವೆ. ಹೇಗೆ ಹಸಿವು ಮತ್ತು ದುರಾಸೆಗಳನ್ನು ಗುರುತಿಸುವುದು? ಅಥವಾ ಹಣ, ಹೆಸರು ಮತ್ತು ಪ್ರಸಿದ್ಧಿಗಾಗಿ ಒಂದು ಅಸಹಜ ಆಸಕ್ತಿ ಹೊಂದಿರುವುದು ಹೇಗೆ? ಇಲ್ಲಿ ಅಸಹಜ ಎಂಬುದನ್ನು ಗುರುತಿಸೋಣ. ಸಾಮಾನ್ಯ ಆಸೆ ಅಧರ್ಮವಲ್ಲ. ವ್ಯಕ್ತಿಯೊಬ್ಬನು, ತನ್ನ ಸ್ವಂತ ವ್ಯಕ್ತಿತ್ವದ ಅಂಶಕ್ಕಿಂತ ಹೆಚ್ಚು ಕೆಲಸ ಮಾಡುತ್ತಿರುವುದರ ಅರಿವನ್ನು ಹೊಂದಿಲ್ಲ ಎಂದರೆ ಅದೊಂದು ದುಃಖದ ಸಂಗತಿ. ತನ್ನ 'ನಾನು' ಎಂಬುದನ್ನು ವ್ಯಕ್ತಿಯೊಬ್ಬನು ಏನೆಂದು ಕರೆಯುತ್ತಾನೆ ಎಂಬುದು ಮೇಲ್ಮನಸಸಿನ ಒಂದು ಗುರುತು ಅಷ್ಟೆ. ವ್ಯಕ್ತಿತ್ವದಲ್ಲಿನ ಹೆಚ್ಚಿನದು ಒಳಗೆ ಅವಿತಿರುತ್ತದೆ. ಅದನ್ನು ಸಾಮಾನ್ಯವಾಗಿ ಉಪಪ್ರಜ್ಞೆ

ಮತ್ತು ಪ್ರಜ್ಞಾಹೀನತೆ ಎನ್ನಲಾಗುತ್ತದೆ. ಮೇಲ್ಮನಸ್ಸಿನಲ್ಲಿ ಏಳುವ ಕಲರವ ತರಂಗ, ಒಳಗಿನ ಪದರಗಳಿಂದ ಬರುತ್ತವೆಯಲ್ಲದೆ, ಇತರ ಹೊರಗಿನ ಮೂಲಗಳಿಂದ, ಎಂದರೆ ಇತರ ವ್ಯಕ್ತಿತ್ವಗಳಿಂದ ಮತ್ತು ಜನರಿಂದಲೂ ಬರುತ್ತವೆ. ಹಾಗಾಗಿ ಅವು ಪೂರ್ಣವಾಗಿ, ವಿಷಯಕ್ಕೆ ನೇರವಾಗಿ ಸಂಬಂಧಿಸಿದವು. ಮೊದಲು ಹೇಳಿದ ಗುರುತಿನಿಂದಾಗಿ, ಮನುಷ್ಯನು ತಕ್ಷಣವೇ ಹೊರಗಿನ ಪ್ರಭಾವಗಳನ್ನು ಗುರುತಿಸಲಾರನು. ಮೂಲ ಒಳಪ್ರಕೃತಿಯನ್ನು ಗಮನಿಸದೆ, ಮೇಲ್ಮನಸ್ಸಿನ ಅಂತಃಪ್ರೇರಣೆಗಳಿಂದಲೇ ದಾರಿ ರೂಪಿಸಿಕೊಳ್ಳುವುದು, ಆದ್ದರಿಂದ ಅಸಾಧ್ಯದ ಪೆದ್ದುತನವಾಗುತ್ತದೆ.

ಆದ್ದರಿಂದ ಸರಿಯಾದ ತೀರ್ಮಾನ ಮತ್ತು ಸರಿಯಾದ ದುಡಿತಕ್ಕಾಗಿ, ವ್ಯಕ್ತಿಯು ತಾರತಮ್ಯದ ಯೋಗ್ಯತೆಯನ್ನು ಬಳಸಿಕೊಳ್ಳಬೇಕು. ಶಾಸ್ತ್ರಗಳು ಎಂದರೆ ನಮ್ಮ ಸಂತರು ಮತ್ತು ಸಾಧುಗಳು ಎಷ್ಟೋ ಶತಮಾನಗಳಿಂದ ಕೂಡಿಹಾಕಿ ಕೊಂಡಿರುವ ತಮ್ಮ ಅನುಭವಗಳು ಮತ್ತು ಜ್ಞಾನದ ತಿರುಳಿನ ಭಂಡಾರಗಳಾಗಿರುವ ಶಾಸ್ತ್ರಗಳು, ನಿಜವಾದ ಮಾರ್ಗದರ್ಶಕಗಳು ಎಂದು ನಾವು ನಿರ್ಧರಿಸಬಹುದಾಗಿದೆ. ಶಿಸ್ತು ಮತ್ತು ಅಭ್ಯಾಸಗಳಿಂದ, ಮನಸ್ಸು ಮತ್ತು ಪ್ರಜ್ಞೆ ಯಥಾರ್ಥತೆಯನ್ನು ಬೆಳೆಸಿಕೊಂಡಾಗ, ವ್ಯಕ್ತಿಗಳು ಸರಿಯಾದ ಮಾರ್ಗದಲ್ಲಿ ತಾರತಮ್ಯದ ಸ್ವಾಭಾವಿಕ ಶಕ್ತಿಯನ್ನು ಚಲಾಯಿಸಲು ಶಕ್ತರಾಗುತ್ತಾರೆ. ಇಲ್ಲದಿದ್ದಲ್ಲಿ, "ದೆವ್ವ ಶಾಸ್ತ್ರಗಳನ್ನು ಉಲ್ಲೇಖಿಸಬಲ್ಲದು" ಎಂಬ ಹೇಳಿಕೆಯಂತೆ, ತಮ್ಮ ದೃಷ್ಟಿವೈಶಾಲ್ಯವಿಲ್ಲದ ದುರಾಸೆಗೆ ಹೊಂದುವಂತೆ, ಪವಿತ್ರ ಗ್ರಂಥಗಳನ್ನು ವ್ಯಾಖ್ಯಾನಿಸುವ ಬಗ್ಗೆ ಬಹಳ ದುಷ್ಪ್ರೇರಣೆ ಉಂಟಾಗುತ್ತದೆ. ಆದ್ದರಿಂದ ಸಂನ್ಯಾಸಿಗಳಿಂದ, (ಆದರೆ ಅತ್ಯಂತ ಹೆಚ್ಚಿಗೆ ಇರುವ ಸೋಗಿನ ಸಂನ್ಯಾಸಿಗಳಿಂದಲ್ಲ) ಮಾರ್ಗದರ್ಶನವನ್ನು ಆಶಿಸುವುದು ಸದಾಕಾಲಕ್ಕೂ ನಿರಪಾಯಕರ.

ಧರ್ಮ ಮತಕ್ಕೆ ಸಂಬಂಧಿಸಿದೆ. ಎಲ್ಲಾ ಧಾರ್ಮಿಕ ಅಭ್ಯಾಸಗಳ ಮುಖ್ಯ ಗುರಿಯೂ ಮನಸ್ಸಿನ ಮೇಲೆ ಹಿಡಿತವನ್ನು ಸಾಧಿಸಿಕೊಳ್ಳುವುದೇ ಆಗಿದೆ. ಪ್ರಶಾಂತವಾದ ಮತ್ತು ಏಕಾಗ್ರವಾದ ಮನಸ್ಸು ಮಾತ್ರ ಸತ್ಯವನ್ನು ಎಂದರೆ ತುಲನಾತ್ಮಕವಾದ ಮತ್ತು ಅಪರಿಮಿತವಾದ ಸತ್ಯವನ್ನು ಗ್ರಹಿಸಬಲ್ಲದು. ಮನಸ್ಸು ವಿಷಯಕ್ಕೆ ಸಂಬಂಧಿಸಿದವುಗಳಿಗೆ ಸಮಾನವಾದ ಎಷ್ಟೋ ಗುಣಗಳನ್ನು ಹೊಂದಿದೆ. ಉದಾಹರಣೆಗೆ, ಎರಡೂ ಜಡತ್ವದ ಗುಣವನ್ನು ಹೊಂದಿವೆ. ಈ ಕಾರಣದಿಂದಾಗಿ, ಕೆಲವರು ವಿದ್ಯಾವಂತರು ಮನಸ್ಸನ್ನು ಸೂಕ್ಷ್ಮ ಭೌತವಸ್ತು ಎಂದು ಕರೆಯುತ್ತಾರೆ. ಉದಾಹರಣೆಗೆ, ಒಬ್ಬ ವ್ಯಕ್ತಿ ಇಡೀ ದಿನ ದೈಹಿಕ ಕೆಲಸ ಮಾಡುತ್ತಿರಬಹುದು ಎಂದುಕೊಳ್ಳಿ. ಅದರಿಂದ ಅವನ ದೇಹ ಆರೋಗ್ಯವಾಗಿರುತ್ತದೆ. ಆದರೆ ಅಲ್ಪ ಕಾಲದವರೆಗೆ ಪ್ರತಿದಿನವೂ ಮಾಡುವ ದೈಹಿಕ ಕಸರತ್ತಿನ ಪ್ರಭಾವವೇ ಬೇರೆ ರೀತಿಯದು. ಹೋಲಿಸಿದರೆ, ಉಪಾಸನೆಯ ನಿಶ್ಚಿತ ಕಾರ್ಯದ ಪ್ರಭಾವವು, ಒಂದು ರೀತಿಯಲ್ಲಿ ಮನಸ್ಸಿನ ಕಸರತ್ತಿನಂತಿದ್ದು,



ಅದು ಪೂರ್ತಿಯಾಗಿ ಬೇರೆ ರೀತಿಯದಾಗಿರುತ್ತದೆ. ಇತರ ಪಾರಮಾರ್ಥಿಕ ಚಟುವಟಿಕೆಗಳೂ (ಕರ್ಮಗಳು) ಮನಸ್ಸನ್ನು ಕೇಂದ್ರೀಕರಿಸುವುದರಲ್ಲಿ ಸಹಾಯಕವಾಗಿರುತ್ತವೆ. ಕರ್ಮವನ್ನು ತ್ಯಜಿಸಬೇಕು ಎಂದು ಯಾವ ಶಾಸ್ತ್ರದಲ್ಲಿಯೂ ಹೇಳಲಾಗಿಲ್ಲ. ಅದಕ್ಕೆ ಬದಲಾಗಿ, ಜೀವನದಲ್ಲಿ ಒಬ್ಬರ ಅಂತಸ್ತಿಗೆ ತಕ್ಕಂತೆ ಕರ್ಮವನ್ನು ಮಾಡಬೇಕು ಎಂದು ಸಲಹೆ ನೀಡಲಾಗಿದೆ. ಏಕೆಂದರೆ ಕರ್ಮವಿಲ್ಲದೆ, ಯಾವ ರೀತಿಯ ಅಭಿವೃದ್ಧಿಯೂ ಸಾಧ್ಯವಿಲ್ಲ. ಮಾನಸಿಕ ಹಾಗೂ ಭೌತಿಕ ಕೆಲಸ ಮತ್ತು ಪೂಜೆ ಎರಡರಲ್ಲಿಯೂ, ಸೋಮಾರಿತನ ಮತ್ತು ಅಸಹಜತೆ ಅಥವಾ ಅತ್ಯಧಿಕತೆ ಎರಡನ್ನೂ ಕಟ್ಟುನಿಟ್ಟಾಗಿ ತಡೆಯಬೇಕು ಎಂದು ನಮ್ಮ ಧರ್ಮಗ್ರಂಥಗಳು ಹೇಳಿವೆ. ಏಕೆಂದರೆ ಎರಡೂ ಅನಾವಶ್ಯಕವಾಗಿ ಶಕ್ತಿಯನ್ನು ದಂಡಮಾಡಿಸುವುದರೊಂದಿಗೆ ಇತರ ತೊಂದರೆಗಳಿಗೂ ಎಡೆಮಾಡುತ್ತವೆ. ಆದ್ದರಿಂದ ಧರ್ಮ ಆನಂದದತ್ತ ಹುಬ್ಬು ಗಂಟು ಹಾಕುತ್ತದೆ ಎಂದು ತಪ್ಪು ಅಭಿಪ್ರಾಯವಿದೆ. ಅದಕ್ಕೆ ಬದಲಾಗಿ, ಅದು ಎಲ್ಲಾ ನ್ಯಾಯವಾದ ಆನಂದಗಳನ್ನೂ ಅವುಗಳಿಗೆ ಸಂಬಂಧಿಸಲ್ಪಟ್ಟ ಕರ್ತವ್ಯಗಳೊಂದಿಗೆ ಪ್ರೋತ್ಸಾಹಿಸುತ್ತದೆ. ಏಕೆಂದರೆ, ಪರಿಪೂರ್ಣತೆಯ ಹಾದಿಯಲ್ಲಿ ಅವು ವಿಕಸನದ ಪ್ರಾಕೃತಿಕ ವಿಧಾನಕ್ಕೆ ಅತ್ಯಗತ್ಯ. ಕಣ್ಣಿಗೆ ಅಂದವಾಗಿ ಕಂಡುಬಂದು, ದೀರ್ಘಕಾಲಿಕವಾಗಿ ಅದು ಶಾಂತಿಯನ್ನು ಕದಡುವಂಥದ್ದೂ ಮತ್ತು ತೊಂದರೆಗೆ ಈಡು ಮಾಡುವಂಥದ್ದೂ ಆಗಿದ್ದರೆ, ಅದು ಬುದ್ಧಿವಂತಿಕೆ ಅಲ್ಲ. ಧರ್ಮಕ್ಕೆ ಮೊದಲನೆಯ ಮೆಟ್ಟಿಲು ದೂರದರ್ಶಿತ್ವ, ಆದ್ದರಿಂದ ದೂರದರ್ಶಿತ್ವವು ಅತ್ಯಂತ ಅನುಕೂಲಕರ ಆನಂದದ ನಿಬಂಧನೆಗಾಗಿ ನಿಲ್ಲುತ್ತದೆ. ಒಟ್ಟಿನಲ್ಲಿ, ಧರ್ಮ, ವ್ಯಕ್ತಿತ್ವದ ಅಖಂಡ ಅಭಿವೃದ್ಧಿಗಾಗಿ, ಜೀವನದ ಒಂದು ವ್ಯಾಪ್ತವಾದ ದೃಷ್ಟಿಕೋನಕ್ಕಾಗಿ ನಿಲ್ಲುತ್ತದೆ ಮತ್ತು ನಾವು ಸಾಮಾನ್ಯವಾಗಿ ಎದುರಾಗುವ ಅಸಂಬದ್ಧ ರೀತಿಗಾಗಿ ಅಲ್ಲ.

ಈ ರೀತಿಯ ಜೀವನಕ್ಕೆ ಬೇಕಾದ ಅತ್ಯಂತ ಮೂಲ ಷರತ್ತು ಎಂದರೆ, ಒಳ್ಳೆಯ ಸಾಮಾಜಿಕ ವ್ಯವಸ್ಥೆ. ಆದ್ದರಿಂದ ಧರ್ಮ ಜಮೀನಿನ ಸಿವಿಲ್ (ಪೌರ) ಕಾನೂನುಗಳನ್ನೂ ಒಳಗೊಂಡಿರುತ್ತದೆ. ಅದು, ನ್ಯಾಯವಾಗಿ ಹೇಳಬೇಕೆಂದರೆ, ಒಟ್ಟಿನಲ್ಲಿ ಜನರೆಲ್ಲರ ಸುಖ ಮತ್ತು ಕ್ಷೇಮಾಭಿವೃದ್ಧಿಗಾಗಿ ಲಕ್ಷ್ಯವಿಟ್ಟಿರುತ್ತದೆ. ಆಧುನಿಕ ಕಾನೂನುಬದ್ಧ ಭಾವನೆ, ಎಂದರೆ ಯಾವುದಕ್ಕೆ ಪ್ರತಿಯೊಬ್ಬರ ಹಕ್ಕು ಅಥವಾ ಸ್ವಾತಂತ್ರ್ಯ, ಹೊಂದಿಕೆಯಾಗುವಂಥ ಕರ್ತವ್ಯ ಅಥವಾ ಬಾಧ್ಯತೆಗಳೊಂದಿಗೆ ಸಂಬಂಧಿಸಿದೆಯೋ ಆ ಭಾವನೆ, ನಮ್ಮ ಸಾಂಪ್ರದಾಯಿಕ ಧರ್ಮದ ಒಂದು ಮುಖ್ಯ ಅಂಗವೇ ಆಗಿದೆ. ಇತ್ತೀಚೆಗೆ ನಾವು ಹರತಾಳಗಳ ಬಗ್ಗೆ ಮತ್ತು ಒಳ್ಳೆಯ ಸವಲತ್ತುಗಳ ಬಗ್ಗೆಯ ತುರ್ತುಕೋರಿಕೆಗಳ ಬಗ್ಗೆ ಕೇಳುತ್ತೇವೆಯೇ ಹೊರತು, ಒಳ್ಳೆಯ ಸೇವೆಗಳು ಮತ್ತು ಕಾನೂನುಬದ್ಧ ಕರ್ತವ್ಯಗಳ ಬಗ್ಗೆಯ ಆಶ್ವಾಸನೆಗಳ

ಬಗ್ಗೆ ಅಲ್ಲ. ವಿದ್ಯಾರ್ಥಿಗಳೂ ಬಿದ್ದುಹೋಗುತ್ತಿರುವ ಮಟ್ಟಗಳ ಬಗ್ಗೆ ಹರತಾಳ ಮಾಡದೆ, ಅದರ ವಿರುದ್ಧದ ಉದ್ದೇಶಕ್ಕಾಗಿ ಹರತಾಳ ಮಾಡುತ್ತಾರೆ.

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ 'ಹಿಂದು' ಎಂಬ ಪದವೇ ಇಲ್ಲ. ಪದಗಳಾದ ಹಿಂದು (ಪರ್ಷಿಯನ್) ಮತ್ತು ಇಂಡಿಯನ್ (ಗ್ರೀಕ್ ಭಾಷೆಯ 'ಇಂದು') ಎರಡೂ ಒಂದೇ ಅರ್ಥ ಕೊಡುತ್ತವೆ, ಮತ್ತು ಎರಡೂ ಮೊದಲೇ ತಿಳಿಸಿದಂತೆ 'ಸಿಂಧು' ಎಂಬ ದೊಡ್ಡ ಭಾರತೀಯ ನದಿಯ ಹೆಸರಿನಿಂದ ಹೊರಬಂದಿವೆ. ನಮ್ಮ ಹಿಂದಿನವರು ಅವರ ಸಂಸ್ಕೃತಿಯನ್ನು ವಿವಿಧ ಹೆಸರುಗಳಿಂದ, ಎಂದರೆ, ಆರ್ಯಧರ್ಮ, ಸನಾತನ ಧರ್ಮ ಎಂದೆಲ್ಲಾ ಕರೆದಿದ್ದರು. ಅದನ್ನು 'ಸನಾತನ' ಎಂದೂ ಕರೆಯಲಾಗಿತ್ತು. ಏಕೆಂದರೆ, ಮೊದಲೇ ಹೇಳಿದಂತೆ ಅದು ಪ್ರಕೃತಿಯ ಬದಲಾವಣೆಗೆ ಅವಕಾಶವಿಲ್ಲದ ಕಾನೂನುಗಳನ್ನು, ಮನೋವೈಜ್ಞಾನಿಕ ಕಾನೂನುಗಳೂ ಸೇರಿದಂತೆ, ಅದರ ಮೇಲೆ ಉಂಟಾದ ಬಾಹ್ಯ ಪರಿಸ್ಥಿತಿಗಳ ಪ್ರಭಾವವನ್ನೂ ಒಳಗೊಂಡಿತ್ತು.

ಹೀಗೆ ಮೂಲ ಆಧಾರವಾಗಿ ತೊರೆದುಹೋಗಿದ್ದ ಶಾಶ್ವತ ಸೂತ್ರಗಳನ್ನು ಹೊಂದಿದ್ದುದರ ಜೊತೆಗೆ, ಬದಲಾಗುತ್ತಿದ್ದ ಬಾಹ್ಯ ಪರಿಸ್ಥಿತಿಗಳಿಗೆ ಅನುಗುಣವಾಗಿ, ಧರ್ಮವು ವಿವಿಧ ನಿಯಮಾವಳಿಗಳು ಮತ್ತು ಅಭ್ಯಾಸಗಳ ವಿವಿಧ ಆಕಾರಗಳನ್ನೂ ಪಡೆಯಿತು. ಉದಾಹರಣೆಗೆ ಅದು ಮಾನವನ ವೈಯಕ್ತಿಕ ಪಾತ್ರದಲ್ಲಿನ ಬದಲಾವಣೆಗಳನ್ನೂ ಗಮನಿಸಬೇಕಾಗಿತ್ತು. ಅನಂತರ ಅದನ್ನು ಒಂದು ನಿರ್ದಿಷ್ಟ ಕಾಲದಿಂದ (ಕಾಲ) ಮತ್ತು ಪಾರಿಸರಿಕ ಪರಿಸ್ಥಿತಿಗೆ ಗೊತ್ತುಪಾಡುಮಾಡಲಾಗಿತ್ತು (ದೇಶ). ಹೀಗೆ ವೈಯಕ್ತಿಕ ಮಾನವ ಪ್ರಕೃತಿಗೆ ಸಂಬಂಧಿಸಿದಂತೆ, ವಿವಿಧ ವರ್ಗಗಳನ್ನು ಗುಣಕ್ಕೆ ತಕ್ಕಂತೆ ಕಾಣಬಹುದಾಗಿತ್ತು (ಗುಣ), ಕೆಲಸದ ರೀತಿಗೆ ಅನುಗುಣವಾಗಿ (ಕರ್ಮ). ಗುಣಗಳಲ್ಲಿ ಮೂರು ರೀತಿಗಳಿವೆ, ಸತ್ವ (ಸಮಚಿತ್ತ ಮತ್ತು ಪರಿಶುದ್ಧತೆ), ರಜಸ್ (ಚಟುವಟಿಕೆ) ಮತ್ತು ತಮಸ್ (ಜಡತ್ವ). ಇವುಗಳನ್ನು ಎಲ್ಲರಲ್ಲಿಯೂ ವಿವಿಧ ಪ್ರಮಾಣಗಳಲ್ಲಿ ಕಂಡುಕೊಳ್ಳಬಹುದು. ಸತ್ವಗುಣ, ನಿಜವಾದ ಮೇಧಾವಿಗಳಲ್ಲಿ ಮೇಲುಗೈ ಆಗಿರುತ್ತದೆ. ಅವರು ಬುದ್ಧಿವಂತರು, ಚಿಂತನಶೀಲರು ಹಾಗೂ ತತ್ತ್ವ ಜಿಜ್ಞಾಸುಗಳೂ ಆಗಿದ್ದು, ರಾಜರಿಗೆ ಮತ್ತು ಆಳುವವರಿಗೆ ಕೂಡ ಮಾರ್ಗದರ್ಶನ ಮಾಡಬಲ್ಲವರಾಗಿರುತ್ತಾರೆ. ಕ್ರಿಯಾತ್ಮಕರಾದವರು ಹೆಚ್ಚಾಗಿ ರಾಜಸಿಕ ಪ್ರವೃತ್ತಿಯವರಾಗಿರುತ್ತಾರೆ. ಉದಾಹರಣೆಗೆ ಸೈನಿಕರು, ರಾಜ್ಯಭಾರ ಮಾಡುವವರು ಮತ್ತು ಪ್ರತಿಭಾನ್ವಿತರಂತೆ ತೋರುವವರು. ದುರಾದೃಷ್ಟವೋ ಎಂಬಂತೆ ಹೆಚ್ಚಿನವರು ತಾಮಸ ಗುಣದವರು. ಅವರಿಗೆ ಮೂಲ ಚಿಂತನೆ ಅಸಾಧ್ಯವಾದದ್ದಾದ್ದರಿಂದ, ಅವರು ಹೆಚ್ಚಾಗಿ ಅನುಯಾಯಿಗಳಾಗಿಯೇ ಇರುತ್ತಾರೆ. ಈ ರೀತಿಯ ವಿಭಜನೆ, ಆಧುನಿಕ ಭಾವನೆಯಾದ ವರ್ಗಹೀನ ಸಮಾಜದ ಭಾವನೆಗೆ ಹೊಂದುವಂತೆ



ಕಂಡುಬರುವುದಿಲ್ಲ. ತಮ್ಮದು ಮುಂದುವರಿದ ದೇಶಗಳು ಎಂದು ಘೋಷಿಸಿಕೊಳ್ಳುವ ದೇಶಗಳಲ್ಲಿಯೂ ಕೂಡ, ಆರ್ಥಿಕ ಶಕ್ತಿ ಅಥವಾ ರಾಜಕೀಯದ ಶಕ್ತಿ ಆಧಾರಿತ ಅಥವಾ ಇತರ ವಿಷಯಗಳ ಬಗ್ಗೆಯ ವರ್ಗಗಳಿವೆ. ಅದಕ್ಕೆ ಕಾರಣ, ಸಾಮಾಜಿಕವಾಗಿ ಸ್ತರೀಕೃತತೆ ಮಾನವ ಪ್ರಕೃತಿಯ ಒಂದು ಕಾನೂನಾಗಿರುವುದರಿಂದಲೇ.

ಈ ಎಲ್ಲಾ ವಿವಿಧತೆಗಳ ದೃಷ್ಟಿಯಿಂದ ಧರ್ಮದ ಒಂದು ಅನ್ವಯಾತ್ಮಕತೆಯಲ್ಲಿ, ಅಪಾರ ವಿಧಗಳ ಆಕಾರಗಳು, ಶಿಷ್ಟಾಚಾರಗಳು ಮತ್ತು ನಡವಳಿಕೆಯ ಕಾನೂನುಗಳು ಎಲ್ಲವೂ ಇದ್ದು, ಅವುಗಳು ವಿವಿಧ ಪರಿಸ್ಥಿತಿಗಳಿಗೆ ಹೊಂದುವಂತಿವೆ. ಏನೇ ಆದರೂ, ನಮ್ಮ ಪವಿತ್ರಗ್ರಂಥಗಳಲ್ಲಿ, ಕೆಲವು ಸಾಮಾನ್ಯ ಧರ್ಮಗಳಿದ್ದು, ಅವು ಎಲ್ಲರಿಗೂ ಅನ್ವಯಿಸುವಂತಿವೆ: ಸತ್ಯತೆ, ಅಹಿಂಸಾ ಸಿದ್ಧಾಂತ, ಆತ್ಮನಿಯಂತ್ರಣ, ಆರೋಗ್ಯ, ದೇಹ ಹಾಗೂ ಮನಸ್ಸಿನ ಪರಿಶುದ್ಧತೆ, ಸಹಾನುಭೂತಿ, ಆತ್ಮೀಯತೆ, ನೈತಿಕತೆ, ಸರಳತೆ ಇತ್ಯಾದಿ. ದೇಶ, ಕಾಲ ಮತ್ತು ಪಾತ್ರಗಳಿಗೆ ಸಂಬಂಧಿಸಿದಂತೆ ಕೆಲವು ಸಂಕುಚಿತ ಮಿತಿಗಳ ಗುಣಗಳೂ ಇವೆ. ಅವೂ ಪ್ರತಿಯೊಬ್ಬ ವ್ಯಕ್ತಿಯ ಅಥವಾ ವ್ಯಕ್ತಿಗಳ ಗುಣಾವಶ್ಯಕತೆಗಳಿಗೆ ಒದಗಬೇಕಾಗಿರುವುದರಿಂದ, ಮುಖ್ಯವಾದವುಗಳೇ ಎನ್ನಬೇಕಾಗುತ್ತದೆ. ಏಕೆಂದರೆ, ಪ್ರತಿಯೊಬ್ಬ ವ್ಯಕ್ತಿಯೂ ಇತರರಿಗಿಂತ ಬೇರೆಯ ರೀತಿಯವನೇ ಆಗಿರುತ್ತಾನೆ. ಇವೆಲ್ಲವೂ ನಮ್ಮ ಧರ್ಮವನ್ನು ಅತ್ಯಂತ ಹೊಂದಿಕೊಳ್ಳುವಂಥದ್ದಾಗಿಸುತ್ತವೆ. ಈ ಹೊಂದಾಣಿಕೆ ವಿವಿಧ ಜಾತಿಗಳು ಮತ್ತು ಶ್ರದ್ಧೆಗಳನ್ನು ಹುಟ್ಟಿಸುತ್ತದೆ. ಉದಾಹರಣೆಗೆ, ವೈಷ್ಣವರು, ಶಾಕ್ತರು, ಶೈವರು ಇತ್ಯಾದಿ. ವಿವಿಧ ಭಾವನೆಗಳ ಪಂಥಗಳು ಮತ್ತು ಸಿದ್ಧಾಂತಗಳ ಪಂಥಗಳಾದ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಪೂರ್ವಮೀಮಾಂಸೆ, ವೇದಾಂತ ಮುಂತಾದವು ಹುಟ್ಟಿದವಾದರೂ ಎಲ್ಲವೂ ಒಂದೇ ಸತ್ಯವನ್ನು ಅರಸುತ್ತಿದ್ದವು. ಕೆಲವು ಪಂಥಗಳಲ್ಲಿ ವೈಯಕ್ತಿಕ ಭಗವಂತನ ಪರಿಕಲ್ಪನೆ ಇದ್ದರೆ, ಕೆಲವುಗಳಲ್ಲಿ ಹಾಗಿಲ್ಲ. ಪ್ರತಿಯೊಂದು ಪಂಥದ ಅಥವಾ ಶ್ರದ್ಧೆಯ ಉಪಾಸಕರೂ, ನಿಷ್ಠಾತ್ಮಕ ಭಕ್ತಿಯನ್ನು ಹೊಂದಿದ್ದು, ತಮ್ಮ ಸಿದ್ಧಾಂತವೇ ಅತ್ಯಮೂಲ್ಯದ್ದೆಂದು ಭಾವಿಸುತ್ತಾರೆ. ಇತರರ ತಾಯಿಯ ಬಗ್ಗೆ ಯಾವ ವಿರೋಧಾತ್ಮಕ ಭಾವನೆಯೂ ಇಲ್ಲದಿದ್ದರೂ, ತನ್ನ ತಾಯಿಯೇ ಅತ್ಯುತ್ತಮ ವ್ಯಕ್ತಿ ಎಂದು ಮನುಷ್ಯ ಚಿಂತಿಸುವುದಿಲ್ಲವೇ, ಹಾಗೆ.

ಸಂತರು ಮತ್ತು ಅವಧೂತರು ಒಂದು ಸೂತ್ರವನ್ನು ಸ್ಪಷ್ಟೀಕರಿಸಿ, ಕ್ರಿಯಾತ್ಮಕ ಕಾರಣಗಳಿಗಾಗಿ ವ್ಯಕ್ತಿಯು ತನ್ನ ಸ್ವಂತದ ಶ್ರದ್ಧೆ ಮತ್ತು ಧ್ಯೇಯಗಳಿಗೆ ಅಂಟಿಕೊಂಡಿರಬೇಕು, ಅಥವಾ ಒಂದೇ ಶಿಸ್ತುಕ್ರಮಕ್ಕೆ ಅಂಟಿಕೊಂಡಿರಬೇಕು ಎಂದಿದ್ದಾರೆ (ಇಲ್ಲದಿದ್ದರೆ, ಅನಾವಶ್ಯಕವಾಗಿ ಶಕ್ತಿಯು ದಂಡವಾಗುತ್ತದೆ). ಆದರೂ ವ್ಯಕ್ತಿಯು ವಿಚಾರಕ್ಕೆ ಎಡೆಕೊಡದ ಸಿದ್ಧಾಂತಿ ಆಗಿರಬಾರದು ಅಥವಾ ಇತರರ ಧ್ಯೇಯಗಳು ಹಾಗೂ ಶ್ರದ್ಧೆಗಳನ್ನು ಅವಹೇಳನ ಮಾಡಬಾರದು. ಏಕೆಂದರೆ, ಪ್ರತಿಯೊಂದು ಧರ್ಮವೂ

ಸತ್ಯದ ಕಡೆಗಿನ ಮಾರ್ಗವೇ ಹೌದು (ಇದನ್ನು ಬೋಧಿಸಿದ ಶ್ರೀ ರಾಮಕೃಷ್ಣರ ಸಂದೇಶವನ್ನು ಸ್ವಾಮಿ ವಿವೇಕಾನಂದರು ಎತ್ತಿಹಿಡಿದಿದ್ದಾರೆ). ಇದು ಆಧುನಿಕ ವಿಜ್ಞಾನಿಗಳು ಮತ್ತು ನಂಬಿಕೆ ಇಲ್ಲದವರೂ ಸೇರಿದಂತೆ ಎಲ್ಲಾ ವಿವೇಕಯುಕ್ತರಿಗೂ ಸಮಾನವಾಗಿ ಹೊಂದುತ್ತದೆ. ಏಕೆಂದರೆ ಅವರೆಲ್ಲರೂ ಸಾಂಪ್ರದಾಯಿಕ ಭಾರತೀಯ ಪದ್ಧತಿಯಲ್ಲಿ ಹೊಂದಿಕೊಂಡು, ಮೊದಲು ಹೇಳಲ್ಪಟ್ಟ ಧ್ಯೇಯಗಳ ವಿಚಾರಕ್ಕೆಡೆಕೊಡದ ತಾತ್ತ್ವಿಕರೂ ಮತ್ತು ವಿಧೇಯರೂ ಆಗಿರುವವರೆಗೆ, ಇದೆಲ್ಲವೂ ಸಾಧ್ಯ. ಒಬ್ಬ ವಿವೇಕ ಸಂಪನ್ನನು, ಉದಾಹರಣೆಗೆ, ಕೆಲವು ಸಂಪ್ರದಾಯಗಳು ತನ್ನ ರುಚಿಗೆ ಹೊಂದುವುದಿಲ್ಲ ಎಂದುಕೊಂಡರೆ, ಅವನಿಗೆ ಅವುಗಳನ್ನು ಮಾಡದಿರುವುದಕ್ಕೆ ಸ್ವಾತಂತ್ರ್ಯವೂ ಇದೆ. ಆದರೆ ಅವುಗಳ ಬಗ್ಗೆಯ ಮನೋವೈಜ್ಞಾನಿಕ ಆಧಾರದ ಮೇಲಿನ ಆಳವಾದ ಅರಿವನ್ನು ಮೂಡಿಸಿಕೊಳ್ಳದೆ, ಅವನಿಗೆ ಅವುಗಳ ಬಗ್ಗೆ ತೀರ್ಮಾನ ಘೋಷಿಸುವ ಯಾವ ಹಕ್ಕೂ ಇಲ್ಲ. ಹಾಗೆ ನೋಡಿದರೆ, ವಿಧಿವತ್ತಾದ ನಡವಳಿಕಗಳ ಧರ್ಮ ಅವರಿಗಲ್ಲವೇ ಅಲ್ಲ. ಅವರು, ಜ್ಞಾನದ ಬಗ್ಗೆಯ ನಯವಿಲ್ಲದ ವಿಚಾರಶಕ್ತಿಯ ಜ್ಞಾನದ ಬಗ್ಗೆ ಮಾತ್ರ ಆಸಕ್ತಿ ವಹಿಸಿ, ಇತರ ತರ್ಕವಿಧಾನದ ಶಾಸ್ತ್ರಗ್ರಂಥಗಳ ಬಗ್ಗೆಯೂ ಆಸಕ್ತಿ ವಹಿಸಬೇಕು. ಹೀಗೆ ಸಾಮಾಜಿಕ ಹೊಂದಾಣಿಕೆಯ ಕರಾರುಗಳಲ್ಲಿ ಒಂದು, ಏನೆಂದರೆ, ವಿವೇಕಯುಕ್ತರದೂ ಸೇರಿದಂತೆ ಪ್ರತಿಯೊಂದು ಗುಂಪು, ಜಾತಿ ಅಥವಾ ಶ್ರದ್ಧೆಯೂ, ತನ್ನ ಸ್ವಂತ ಧ್ಯೇಯಕ್ಕೆ ಸತ್ಯವಾಗಿರಬೇಕು ಮತ್ತು ಇಂದು ನಾವು ಎಲ್ಲೆಲ್ಲಿಯೂ ಕಾಣುವಂಥ ಅಲ್ಪದ ಸ್ವಂತ ವಿಷಯಗಳಿಗೂ ಜಗಳವಾಡುತ್ತಾ, ಪ್ರತಿಯೊಬ್ಬರೂ ಆಧ್ಯಾತ್ಮಿಕತೆಯ ಒಂದು ಕಣ್ಣಿಗೆ ಕಾಣದಂಥ ಸೂತ್ರದ ಮೂಲಕ ಜೊತೆಗೂಡಿರುವೆವು ಎಂಬುದನ್ನು ಮರೆತು, ತೊಂದರೆ ಪಡುವುದಕ್ಕೆ ಬದಲಾಗಿ, ಇತರರ ದೃಷ್ಟಿಕೋನಗಳನ್ನು ಮೆಚ್ಚುವಂತಿರಬೇಕು.

ಎಲ್ಲವನ್ನೂ ಸಂಕ್ಷೇಪಿಸಿ ಹೇಳಬೇಕಾದರೆ, ಸಾಂಪ್ರದಾಯಿಕ ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆಯನ್ನು ತನ್ನ ಆಧಾರವಾಗಿಟ್ಟುಕೊಂಡು, ಒಂದು ಅಖಂಡಶಿಲೆಯ ಸಂಸ್ಕೃತಿಯಂತೆ, ಹೊಂದಾಣಿಕೆಯನ್ನು ಹೇರಲು ಪ್ರಯತ್ನಿಸುವುದಿಲ್ಲ. ಎಲ್ಲಾ ಜನರೂ ಸಮಾನ ರೂಪದಲ್ಲಿ ಯೋಗ್ಯರಲ್ಲ, ಕಡೆಗೆ ಸಾಧನೆಯ ಬಗ್ಗೆ ಅಥವಾ ಎಲ್ಲಾ ರೀತಿಗಳ ಕೆಲಸಗಳ ಬಗ್ಗೆ ಒಪ್ಪುವವರೂ ಅಲ್ಲ ಎಂಬ ವಿಷಯವನ್ನು ಅದು ಗುರುತಿಸುತ್ತದೆ. ಆದ್ದರಿಂದ ವಿವಿಧ ಮಟ್ಟಗಳ ಜನರಿಗೆ, ಅವರವರ ಅಭಿರುಚಿಗಳು, ಪ್ರಾಕೃತಿಕ ಮನೋಧರ್ಮ ಅಥವಾ ಗುಣಗಳಿಗನುಸಾರವಾಗಿ ವಿವಿಧ ಕರ್ತವ್ಯಗಳನ್ನು ನಿಗದಿಪಡಿಸಲು, ಒಂದು ನಡವಳಿಕೆಯ ನಿಯಮಾವಳಿಯ ಆವಶ್ಯಕತೆ ಉಂಟಾಗುತ್ತದೆ. ಪ್ರತಿಯೊಂದು ವರ್ಗವೂ, ವಿಶ್ವದ ಐಕಮತ್ಯಕ್ಕೆ ಅಥವಾ ಸಾಮಾನ್ಯ ಏಳಿಗೆಗೆ, ತನ್ನಿಂದ ಆಗುವಷ್ಟನ್ನೂ ನೀಡುತ್ತದೆ. ಅದಕ್ಕೆ ಹಿರಿಮೆ ಅಥವಾ ಕೀಳುತನದ ಬಗ್ಗೆ ಏನೂ ಚಿಂತೆ ಇಲ್ಲ. ಅದು ಒಂದು ಸಂಗೀತದ ವಾದ್ಯದಂತಿದ್ದು, ಅನೇಕ ತಂತಿಗಳನ್ನು



ಹೊಂದಿದ್ದರೂ, ಒಂದೇ ಮಾಧುರ್ಯವನ್ನು ಸದಾ ನೀಡುತ್ತಿರುತ್ತದೆ. ಜೀವನದಲ್ಲಿ ವ್ಯಕ್ತಿಯ ಸ್ಥಿತಿ ಏನೇ ಇದ್ದರೂ, ಒಬ್ಬರ ವೈಯಕ್ತಿಕ ಧರ್ಮವನ್ನು ಸೂಕ್ತವಾಗಿ ಪಾಲಿಸಿದರೆ, ಅದು ಸದಾ ಬೆಳವಣಿಗೆ ಮತ್ತು ಆತ್ಮವಿಕಸನಕ್ಕೆ ಸಹಾಯ ಮಾಡುತ್ತದೆ. ಒಟ್ಟಿನಲ್ಲಿ, "ಸಾಂಪ್ರದಾಯಿಕ ಸಾಮಾಜಿಕ ಮಹಾಸೌಧ, ಆಧ್ಯಾತ್ಮಿಕ ಸಂಪತ್ತಿನ ಸ್ಥಿತಿಯ ಕಾನೂನಿನ ಪ್ರಕಾರವೇ ಕಟ್ಟಲ್ಪಡುತ್ತದೆ" ಎಂದು ಭಾರತದ ಡಿವೈನ್ ಲೈಫ್ ಸೊಸೈಟಿಯ ಸ್ವಾಮಿ ಶಿವಾನಂದರು ಹೇಳಿದ್ದಾರೆ.

ಈ ದೇಶದಲ್ಲಿ ಸಾಮಾಜಿಕ ನೀತಿಶಾಸ್ತ್ರಗಳ ಸಾಂಪ್ರದಾಯಿಕ ಭಾವನೆ, ವೇಗವಾಗಿ ಮಾಯವಾಗುತ್ತಿರುವುದು, ಆಧುನಿಕತೆಯ ಹೆಸರಿನಲ್ಲಿ ನಾವು ಧರ್ಮಪಥದಿಂದ ಅಡ್ಡದಾರಿಗೆ ಹೋಗುತ್ತಿರುವುದರಿಂದಲೇ ಎಂಬುದು ಆಶ್ಚರ್ಯವೇನಲ್ಲ.

ಈ ಗ್ರಹದಲ್ಲಿರುವ ಇತರ ಪ್ರಾಣಿವರ್ಗಗಳನ್ನು ಮಾನವ ವರ್ಗ, ಅಂತಿಮವಾಗಿ, ತಮ್ಮಲ್ಲಿರುವ ಯೋಗ್ಯತೆಯಿಂದ ಎಂದರೆ ಸಂತತಿಯಿಂದ ಸಂತತಿಗೆ ಜ್ಞಾನವನ್ನು ಮತ್ತು ವಿಷಯಗಳನ್ನು ಪ್ರಸಾರ ಮಾಡುವ ಯೋಗ್ಯತೆಯಿಂದ, ಎಲ್ಲರನ್ನೂ ನಿಯಂತ್ರಣದಲ್ಲಿಟ್ಟುಕೊಳ್ಳುವುದರಲ್ಲಿ ಗೆಲ್ಲಬಹುದು ಎಂಬುದನ್ನು ಗಮನಿಸೋಣ. ಈ ಯೋಗ್ಯತೆಯು ಮನುಷ್ಯನಿಗೆ ತನ್ನ ಮಮತೆಯಿಂದ ಪೋಷಿಸಿಕೊಂಡ ನಾಗರಿಕತೆ ಮತ್ತು ಸಂಸ್ಕೃತಿಯನ್ನು ನೀಡಿದೆ. ಆದ್ದರಿಂದ, ಹೆಸರನ್ನು ಗಳಿಸಿಕೊಂಡ ಯಾವ ಮಾನವ ವರ್ಗವೂ, ತನ್ನ ಸ್ವಂತ ಆನುವಂಶಿಕ ಹಾಗೂ ಸಾಂಪ್ರದಾಯಿಕ ಸಂಸ್ಕೃತಿಯನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ, ಅದು, ಜ್ಞಾನದ, ಪ್ರಜ್ಞೆಯ ಹಾಗೂ ಶತಮಾನಗಳಿಂದ ಹಿಂದಿನ ಸಂತತಿಗಳ ಜನರು ಕೂಡಿಟ್ಟ ಅನುಭವ. ಅದನ್ನು ಭಾರತದಲ್ಲಿ ಸನಾತನ ಧರ್ಮ ಎನ್ನುತ್ತಾರೆ ಮತ್ತು ಅದನ್ನು ವ್ಯಾಖ್ಯಾನಿಸುವ ಸಾಹಿತ್ಯವೂ ಶಾಸ್ತ್ರಕ್ಕೆ ಸಮನಾಗಿರುತ್ತದೆ. ಆದ್ದರಿಂದ ಪರಿಸ್ಥಿತಿಗಳ ಬದಲಾವಣೆಗಳಿಂದ, ಕಾಲದ ಬದಲಾವಣೆಯಿಂದ ಮುಖ್ಯವಾಗಿ, ಸದ್ಯದ ಯುಗದ ತಂತ್ರಜ್ಞಾನದಲ್ಲಿ ಕೆಲವು ಹಳೆಯ ರೀತಿಗಳು ಮತ್ತು ಶಿಷ್ಟಾಚಾರಗಳು ಧರ್ಮದ ಸ್ಥಿತಿಗೆ ಅನುಗುಣವಾಗಿ ಕೆಲವು ಬದಲಾವಣೆಗಳನ್ನು ಬಯಸಬಹುದು. ಅಂಥ ಬದಲಾವಣೆಗಳಿಗೆ, ಮಾರ್ಗದರ್ಶನವನ್ನು ನೀಡುವವರು ಸಂತರೇ. ಏಕೆಂದರೆ, ನಮ್ಮ ಆನುವಂಶಿಕ ಪ್ರಾಪ್ತಿ ಮತ್ತು ಸಂಸ್ಕೃತಿಯ ಬಗ್ಗೆ ಅವರಿಗೆ ಅನುಭೂತಿ ಇರುತ್ತದೆ. ಅತ್ಯಂತ ಮುಖ್ಯವಾದ ಆಧಾರಯುತ ಪಾತ್ರವನ್ನು ನಿರ್ವಹಿಸಲು ವಿದ್ಯಾವಂತರು ಸಿದ್ಧರಾಗಿದ್ದಾರೆ. ಅವೈಜ್ಞಾನಿಕ ಪ್ರಯತ್ನಗಳು, ಎಷ್ಟೇ ಅನುಗ್ರಹಪೂರ್ವಕದ್ದಾಗಿದ್ದರೂ, ಅವುಗಳನ್ನು ಮಾಡುವ ಆಧುನಿಕ ಮುಖಂಡರು ಎನ್ನಿಸಿಕೊಂಡವರು ಎಂದರೆ, ಹೆಸರು, ಯಶಸ್ಸು ಮತ್ತು ಚರಿತ್ರೆಯಲ್ಲಿನ ಒಂದು ಸ್ಥಳದ ಮೇಲೆ ಕಣ್ಣಿಟ್ಟಿರುವವರು, ಗೆಲ್ಲುವುದೇ ಇಲ್ಲ– ಯಾವಾಗ ಪಾಶ್ಚಾತ್ಯ ಭಾವನೆಗಳನ್ನು ಜನರ ಮೇಲೆ ಹೊರಿಸಲಾಗುವುದೋ,

ಎಂದರೆ ಅವರ ಮೌಲ್ಯ ಸಂಚಯ ಪ್ರಾಕೃತಿಕ ಆನುವಂಶಿಕ ಬಳುವಳಿಗಳನ್ನು ಕಡೆಗಾಣಿಸಿ, ಜನರ ಮೇಲೆ ಹೊರಿಸಲಾಗುವುದೋ, ಆಗ ಪ್ರಯತ್ನಗಳು ಅವೈಜ್ಞಾನಿಕವಾಗುತ್ತವೆ. ಅಂಥ ಪ್ರಯತ್ನಗಳು ಹಿಡಿಗೂಟ ಎತ್ತದೆ ದೋಣಿಯನ್ನು ಹಾಯಿಸಲು ಪ್ರಯತ್ನಪಟ್ಟಂತೆ ಆಗುತ್ತವೆ. ಆಧುನಿಕತೆಯ ಸರ್ವಶ್ರೇಷ್ಠ ಸಮರ್ಥಕರು ಸಾಂಪ್ರದಾಯಿಕ ಧರ್ಮವನ್ನು ಪೂರ್ಣವಾಗಿ ತ್ಯಜಿಸಿ ಎಂದು ಸೂಚಿಸುವುದಂತೂ, ವಿನಾಶಕಾರಿಯೇ, ಹೌದು. ಏಕೆಂದರೆ ಅದು ಇಂಗ್ಲಿಷಿನ ಒಂದು ಪ್ರಸಿದ್ಧ ಹೇಳಿಕೆಯಂತೆ, ಎಂದರೆ, ಮಗುವಿನೊಂದಿಗೆ ಸ್ನಾನದ ನೀರನ್ನು ಬಚ್ಚಲಿಗೆ ಚೆಲ್ಲಿದಂತಾಗುತ್ತದೆ.

**ಪ್ರತೀಕತೆ**

ಒಳ್ಳೆಯ ಆಶಯಗಳನ್ನು ಹೊಂದಿರುವವರಲ್ಲಿಯೂ ಒಂದು ಸಾಮಾನ್ಯವಾದ ತಪ್ಪು ಭಾವನೆ ಇದೆ. ನಮ್ಮ ಧರ್ಮಶಾಸ್ತ್ರಾಧಾರಿತ ಗ್ರಂಥಗಳಲ್ಲಿ ಕಲ್ಪಿತ ಕಥೆಗಳು ಮತ್ತು ನಿರರ್ಥಕ ವಿಷಯಗಳೇ ತುಂಬಿವೆ ಎಂದಿದೆ. ಅವು ಹೊರಗಿನಿಂದ ಹಾಗೆ ಕಂಡುಬಂದರೂ, ನಿಜವಾಗಿಯೂ ಅವು ಸೂಕ್ಷ್ಮವಾಗಿ ಮನೋವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಅಪೂರ್ವ ಘಟನೆಗಳು.

ಕೋಪವನ್ನು ಚಿತ್ರಿಸಲು ಹೇಳಿದರೆ, ವ್ಯಕ್ತಿಯ ಕೆಂಪು ಕಣ್ಣುಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಾರೆ. ಕೋಪದಿಂದ ಸಿಂಡರಿಸಿಕೊಂಡ ಮುಖ ಮತ್ತೆ ಯಾವುದಾದರೂ ಕೋಪವನ್ನು ಸೂಚಿಸುವ ಆಕಾರಹೀನ ಭಾವನೆಯೊಂದಿಗೆ ಸಂಬಂಧಿಸಿದೆ. ಅದೇ ರೀತಿಯಲ್ಲಿ ದೈಹಿಕ ಭಂಗಿಗಳಿಂದಲ್ಲದೆ ಅಥವಾ ಯಾವುದಾದರೂ ಉಡುಗೊರೆಗಳನ್ನು ಬದಲಾಯಿಸಿಕೊಳ್ಳದೆ ತಮ್ಮ ಪ್ರೀತಿಗಳನ್ನು ವ್ಯಕ್ತಪಡಿಸಲಾಗುವುದಿಲ್ಲ, ಯಾರಿಂದಲೂ. ಆದ್ದರಿಂದ ಚಿಹ್ನೆಗಳ ವಿಶ್ವದಾದ್ಯಂತದ ಬಳಕೆ, ಸಾಂಸ್ಕೃತಿಕ ಸಮಾಜಗಳಲ್ಲಿ ಮತ್ತು ಮುಂದುವರಿದ ಸಾಹಿತ್ಯಗಳಲ್ಲಿ ಚಾಲ್ತಿಯಲ್ಲಿರುತ್ತವೆ. ನಮ್ಮ ಪೌರಾಣಿಕ ಸಾಹಿತ್ಯವೂ ಇದಕ್ಕಿಂತ ಬದಲಾದದ್ದೇನಲ್ಲ. ದೈಹಿಕ ಚಿಹ್ನೆಗಳ ಸಹಾಯವಿಲ್ಲದೆ, ಸೂಕ್ಷ್ಮವಾದ ಮನೋವೈಜ್ಞಾನಿಕ ವಿನಿಮಯಗಳು ಮತ್ತು ಆಧ್ಯಾತ್ಮಿಕ ಅನುಭವಗಳ ಬಗ್ಗೆ ತಿಳಿಸುವುದು ಕ್ರಿಯಾತ್ಮಕವಾಗಿ ಅಸಾಧ್ಯದ್ದೇ. ಅವುಗಳ ಬಗ್ಗೆಯೇ ಪುರಾಣಗಳು ಮುಖ್ಯವಾಗಿ ಸಂಬಂಧಿಸಿರುವುದು.

ನನ್ನ ಜೊತೆಗಾರನಿಗೆ ನಾನು. "ಈಗ ಯಜಮಾನರ ಬಳಿಗೆ ಹೋಗಬೇಡ. ಅವರು ಹುಲಿಯಂತೆ ಕುಳಿತಿದ್ದಾರೆ. ನೀನು ಹೋದರೆ ನಿನ್ನ ಮೇಲೇ ಬೀಳುತ್ತಾರೆ" ಎಂದು ಹೇಳಿದರೆ, ಅವನು ನನ್ನ ಪ್ರತಿಯೊಂದು ಪದದ ಅರ್ಥವನ್ನೂ ಗಮನಿಸಬೇಕಿಲ್ಲ. ಬದಲಿಗೆ ತನ್ನ ಪ್ರಜ್ಞೆ ಬಳಸಬೇಕು, ವ್ಯವಹಾರ ಜ್ಞಾನ ಬಳಸಬೇಕು. ಅದೇ ರೀತಿಯಲ್ಲಿ ಭಾರತದ ಪುರಾಣಗಳನ್ನೂ ಕೂಡ ವ್ಯವಹಾರಜ್ಞಾನಕ್ಕೆ ಬಳಸಬೇಕು ಮತ್ತು



ಎಚ್ಚರಿಕೆಯಿಂದ ವ್ಯಾಖ್ಯಾನಿಸಬೇಕು. ಆಗ ನಾವು, ಮಾನವನ ಮನಃಶಾಸ್ತ್ರದ ಬಗ್ಗೆ ಒಂದು ಆಳವಾದ ಜ್ಞಾನ ಮತ್ತು ಸಂತರ ಗುಣಗಳನ್ನು ಹೊಂದಿದ್ದ ಲೇಖಕರ ಪ್ರಾಮುಖ್ಯವನ್ನು ಮನಗಾಣಬಹುದು. ಓದುವಾಗ ನಮಗೆ ಒಬ್ಬ ಪ್ರೌಢ ಮತ್ತು ಅನುಭವಸ್ಥ ವ್ಯಕ್ತಿಯ ಮಾರ್ಗದರ್ಶನ ಸಹಾಯಕವಾಗಿರುತ್ತದೆ. ಏಕೆಂದರೆ ಅಲ್ಲಿ ಬಳಸಲಾಗಿರುವ ಚಿಹ್ನೆಗಳು, ನಮ್ಮಂಥ ಸ್ಪಷ್ಟವಾಗಿ ಬದಲಾಗಿರುವ ಪರಿಸರದಲ್ಲಿರುವವರಿಗೆ, ಅಜ್ಞಾತದ್ದಾಗಿರಬಹುದು.

ಒಂದು ಉದಾಹರಣೆ ಇಲ್ಲಿದೆ:

ಪುರಾಣಗಳಲ್ಲಿ ದೇವತೆಗಳು ಮತ್ತು ಅಸುರರ ನಡುವೆ ನಡೆದ ಯುದ್ಧಗಳ ವಿವರಣೆಗಳಿವೆ. ಅವುಗಳು ಭೀತಿ, ಪ್ರಚೋದನೆ, ಜಯ ಮತ್ತು ಸೋಲುಗಳನ್ನು ವರ್ಣಿಸಿವೆ. ಹಾಗೆ ನೋಡಿದರೆ ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ಜಾತಿ ಅಥವಾ ಮಾನವ ಸಮಾಜವೇ ದಿವ್ಯ ಶಕ್ತಿಗಳು ಮತ್ತು ರಾಕ್ಷಸಗಣಗಳ ನಡುವಿನ ಹೋರಾಟದ ಪೀಠ. ದೇವತೆಗಳು ಮತ್ತು ಅಸುರರು ಅದೇ ಸೃಷ್ಟಿಕರ್ತನ ಮಕ್ಕಳಾಗಿದ್ದು, ಜೊತೆಜೊತೆಯಲ್ಲೇ ಇರುತ್ತಾರೆ. ಅಸುರರ ತಾಯಿ ದಿತಿ (ಆ ಸಂಸ್ಕೃತ ಪದದ ಅರ್ಥ ಪ್ರತ್ಯೇಕಿಸುವವಳು, ಅಸಂಬದ್ಧತೆ ಉಂಟುಮಾಡುವವಳು) ಮತ್ತು ದೇವತೆಗಳ ತಾಯಿ ಅದಿತಿ (ಎಂದರೆ, ದಿತಿಗೆ ವಿರುದ್ಧ ಪದ). ಹೀಗೆ ದಿತಿಯ ಗಂಡುಮಕ್ಕಳು, ತಮ್ಮ ಸಂಕುಚಿತತೆ ಮತ್ತು ಅಹಂಭಾವದಿಂದಾಗಿ, ಸೃಷ್ಟಿಯನ್ನು ಅಸಂಬದ್ಧವಾಗಿ ಎಂದರೆ, ಹರಕು ಮುರುಕಾದದ್ದಾಗಿ ನೋಡಲು ಇಷ್ಟ ಪಡುತ್ತಾರೆಯೇ ಹೊರತು, ಬೇರೆ ರೀತಿಯಲ್ಲಲ್ಲ. ತಮ್ಮ ವಿವಿಧ ರೀತಿಗಳ ಆನಂದಕ್ಕಾಗಿ ಅವರು ಒಂದರಿಂದ ಮತ್ತೊಂದು ವಸ್ತುವಿನತ್ತ, ಓಡುತ್ತಿರುತ್ತಾರೆಯೇ ಹೊರತು ಬೇರೆ ಅಲ್ಲ. ನಿಜವಾದ ತೃಪ್ತಿ ಪಡೆಯುವುದಕ್ಕೆ ಬದಲಾಗಿ, ಅವರು ತಮ್ಮ ಆನಂದದತ್ತದ ದುರಾಸೆ ಹೆಚ್ಚಿಸಿಕೊಳ್ಳುತ್ತಾರೆ ಮತ್ತು ಆ ರೀತಿಯಲ್ಲಿ ಒಂದಲ್ಲ ಒಂದು ತಪ್ಪನ್ನು ಮಾಡುತ್ತಲೇ ಇರುತ್ತಾರೆ. ಕಡೆಗೆ ನಾಶವಾಗುತ್ತಾರೆ. ದೇವತೆಗಳು (ಆ ದೇವತೆ ಎಂಬ ಪದದ ಅರ್ಥ ಸಂಸ್ಕೃತದಲ್ಲಿ ತೇಜಸ್ಸು, ಪ್ರಕಾಶ, ಅರಿವು ಎಂದಿರುತ್ತದೆ) ಅದಿತಿಯ ಮಕ್ಕಳು, ವಿರುದ್ಧ ಮಾರ್ಗದಲ್ಲಿ ಕ್ರಮಿಸುತ್ತರೆ. ಏಕೆಂದರೆ ಅವರು, ಪ್ರಕಾಶ, ಜ್ಞಾನ ಮತ್ತು ತಿಳಿವಳಿಕೆಯನ್ನು ಸಮರ್ಥಿಸುತ್ತಾರೆ. ಈ ಜಗಳದಲ್ಲಿ ಎಂದರೆ ಸಂಕುಚಿತ ಮನೋಭಾವ ಮತ್ತು ದಿವ್ಯತ್ವದ ಹೋರಾಟದಲ್ಲಿ, ಜಯ ಸಾಧಿಸುವುದು ದಿವ್ಯತ್ವವೇ. ಆದರೆ, ಕೆಲವು ಸಲ ಸಮಾಜ ಹಾಗೂ ಮಾನವನಲ್ಲಿರುವ ಅಸುರ ಗೆಲ್ಲುತ್ತಾನೆ. ಅತ್ಯಲ್ಪ ಕಾಲದ ಗೆಲುವಿನಿಂದ ಕುಡಿದವನಂತಾದ, ಮನುಷ್ಯನ ಸಂಕುಚಿತ ದೃಷ್ಟಿ ಮತ್ತು ಅಸ್ಮಿತೆಗಳು, ಪ್ರಕೃತಿಯ ಮೂಲ ಕಾನೂನುಗಳನ್ನೇ ಕಡೆಗಾಣಿಸುತ್ತವೆ. ಎಂದರೆ ಧರ್ಮವನ್ನೇ ಕಡೆಗಾಣಿಸುತ್ತವೆ. ಮೈಸೂರಿನ ಚಾಮುಂಡಿಬೆಟ್ಟದ ಮೇಲೆ ತೋರಿಸಿರುವ ಮಹಿಷಾಸುರನ ಅದೃಷ್ಟದಂತೆ, ಅಸುರನ ಅಂತಿಮ ಅದೃಷ್ಟ ಎಲ್ಲರಿಗೂ

ತಿಳಿದದ್ದೇ. (ಅಂಥ ಮೂರ್ತಿಗಳನ್ನು ಎಂದರೆ ದಿವ್ಯ ಮಾತೆ ದುರ್ಗೆ ಕರಾಳ ಮುಖದ ಅಸುರನನ್ನು ಕೊಲ್ಲುತ್ತಿರುವಂತೆ ಸೂಚಿಸಿರುವುದನ್ನು ಬಂಗಾಳದಲ್ಲಿ ಪ್ರತಿ ವರ್ಷವೂ ಶರತ್ಕಾಲದಲ್ಲಿ ಪೂಜಿಸುತ್ತಾರೆ.)

ಅದನ್ನೇ ಬೇರೆ ರೀತಿಯಲ್ಲಿ ನೋಡುವುದು ಎಂದರೆ, ವಿವಿಧ ದೇವಿಯರು ಮತ್ತು ದೇವರುಗಳನ್ನು ಮನೋವೈಜ್ಞಾನಿಕ ಶಕ್ತಿಗಳ ಪೀಠಗಳನ್ನಾಗಿ ಪರಿಗಣಿಸಿ, ಸೂಕ್ತ ರೀತಿಗಳ ಪೂಜೆಗಳ ಮುಖಾಂತರ ಅವುಗಳನ್ನು ಜಾಗೃತಗೊಳಿಸಿಕೊಳ್ಳುವುದು. ದೇವರುಗಳನ್ನು ಮತ್ತು ದೇವಿಯರನ್ನು ಪೂಜಿಸುವವರು, ಅವರನ್ನು ಕೇವಲ ಮೂರ್ತಿಗಳೆಂದು ಭಾವಿಸುವುದಿಲ್ಲವೆಂಬುದನ್ನು ಗಮನಿಸಿ. ಪೂಜೆಯ ವಿಗ್ರಹಗಳನ್ನು ನಿಜವಾದ ಜೀವಿಸುತ್ತಿರುವ ಅಸ್ತಿತ್ವಗಳೆಂದೇ ಭಾವಿಸಿ. ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾರೆಂದು ಭಾವಿಸಲಾಗುತ್ತದೆ. ಭಾರತೀಯ ಸಂಸ್ಕೃತಿಯ ದೃಷ್ಟಿಯ ಸರಳತೆಯಿಂದ ವಿಗ್ರಹಗಳಲ್ಲಿ ನಂಬಿಕೆ ಇರದ ಪರಿಜ್ಞಾನದವನು, ಪೂಜೆ ಮಾಡದೆ ಇರಬಹುದಾದ ಸ್ವಾತಂತ್ರ್ಯವನ್ನೂ ಹೊಂದಿರುತ್ತಾನೆ. ಆದರೆ ಮೊದಲೇ ಸೂಚಿಸಿದಂತೆ ಅವನು ಶ್ರದ್ಧೆಯುಳ್ಳ ಭಕ್ತರ ನಿಜವಾದ ಶ್ರದ್ಧೆ ಹಾಗೂ ಹೃತ್ಪೂರ್ವಕ ಭಕ್ತಿಯನ್ನು ಅಲ್ಲಗಳೆಯಕೂಡದು.

**ಪ್ರಾಪಂಚಿಕತೆ**

ನಮ್ಮ ದೇಶದಲ್ಲಿ ಸಾಕಷ್ಟು ಧರ್ಮಗಳು ಮತ್ತು ಧಾರ್ಮಿಕ ಮತಾಚರಣೆಗಳೂ ಇರುವುದರಿಂದ, ಪ್ರಾಪಂಚಿಕತೆಯನ್ನು ಒಂದು ರಾಜ್ಯದ ಕಾರ್ಯನೀತಿಯನ್ನಾಗಿ ಅಳವಡಿಸಿಕೊಳ್ಳುವುದು ಪ್ರಾಕೃತಿಕವೇ ಹೌದು. ಅದರರ್ಥ, ಧಾರ್ಮಿಕ ವಿವೇಚನೆಗಳು, ರಾಜ್ಯದ ವಿಷಯಗಳ ನಿಭಾವಣೆಯಲ್ಲಿ ಸೇರಿಕೊಳ್ಳುವುದಿಲ್ಲ ಎಂದೇ ಆಗುತ್ತದೆ. ಜೊತೆಗೆ ಜನರ ನ್ಯಾಯಬದ್ಧ ಧಾರ್ಮಿಕ ಅನ್ವೇಷಣೆಗಳ ಬಗ್ಗೆಯೂ, ರಾಜ್ಯವು ತಲೆಹಾಕದೆ ತಟಸ್ಥವಾಗಿ ಇರುತ್ತದೆ. ಹಾಗಾಗಿ ನಮ್ಮ ಸಂಪ್ರದಾಯದ ಸಂಸ್ಕೃತಿಗೆ ವಿರುದ್ಧವಾಗಿ, ಪ್ರಾಪಂಚಿಕತೆ ಹೋಗುವುದೇ ಇಲ್ಲ. ಸಾಂಪ್ರದಾಯಿಕತೆ ಎಂಬುದರ ಅರ್ಥ, ಎಲ್ಲಾ ಜನರನ್ನೂ ಧರ್ಮರಾಹಿತ್ಯತೆ ಅಥವಾ ಅಧಾರ್ಮಿಕತೆಯ ಸಮಮಟ್ಟಕ್ಕೆ ಇಳಿಸಿಬಿಡುವುದು ಎಂದೇನೂ ಆಗುವುದಿಲ್ಲ. ಅಥವಾ ಭಾರತ ತನ್ನ ಸಾಂಸ್ಕೃತಿಕ ಸ್ವದೇಶೀಯತೆಯನ್ನು ಎಂದರೆ ಯಾವುದರ ಮೌಲ್ಯವನ್ನು ಇಡೀ ಪ್ರಪಂಚವೇ ಒಪ್ಪಿ ಶ್ಲಾಘಿಸಿದೆಯೋ ಆ ಮೌಲ್ಯವನ್ನು ತಳ್ಳಿಹಾಕಬೇಕು ಎಂದೇನೂ ಅರ್ಥವಲ್ಲ. ಚರಿತ್ರೆಯಲ್ಲಿಯೂ ನಮ್ಮ ದೇಶಕ್ಕೆ ಭೇಟಿ ನೀಡಿದ್ದ ಖ್ಯಾತಿವಂತ ಪಾಶ್ಚಾತ್ಯ ವಿದ್ವಾಂಸರ ಬಗ್ಗೆ ದಾಖಲೆ ಇದೆ. ಆದ್ದರಿಂದ, ಯಾರು ತಮ್ಮನ್ನು ತಾವು ನಿಜವಾದ ಭಾರತೀಯರೆಂದು ಪರಿಗಣಿಸಿಕೊಳ್ಳುವರೋ ಅವರೆಲ್ಲರೂ ಈ ದೇಶದ ಮೂರ್ತ ಅಮೂರ್ತ ಬಳುವಳಿಗಳೆಂದೇ ಭಾವಿಸಿಕೊಳ್ಳಬೇಕು ಮತ್ತು ನಮ್ಮ ಸಂಸ್ಕೃತಿ ಈ



ಮೂರ್ತ–ಅಮೂರ್ತ ಬಳುವಳಿಯೊಂದಿಗೆ ನಿಷ್ಠುರವಾಗಿ ಜೋಡಿಸಲ್ಪಟ್ಟಿದೆ ಎಂಬುದನ್ನೂ ಅರಿತುಕೊಳ್ಳಬೇಕು.

ಈ ಸಂದರ್ಭದಲ್ಲಿ, ಇಂಡೋನೇಷ್ಯದಂಥ ದೂರದ ದ್ವೀಪದಲ್ಲಿಯೂ, ಅಲ್ಲಿನ ಅಗಾಧವಾದ ಮುಸ್ಲಿಂ ಜನತೆಯು, ರಾಮಾಯಣ ಮತ್ತು ಮಹಾಭಾರತದಲ್ಲಿ ಕಂಡುಬರುವಂತಹ ನೀತಿಗಳು ಮತ್ತು ಮೌಲ್ಯಗಳನ್ನು ಮಮತೆಯಿಂದ ಪೋಷಿಸಿಕೊಂಡು ಬರುತ್ತಿದೆ ಮತ್ತು ಅವುಗಳನ್ನೇ ಅನುಸರಿಸುತ್ತಿದೆ.

ಭಾರತ ಮೂಲವಾಗಿ ಸನಾತನ ಧರ್ಮಕ್ಕಾಗಿಯೇ ನಿಂತಿದ್ದು, ಪ್ರಾಕೃತಿಕವಾಗಿ ವಿವಿಧ ಧರ್ಮಗಳನ್ನು ಮತ್ತು ಜಾತಿಗಳನ್ನು ಹೊಂದಿದೆ, ಮತ್ತು ಪ್ರತಿಯೊಂದು ಧರ್ಮವೂ ಸತ್ಯದ ಪಥವೇ ಆಗಿದೆ, ಎಂಬುದನ್ನು ನಾವು ಮತ್ತೊಮ್ಮೆ ಜ್ಞಾಪಿಸಿಕೊಳ್ಳೋಣ. ಈ ನಿರ್ದಿಷ್ಟ ಧ್ಯೇಯದ ಆಧಾರದಿಂದ, ಭಾರತದ, ನಮ್ಮ ಸ್ಪಷ್ಟ ಬಹುತ್ವದೊಂದಿಗೂ ನಾವು ಒಂದು ಸಾಮರಸ್ಯದ ಜೀವನ ಸಾಗಿಸುವಂತೆ ಮಾಡಲು ಕಷ್ಟಪಡುತ್ತಿದೆ. ಈ ಧ್ಯೇಯದಲ್ಲಿ, ಸಂತರು ಮತ್ತು ಸಂನ್ಯಾಸಿಗಳ ಜೀವನಗಳು ಹಾಗೂ ಬೋಧನೆಗಳು ನಿಜವಾದ ಮಾರ್ಗದರ್ಶಕ ಜ್ಯೋತಿಗಳಂತೆ ಪ್ರಮಾಣೀಕರಿಸಿವೆ. ಉದಾಹರಣೆಗೆ ಶಿರಡಿಯ ಸಾಯಿ ಬಾಬಾ ಮತ್ತು ತಿರುವಣ್ಣಾಮಲೈನ ಶ್ರೀ ರಮಣ ಮಹರ್ಷಿಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರೂ ಸೇರಿದಂತೆ ವಿವಿಧ ಪಂಥಗಳ ಸಾಕಷ್ಟು ಮಂದಿ ಪ್ರಚಂಡ ಭಕ್ತರನ್ನು ಹೊಂದಿದ್ದರು.

ಶ್ರೀ ರಾಮಕೃಷ್ಣರು ಇಸ್ಲಾಂ ಮತ್ತು ಕ್ರೈಸ್ತ ಧರ್ಮವೂ ಸೇರಿದಂತೆ ಎಲ್ಲಾ ಮುಖ್ಯ ಧರ್ಮಗಳಲ್ಲಿ ತಿಳಿಸಲಾಗಿದ್ದ ವಿಧಾನಗಳನ್ನು ಬಳಸಿಕೊಂಡು ಸಾಧನೆ ಮಾಡಿದರು. ಇಸ್ಲಾಂ ಧರ್ಮದ ಬೋಧನ ಶಾಖೆಗೆ ಸೇರಿಕೊಳ್ಳಲು ಅವರು ಒಬ್ಬ ಮುಸಲ್ಮಾನ ಭಕ್ತನ ಮೂಲಕ ದೀಕ್ಷೆ ಪಡೆದು, ಅತ್ಯಂತ ಜಾಗರೂಕತೆಯಿಂದ ಎಲ್ಲಾ ವಿವರಗಳನ್ನೂ ಗಮನಿಸಿದರು. ಹಾಗೆ ಮಾಡುವಾಗ ಅವರು, ಉದಾಹರಣೆಗೆ, ತಮ್ಮ ಕೋಣೆಯಲ್ಲಿದ್ದ ದೇವರು ಮತ್ತು ದೇವಿಯರ ಚಿತ್ರಗಳನ್ನೆಲ್ಲಾ ಆಚೆಗೆ ಇಟ್ಟಿದ್ದರು. ತಮ್ಮ ಸಾಧನೆಯ ನಂತರ ಅವರು ಇಸ್ಲಾಂ ಧರ್ಮವೂ ಕೂಡ ಸತ್ಯಾನ್ವೇಷಣೆಯ ಹಾದಿಯೇ ಎಂದರಿತುಕೊಂಡರು. ನಮ್ಮ ಧರ್ಮದ ನಿಜವಾದ ವ್ಯಾಖ್ಯಾನಕಾರರಾಗಿದ್ದ ನಮ್ಮ ಸಂತರು ಮತ್ತು ಜ್ಞಾನಿಗಳ ಜೀವನಗಳಲ್ಲಿ ಅಂಥ ಘಟನೆಗಳು ಸಾಕಷ್ಟಿವೆ. ನಮ್ಮ ಜನರ ಎಷ್ಟೋ ಪದ್ಧತಿಗಳಲ್ಲಿ ಮುಸ್ಲಿಮರು ಮತ್ತು ಇತರ ಸಂತರನ್ನೂ ಪೂಜಿಸುವುದಿದೆ. ಅದರಿಂದ ಅರಿವಾಗುವುದು ಭಾರತದ ಸಾಂಪ್ರದಾಯಿಕ ಸಂಸ್ಕೃತಿಗೆ ಅವುಗಳಿಂದ ಯಾವ ಬಾಧೆಯೂ ಇಲ್ಲವೆಂದೇ ಹೌದು. ಸಾಮಾಜಿಕ ಸ್ತರದಲ್ಲಿನ ಹೊಂದಾಣಿಕೆಯೇ ಆಧ್ಯಾತ್ಮಿಕ ವ್ಯಕ್ತಿಗೆ ಬೇಕಾಗಿರುವ ಗುರಿ. ಸ್ವಾಮಿ ವಿವೇಕಾನಂದರ ಪ್ರಖ್ಯಾತ ಹೇಳಿಕೆಯೊಂದರಲ್ಲಿ ಭಾರತೀಯ ಭಾವನೆಯ ಸಾರಾಂಶವನ್ನು ತಿಳಿಸಲಾಗಿದೆ: "ಎಲ್ಲಾ ಸಾಧನೆಗಳ ಗುರಿಯೂ ನಮ್ಮ ಮೇಲಿರುವ ಪ್ರಕೃತಿಯ ಹಿಡಿತದಿಂದ

ಮುಕ್ತಿ ಹೊಂದುವುದೇ ಆಗಿದೆ. ಪ್ರತಿಯೊಂದು ಆತ್ಮವೂ ಅಂತಸ್ಸತ್ವದಲ್ಲಿ ದಿವ್ಯವಾದದ್ದೇ. ಈ ದಿವ್ಯತೆಯನ್ನು ಒಳಗೆ ಸ್ಪಷ್ಟವಾಗಿಸಿಕೊಳ್ಳುವುದೇ ಆಗಿದ್ದು, ಅದನ್ನು ಹೊರಗಿನ ಹಾಗೂ ಒಳಗಿನ ಪ್ರಕೃತಿಯನ್ನು ಹಿಡಿತದಲ್ಲಿಟ್ಟುಕೊಳ್ಳುವ ಮೂಲಕವೇ ಸಾಧಿಸಿಕೊಳ್ಳಬೇಕು. ಇದನ್ನು ಕೆಲಸದಿಂದಲೋ, ಪೂಜೆಯಿಂದಲೋ, ಪಾರಭೌತಿಕ ಹಿಡಿತದಿಂದಲೋ, ಅಥವಾ ತತ್ತ್ವಶಾಸ್ತ್ರದಿಂದಲೋ– ಒಂದರಿಂದ ಅಥವಾ ಹೆಚ್ಚಿನದರಿಂದ ಅಥವಾ ಎಲ್ಲವನ್ನೂ ಸೇರಿಸಿದಂತೆ ಮಾಡಿ, ಸ್ವಾತಂತ್ರ್ಯ ಪಡೆಯಿರಿ. ಇದೇ ಇಡೀ ಧರ್ಮ. ಸಿದ್ಧಾಂತಗಳು, ಮತತತ್ತ್ವಗಳು, ಪುಸ್ತಕಗಳು, ದೇವಸ್ಥಾನಗಳು ಅಥವಾ ಆಕಾರಗಳು, ಎಲ್ಲವೂ ಮುಖ್ಯವಲ್ಲದ ವಿವರಗಳು."

ವಿವಿಧ ಸಾಂಸ್ಕೃತಿಕ ಸಮಾನ ಗುರಿ ಮತ್ತು ನಂಬಿಕೆಯನ್ನುಳ್ಳ ಜನರ ಗುಂಪು ಸೇರಿದಾಗ, ಪರಸ್ಪರ ಪ್ರತಿಕ್ರಿಯೆ ಅನಿವಾರ್ಯ. ಆ ಪ್ರತಿಕ್ರಿಯೆ ಸಾಂಸ್ಕೃತಿಕ ಪಿತ್ರಾರ್ಜಿತ ಆಸ್ತಿಯನ್ನು ಉತ್ತಮಗೊಳಿಸುತ್ತದೆ. ಉದಾಹರಣೆಗೆ ಹಿಂದೂಸ್ತಾನೀ ಸಂಗೀತವನ್ನೇ ತೆಗೆದುಕೊಳ್ಳೋಣ. ಅದು ಒಂದು ರೀತಿಯಲ್ಲಿ ಭಾರತೀಯದ್ದೇ ಆಗಿದ್ದರೂ, ಕರ್ನಾಟಕ ಸಂಗೀತದಿಂದ ಭಿನ್ನವಾಗಿದೆ. ಅದು ಉತ್ತರ ಭಾರತದಲ್ಲಿ ಪ್ರಾಕೃತಿಕ ವೈಖರಿ ಹೊಂದಿದೆ. ಅದು ಹೇಗೆ ಎಂದರೆ, ಅದರ ರಾಗಗಳು ಮತ್ತು ತಾಳಗಳು ಮತ್ತು ಸ್ವದೇಶೀ ರೀತಿಯ ಬಗ್ಗೆ ಮುಸ್ಲಿಮರಿಗಿದ್ದ ಆಸಕ್ತಿಯ ಪ್ರಭಾವದ ಶ್ರೇಷ್ಠತೆಯಿಂದಲೇ ಎನ್ನಬಹುದು. ಇದೇ ರೀತಿಯ ಉದಾಹರಣೆಗಳು, ಇತರ ದೇಶಗಳ (ಎಂದರೆ ಫ್ರಾನ್ಸ್, ಅಮೆರಿಕ, ಮೆಕ್ಸಿಕೋಗಳಲ್ಲಿ ಲೇಖಕರೊಬ್ಬರು ನೇರವಾದ ಸಂಬಂಧದ ಮೂಲಕ ಅರಿತರು) ಚರಿತ್ರೆಗಳಲ್ಲಿಯೂ ಕಂಡುಬರುತ್ತವೆ.

ತಾಳ್ಮೆ, ಸಮ್ಮತಿ, ರಕ್ತಗತ ಮಾಡಿಕೊಳ್ಳುವಿಕೆ ಮುಂತಾದ ಭಾರತೀಯ ಸಂಪ್ರದಾಯಗಳಿದ್ದರೂ, ಆಗಾಗ ಕೋಮುವಾರಿನ ಗಲಭೆಗಳು ಉಂಟಾಗಿ, ನಮ್ಮೆಲ್ಲರಿಗೂ ಆತಂಕವನ್ನುಂಟುಮಾಡುತ್ತವೆ. ಅಂಥ ತೊಂದರೆಗಳು, ಸಾಮಾಜಿಕ ಅಸಮತೋಲನದ ಪೂರ್ಣವಾಗಿ ತೆರೆದ ಉಪದ್ರವಗಳಂತೆಯೇ ಕಂಡುಬರುತ್ತವೆ. ಮುಂದಿನ ಅಧ್ಯಾಯದಲ್ಲಿ ನಮ್ಮ ಸದ್ಯದ ವಿದ್ಯಾಭ್ಯಾಸದ ಪದ್ಧತಿ ಹೇಗೆ ನಮ್ಮ ಇಂದಿನ ಸಾಮಾಜಿಕ ಅಸಮತೆಗೆ ನೆರವಾಗುತ್ತಿದೆ ಎಂಬುದನ್ನು ಪರೀಕ್ಷಿಸಬೇಕು.

* * * *



# ೪. ಭಾರತದ ಇಂದಿನ ವಿದ್ಯಾಭ್ಯಾಸದ ಪದ್ಧತಿಯನ್ನು ಕುರಿತಾದ ಒಂದು ವಿಮರ್ಶಾತ್ಮಕ ಲೇಖನ

ನಮ್ಮ ವಿದ್ಯಾಭ್ಯಾಸದ ಪದ್ಧತಿಯನ್ನು ಪಾಶ್ಚಾತ್ಯ ವಿಧಾನದಲ್ಲಿ ರೂಪಿಸಿರುವುದರ ಜೊತೆಗೆ, ವಿಶ್ವವಿದ್ಯಾಲಯದ ಮಟ್ಟದಲ್ಲಿನ ಪಾಠ ಹೇಳುವಿಕೆಯೂ ಕೂಡ, ವಿದೇಶೀ ಲೇಖಕರು ಬರೆದ ಪುಸ್ತಕಗಳಿಂದಲೇ ಹೇಳಿಕೊಡಲಾಗುತ್ತದೆ. ಕೆಲವು ಪುಸ್ತಕಗಳು ಭಾರತೀಯ ಲೇಖಕರದ್ದೂ ಆಗಿದ್ದರೂ, ಅವು ಸಹ ವಿದೇಶೀ ಲೇಖಕರು ಮಾಡಿದ ಕೆಲಸಗಳನ್ನೇ ಆಧರಿಸಿವೆ. ಉದಾಹರಣೆಗೆ ಶಾಸ್ತ್ರೀಯ ಭಾರತೀಯ ಭಾಷೆಗಳು, ಇತ್ಯಾದಿ. ಬ್ರಿಟಿಷರು ವಿಶ್ವವಿದ್ಯಾಲಯಗಳನ್ನು ತಮ್ಮ ಸ್ವಂತ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿಕೊಂಡದ್ದರಿಂದ, ಈ ಅಭ್ಯಾಸ ಆರಂಭವಾಯಿತು. ಅವುಗಳ ಬಗ್ಗೆ ಭಾರತೀಯರು ಅರಿತಿದ್ದು, ಸ್ವಾತಂತ್ರ್ಯಕ್ಕೆ ಹಿಂದಿನ ದಿನಗಳಲ್ಲಿನ ಹೆಚ್ಚಿನ ರಾಷ್ಟ್ರೀಯ ಭಾರತೀಯರು, ಅವುಗಳಿಗೆ ವ್ಯತಿರಿಕ್ತವಾಗಿ ಟೀಕಿಸುತ್ತಿದ್ದರು. ಸ್ವಾತಂತ್ರ್ಯದ ನಂತರ ಈ ಪದ್ಧತಿಯು ತರ್ಕಬದ್ಧದ್ದಾಯಿತು. ಜೊತೆಗೆ ಎಲ್ಲಾ ಕಡೆಗಳಲ್ಲಿಯೂ ಅದರ ಸ್ಪರ್ಶಾಂಗಗಳು ಹರಡಿಹೋದವು. ಅದರಿಂದ ನಾವು ಆಧುನಿಕರಾಗುವ ಆಸೆಯನ್ನು ಪೂರೈಸಿದಂತೆ ಇತ್ತು.

ವೈಜ್ಞಾನಿಕ ಹಾಗೂ ತಾಂತ್ರಿಕ ಕಾರ್ಯವಿಧಾನಗಳ ಬಳಕೆ ಮತ್ತು ಅಧ್ಯಯನಕ್ಕೆ, ಅಧುನಿಕ ಅರ್ಥಶಾಸ್ತ್ರದ ಮತ್ತು ರಾಜಕೀಯದ ವಿಜ್ಞಾನಗಳಿಗೆ ಮತ್ತು ಇನ್ನೂ ಎಷ್ಟೋ ಇತರ ವಿಷಯಗಳ ಬಗ್ಗೆ, ಆಧುನಿಕ ಜೀವನಕ್ಕೆ ಸಂಬಂಧಿಸಿದಂತೆ, ನಮಗೆ ಪಾಶ್ಚಾತ್ಯ ಲೇಖಕರನ್ನೇ ನಂಬಿಕೊಳ್ಳುವಂತಾಯಿತು. ಹೀಗೆ ನಮ್ಮ ವಿದ್ಯಾರ್ಥಿಗಳು, ಭಾರತೀಯರು, ಸೃಷ್ಟ್ಯಾತ್ಮಕ ವಿಜ್ಞಾನಗಳ ಎಷ್ಟೋ ಕ್ಷೇತ್ರಗಳಲ್ಲಿ ಮಾಡಿರುವ, ಹಿಂದಿನ ಕಾಲದ ಎಂದರೆ ಪಾಶ್ಚಾತ್ಯರ ಪ್ರಭಾವದಿಂದ ಸ್ವತಂತ್ರವಾಗಿದ್ದ ಗಮನಾರ್ಹ ಸಹಾಯಕ ನೆರವುಗಳ ಬಗ್ಗೆ ನಿಕಟ ಸಂಬಂಧವನ್ನು ಬೆಳೆಸಿಕೊಳ್ಳಲು ಬೇಕಾದ ಅವಕಾಶವನ್ನೇ ಪಡೆಯುವುದಿಲ್ಲ. ಪರಿಣಾಮ ಏನು ಆಗುತ್ತದೆ ಎಂದರೆ ಅವರು ರಾಷ್ಟ್ರೀಯ ಕೀಳರಿಮೆಯ ಭಾವನೆಯಿಂದ ನರಳುತ್ತಾರೆ. ಈ ವಿಧಾನವು ಖಂಡಿತವಾಗಿ ಭಾರತೀಯತೆಯ ಹೆಮ್ಮೆಯನ್ನು ಉಂಟಾಗಿಸುವುದಿಲ್ಲ.

ಜೊತೆಗೆ, ನಮ್ಮ ಸ್ವಂತದ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಮೂರ್ತ ಅಮೂರ್ತ ಬಳುವಳಿಯಿಂದ ಪೂರ್ತಿಯಾಗಿ ದೂರವಾಗಿಸಲ್ಪಟ್ಟಿರುವುದರಿಂದ, ನಮ್ಮ ವಿದ್ಯಾರ್ಥಿಗಳು, ಅವುಗಳ ಬಗ್ಗೆ ಯಾವುದೇ ರೀತಿಯ ಗೌರವ ಅಥವಾ ಆಸಕ್ತಿಯನ್ನು ಹೊಂದಿರುವುದಿಲ್ಲ. ಬದಲಿಗೆ ಅವರು ಒಂದು ರೀತಿಯ ನಿಸ್ಸಂದೇಹದ ಅಗೌರವವನ್ನು ಹೊಂದುವುದಕ್ಕೆ ಕಾರಣ, ಆಸಕ್ತ ಪಕ್ಷಗಳು ಅಥವಾ ಅತ್ಯುತ್ಸಾಹಿತ ಪಾಶ್ಚಾತ್ಯರಾಗಿ ಹೋಗಿರುವ ಭಾರತೀಯರೇ ಹೌದು. ಅದಕ್ಕೆ ಉದಾಹರಣೆಯಾಗಿ, ನಾವು ಭಾರತೀಯ ಮತ್ತು ಪಾಶ್ಚಾತ್ಯ ಖಗೋಳವಿಜ್ಞಾನದ ನಡುವಿನ ವ್ಯತ್ಯಾಸವನ್ನು ಗಮನಿಸೋಣ. ರಾಹು ಮತ್ತು ಕೇತು ಎರಡೂ ಗ್ರಹಗಳೇ (ಗ್ರಹ ಎಂಬ ಪದಕ್ಕೆ ಇಂಗ್ಲಿಷಿನ ಪದವಾದ ಪ್ಲಾನೆಟ್ ಎಂಬುದರ ಅರ್ಥವೇ ಆಗುವುದಿಲ್ಲ) ಭಾರತೀಯ ಪದ್ಧತಿಯಲ್ಲಿ ಇವೆರಡೂ ಗ್ರಹಗಳಾಗಿರುವುದರಿಂದ ಅವುಗಳನ್ನು ಟೆಲಿಸ್ಕೋಪ್‌ಗಳ ಮೂಲಕ ಗಮನಿಸಲಾಗುವುದಿಲ್ಲ. ಏನೂ ಅರಿಯದ ಶಾಲಾ ವಿದ್ಯಾರ್ಥಿಗಳಿಗೆ, ಆಗಾಗ ಭಾರತೀಯ ಖಗೋಳ ವಿಜ್ಞಾನ ಬೂಟಾಟಿಕೆಯದೇ ಎಂದು ತಿಳಿಸಲಾಗುತ್ತದೆ. ಇನ್ನೂ ಸ್ವಲ್ಪ ಆಳಕ್ಕಿಳಿದರೆ, ಮೇಲೆ ಹೇಳಿದ ಗ್ರಹಗಳು ಇತರ ಗ್ರಹಗಳಂತೆ ನಿಜವಾದ ಬಾಹ್ಯಾಕಾಶದ ಗ್ರಹಗಳಂತೆ ಇರುವುದಿಲ್ಲ (ಮಿಕ್ಕ ಗ್ರಹಗಳಿರುವ ರೀತಿಯಲ್ಲಿ), ಆದರೆ ಅವು ಕೇವಲ ಸೂರ್ಯನ ಕಾಂತಿವೃತ್ತ ಮತ್ತು ಚಂದ್ರನ ವೃತ್ತದ ಪಥ ಅಡ್ಡಹಾಯುವ ಎರಡು ಬಿಂದುಗಳು ಎಂದು ಅರಿವಾಗುತ್ತದೆ. ಅವುಗಳನ್ನು ಪತ್ತೆ ಮಾಡುವುದು ಅಸಾಧ್ಯ. ಹೇಗೆ ಎಂದರೆ, ಉತ್ತರ ಮತ್ತು ದಕ್ಷಿಣದ ಧ್ರುವಗಳನ್ನು ಯಾವುದೇ ಉಪಕರಣದ ಮೂಲಕ ಹೇಗೆ ಅಳೆಯುವುದಕ್ಕೆ ಸಾಧ್ಯವಿಲ್ಲವೊ ಹಾಗೆ. ಅದೇ ರೀತಿ ನಾವು ಸಾಕಷ್ಟು ಉದಾಹರಣೆಗಳನ್ನು ನೀಡಬಹುದು.

ನಮ್ಮ ವಿದ್ಯಾಥಿಗಳು ನಮ್ಮ ಸಂಸ್ಕೃತಿ ಅಥವಾ ಆನುವಂಶಿಕ ಪ್ರಾಪ್ತಿಯ ಮೂಲ ಕಾರಣಗಳು ಅಥವಾ ಅಗತ್ಯವಾದ ರೂಪವೈಶಿಷ್ಟ್ಯಗಳ ಬಗ್ಗೆ ಅರಿತುಕೊಳ್ಳುವ ಅವಕಾಶವನ್ನೇ ಪಡೆಯುವುದಿಲ್ಲ. ಆದರೂ ಸದ್ಯದ ಅತೃಪ್ತಿಯ ಸಾಮಾಜಿಕ ಸ್ಥಿತಿಗಳ ಮೇಲ್ನೋಟದಿಂದ, ಕೆಲವರು ಒಂದು ತಪ್ಪು ನಿರ್ಧಾರಕ್ಕೆ ಬರುತ್ತಾರೆ. ಎಂದರೆ, "ಭಾರತೀಯ ಸಂಪ್ರದಾಯಗಳು ಅತೀಂದ್ರಿಯ ಯೋಗರಹಸ್ಯಗಳಲ್ಲಿ, ಪಾರಲೌಕಿಕ ವೃತ್ತಿಯಲ್ಲಿ, ಸಮುದಾಯ ಭಾವನಾಹೀನತೆಯಲ್ಲಿ, ಮತ್ತು ಸಾಮಾಜಿಕ ಅರಿವು ಮುಂತಾದವುಗಳಲ್ಲಿ ನೆಲೆಯೂರಿವೆ..." (ಇದನ್ನು ಮುಂಬೈನ ದಿ ಟೈಮ್ಸ್ ಆಫ್ ಇಂಡಿಯಾದಲ್ಲಿ ೧೯೮೧ನೇ ಮೇ ತಿಂಗಳಿನಲ್ಲಿ ಪ್ರಕಟಿಸಿದ್ದರು). ಈ ರೀತಿಗಳ ಪ್ರಚಲಿತ ತಪ್ಪು ಅಭಿಪ್ರಾಯಗಳಿಗೆ ಹೊಣೆಯಾಗಿರುವ ಅಂಶಗಳಲ್ಲಿ ಒಂದು, ವಿದೇಶೀ ಭಾಷೆಯ ಸೂಕ್ತವಲ್ಲದ ಬಳಕೆಯಿಂದ ಹುಟ್ಟಿಕೊಂಡ ಕೆಲವು ಸ್ಥಳೀಯ ವಿಷಯಗಳ ಬಗ್ಗೆಯ ಕೊಂಕು. ನಾವು ಧರ್ಮದ ಉದಾಹರಣೆ ತೆಗೆದುಕೊಳ್ಳೋಣ. ಅದನ್ನು ರಿಲಿಜನ್ ಎಂದು ಸಾಮಾನ್ಯವಾಗಿ ಅನುವಾದಿಸಲಾಗುತ್ತದೆ. ನಾವು ನೋಡಿರುವಂತೆ ಈ ಅನುವಾದ ದಾರಿ ತಪ್ಪಿಸುವಂಥದ್ದು. ಆದ್ದರಿಂದ, ಈ ಪದವನ್ನು ಕೆಲವರು ಜ್ಞಾನಿಗಳು 'ನೈತಿಕವಾಗಿ ಸರಿಯಾದ ಕ್ರಿಯೆ' ಎಂದು ಅನುವಾದ ಮಾಡುತ್ತಾರೆ. ಅದೇ ರೀತಿಯಲ್ಲಿ ಈಶ್ವರ ಎಂಬ ಪರಿಕಲ್ಪನೆ, ನಮ್ಮ ಧರ್ಮಗ್ರಂಥಗಳಲ್ಲಿ ಪ್ರತಿಪಾದಿಸಿರುವಂತೆ, ಯೂರೋಪಿಯನ್ ಅಥವಾ ಕ್ರಿಶ್ಚಿಯನ್ನರ ಭಗವಂತನ ಬಗ್ಗೆಯ ಭಾವನೆಗೆ ಸಮನಾಗಿಯೇ ಇರುವಂತೆ ಕಾಣುತ್ತಿಲ್ಲ. ಈಗಾಗಲೇ ಹೇಳಿರುವಂತೆ ಗ್ರಹದ ಪರಿಕಲ್ಪನೆ ಹತ್ತಿರದ್ದೇ ಆಗಿರಬಹುದಾಗಿದ್ದರೂ, 'ಗ್ರಹ'ಕ್ಕೆ ಸಮನಾಗಿರುವುದಿಲ್ಲ. ಅಂಥ ಎಷ್ಟೋ ಉದಾಹರಣೆಗಳಿವೆ. ಆದ್ದರಿಂದ ನಾವು ಇಂಗ್ಲಿಷ್ ಭಾಷೆಗೆ ಎಷ್ಟೇ ಪ್ರಾಮುಖ್ಯ ನೀಡುತ್ತಿದ್ದರೂ, ಆ ಭಾಷೆಯಲ್ಲಿ ನಮ್ಮ ಸ್ವಂತದ ಸಾಂಪ್ರದಾಯಿಕ ಭಾವನೆಗಳನ್ನು ವ್ಯಕ್ತಪಡಿಸಲಾಗುತ್ತಿಲ್ಲ ಎಂಬುದೇ ದುಃಖದ ವಿಷಯ.



## ಇಂದಿನ ವಿದ್ಯಾವಂತ ಭಾರತೀಯರ ಮನೋವೈಜ್ಞಾನಿಕ ತೊಂದರೆ

ಇಂದಿನ ಭಾರತೀಯ ಯುವಕನ ಮುಖ್ಯವಾದ ಮನೋವೈಜ್ಞಾನಿಕ ತೊಂದರೆ, ಎಂದರೆ, ಅವನು ಅಸ್ಥಿರತೆ ಅಥವಾ ಒಂದು ರೀತಿಯ ವಿಭಾಗಿಸಲ್ಪಟ್ಟ ವ್ಯಕ್ತಿತ್ವವನ್ನು ಇಂದಿನ ಆಧುನಿಕ ವಿದ್ಯಾಭ್ಯಾಸದ ಗುಣದಿಂದಾಗಿ ಬೆಳೆಸಿಕೊಳ್ಳುತ್ತಾನೆ. ಅದು ನಮಗೆ ಇಷ್ಟವಿರಲಿ ಬಿಡಲಿ, ಈ ದೇಶದಲ್ಲಿ ಹುಟ್ಟಿ ಬೆಳೆದವರೆಲ್ಲರೂ ತಮಗೆ ಅರಿವೇ ಇಲ್ಲದಂತೆ ಒಳ್ಳೆಯದು ಕೆಟ್ಟದ್ದು, ಎಲ್ಲವನ್ನೂ ತಮ್ಮ ವ್ಯಕ್ತಿತ್ವದೊಳಗೆ, ರಕ್ತ ಮತ್ತು ಎಲುಬಿನ ನೆಣದೊಳಗೆ (ಮೂಳೆಯಲ್ಲಿನ ಮೆತುವಾದ ಕೊಬ್ಬು ಪದಾರ್ಥ) ಸುದೃಢವಾಗಿಸಿಕೊಳ್ಳುತ್ತಾರೆ. ಪರಿಣಾಮವಾಗಿ ನಮಗೆ ಅದರಿಂದ ಎಂದರೆ ವಿಶಿಷ್ಟವಾದ ಭಾರತೀಯ ಪ್ರತಿವರ್ತನಗಳಿಂದ ತಪ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ. ಅವು ನೇರವಾಗಿ ಮತ್ತು ಪ್ರಾಕೃತಿಕವಾಗಿ ನಮ್ಮ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಪರಿಸರಗಳಿಗೆ ಸಂಬಂಧಿಸಿರುತ್ತವೆ. ಹೀಗೆ ನಾವು ಬೆಳೆಯುವಾಗ, ಉಪಪ್ರಜ್ಞೆಯ ವ್ಯಕ್ತಿತ್ವದ ಒಂದು ಭಾಗ, ನಮ್ಮ ಪರಿಸರದ ಸಂಸ್ಕೃತಿಯ ಮೇಲೆ ಒಲವನ್ನು ಬೆಳೆಸಿಕೊಂಡೇ ಬೆಳೆಯುತ್ತದೆ ಮತ್ತು ಅದೇ ಸಮಯದಲ್ಲಿ ಮತ್ತೊಂದು ಭಾಗವು, ಹೊಂದಾಣಿಕೆಯಿಲ್ಲದ ಸಂಸ್ಕೃತಿಯತ್ತ ಬಾಗಿ, ಶಾಲೆಗಳು ಮತ್ತು ಕಾಲೇಜುಗಳ ಸಾಂಪ್ರದಾಯಿಕ ಶಿಸ್ತಿನ ಮೂಲಕ ಹಾಗೇ ಬೆಳೆಯುತ್ತದೆ. ಸಾಮಾನ್ಯ ವ್ಯಕ್ತಿಯೊಬ್ಬನಲ್ಲಿ, ಅಂಥ ಭಾಗಗಳು ಒಂದು ಹೊಂದಾಣಿಕೆ ಹಾಗೂ ಸಮತೋಲನದ ನಮೂನೆಯಲ್ಲಿ ಒಂದಾಗಿರಬೇಕು ಅಥವಾ ಸಂಬಂಧಿಸಿರಬೇಕು. ಏನೇ ಆದರೂ ನಮ್ಮ ಸದ್ಯದ ಪರಿಸ್ಥಿತಿಗಳಲ್ಲಿ ಇವೆರಡೂ ಹೊಂದಾಣಿಕೆ ಇಲ್ಲದ ಅಥವಾ ಕಾದಾಡುವ ರೀತಿಯಲ್ಲಿರುವಂತಿರುತ್ತವೆ. ಅದನ್ನೇ ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಆಧುನಿಕ ವಿದ್ಯಾಭ್ಯಾಸ ತಾನಾಗಿ, ಎಂದರೆ ಯಾವುದರಿಂದ ನಾವು ನಮ್ಮ ಸ್ವಂತ ಸಂಸ್ಕೃತಿಯನ್ನು ತಿರಸ್ಕಾರದಿಂದ

ನೋಡುವೆವೋ, ಅದು ನಮಗೆ ಅರಿವೇ ಇಲ್ಲದಂತೆ ನಮ್ಮೊಳಗಿನ ಮನೋವೈಜ್ಞಾನಿಕ ಸಮಸ್ಥಿತಿಯನ್ನು ಕದಡುತ್ತದೆ. ವಿದ್ಯಾವಂತರ ನಡೆವಳಿಕೆಗಳು ಎಷ್ಟೋ ಸಲ, ಅನಿರೀಕ್ಷಿತವಾಗಿ ವಿಲಕ್ಷಣವಾಗಿದ್ದು, ಪ್ರೇರಣೆಗಳಲ್ಲಿ ಸಮರಸತೆ ಹೊಂದಿರದೆ, ಇರುತ್ತವೆ. ಆದ್ದರಿಂದ ವಚನಗಳು ಮತ್ತು ಕ್ರಿಯೆಗಳ ನಡುವೆ ಅಗಾಧ ಭೇದಗಳು ಇತ್ಯಾದಿ ಕಂಡುಬರುತ್ತವೆ. ಆತ್ಮಸಂಯಮಹೀನತೆಯೇ ನಮ್ಮ ವಿಚಿತ್ರ ಗುಣವಾಗಿ ಕಂಡುಬರುತ್ತದೆ. ನಾವು ಹೇಳುವುದೊಂದು, ಅರ್ಥ ಮಾಡಿಕೊಳ್ಳುವುದು ಮತ್ತೊಂದು ಮತ್ತು ಮಾಡುವುದೇ ಬೇರೊಂದು. ಉದಾಹರಣೆಗೆ ನಾವು ಸಮಾಜವಾದವನ್ನು ಪ್ರತಿಪಾದಿಸಬಹುದು. ಆದರೆ, ಮೊದಲನೆಯ ಅವಕಾಶ ದೊರಕಿದ ತಕ್ಷಣವೇ ಸಂಪತ್ತನ್ನು ಯಾವುದೋ ಮೂಲದಿಂದ ನಮ್ಮದಾಗಿಸಿಕೊಳ್ಳಲು ಜಪ್ತಿ ಮಾಡಬಹುದು. ಅಂಥ ಉದಾಹರಣೆಗಳು ಬಹಳ ಸಾಮಾನ್ಯ. ಆಧುನಿಕ ವಿದ್ಯಾವಂತ ಭಾರತೀಯ ಉನ್ನತ ಶ್ರೇಣಿಯ ಜನರು, ಇತರ ಎಷ್ಟೋ ಮೇಲ್ನೋಟದ ಧಾರ್ಮಿಕ ವ್ಯಕ್ತಿಗಳೂ ಸೇರಿದಂತೆ, ಅವುಗಳ ಅಸಂಬದ್ಧತೆಗಳನ್ನು ಅರಿತಿದ್ದರೂ ಕೂಡ, ಅನುಮೋದಿಸುತ್ತಾರೆ. ಈ ರೀತಿಯ ಮೌಲ್ಯಗಳ ಪದ್ಧತಿ ಮತ್ತು ನಡವಳಿಕೆ ವಿಧಾನಗಳಲ್ಲಿನ ವ್ಯತ್ಯಾಸಗಳು, ವಿದ್ಯಾವಂತರಲ್ಲಿ ಕಂಡುಬಂದರೆ, ಅವು ನ್ಯಾಯವಾಗಿಯೇ ಇತರ ಗುಂಪುಗಳ ಜನರಲ್ಲಿಯೂ ಅಪನಂಬಿಕೆ ಹುಟ್ಟಿಸುತ್ತವೆ. ಅದರಿಂದ ಸಾಮಾಜಿಕ ಏರುಪೇರಿಗೆ ಆಸ್ಪದವಾಗುತ್ತದೆ.

ಒಬ್ಬರ ಸ್ವಂತ ಸಂಸ್ಕೃತಿ ಮತ್ತು ಆನುವಂಶಿಕ ಪ್ರಾಪ್ತಿ, ತಾಯಿಗೆ ಇಷ್ಟವಾಗ ಬಹುದು. ಏಕೆಂದರೆ, ಅವೆರಡರ ಬಗ್ಗೆ ವ್ಯಕ್ತಿ ಸಾಕಷ್ಟು ಗೌರವವನ್ನಿಟ್ಟುಕೊಂಡು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ತನ್ನ ನ್ಯಾಯವಾದ ಮತ್ತು ಪ್ರಾಕೃತಿಕವಾದ ಮಾತೃ ಸಹಜ ಪ್ರೇಮವಿಲ್ಲದಿದ್ದರೆ ಮಗು ಅಸಹಜವಾಗಿ, ಅಸಾಧ್ಯ ಕೆಟ್ಟ ಗುಣಗಳನ್ನು ಬೆಳೆಸಿಕೊಳ್ಳಬಹುದು. ಉದಾಹರಣೆಗೆ ಅಸಾಧಾರಣ ದುರಾಸೆ, ಹೊಣೆಗೇಡಿತನ, ಮತ್ತು ಅಸಮಂಜಸತೆಗಳನ್ನು, ಒಳಗೆ ಬೆಳೆಸಿಕೊಂಡು ಹೊರಗೆ ಮರ್ಯಾದಸ್ಥನಾಗಿ ಕಂಡುಬರಬಹುದು. ಅದೇ ರೀತಿಯಲ್ಲಿ ಕೆಲವರು ತಮ್ಮ ಸ್ವಂತ ಸಂಸ್ಕೃತಿ ಮತ್ತು ಆನುವಂಶಿಕತೆಯ ಬಗ್ಗೆ ಒಂದು ಭಾವಾತ್ಮಕವಾದ ಸುಹೃತ್ಸಂಬಂಧವನ್ನು ಬೆಳೆಸಿ ಕೊಳ್ಳದಿದ್ದಾಗ (ಕೇವಲ ಬಾಹ್ಯ ಶಿಷ್ಟಾಚಾರಗಳನ್ನು ಕಣ್ಣುಮುಚ್ಚಿಕೊಂಡು ಪಾಲಿಸದಿದ್ದರೂ) ಸದ್ಯದ ಭಾರತೀಯ ವಿದ್ಯಾಭ್ಯಾಸದ ಪದ್ಧತಿಯಲ್ಲಿ ಸಾಗುವ ಹೆಚ್ಚಿನ ಜನರಂತೆ, ಅವರೂ ಅಸಾಮಾನ್ಯವಾದ ರೀತಿಯಲ್ಲಿ ನಡೆದುಕೊಳ್ಳಬಹುದು. ನಿಜವಾಗಿ ನಡೆಯುತ್ತಿರುವುದೂ ಇದೇ.

ಇಂಗ್ಲಿಷ್ ಓದಿರುವ ಜನರು, ದೇಶದ ಸಾಮಾನ್ಯ ಜನರ ಸಾಗರದಲ್ಲಿ ಹೆಚ್ಚಾಗಿ ದೂರ ಹೋದಂತೆ ಕಂಡುಬರುತ್ತಾರೆ. ಜೊತೆಗೆ ಅವರ ಜೀವನ ವಿಧಾನ ಮತ್ತು ಚಿಂತನಗಳಿಂದಲೂ ಹೊರತಾಗಿದ್ದಾರೆ ಎನ್ನಿಸುತ್ತದೆ (ಎಂ.ಎಸ್. ಗೋರೆ



ಅವರ– ಇಂಡಿಯನ್ ಯೂತ್, ಪ್ರೋಸೆಸಸ್ ಆಫ್ ಸೋಷಿಯಲೈಸೇಷನ್, ವಿಶ್ವಯುವಕ ಕೇಂದ್ರ, ೧೯೭೭, ಪುಟ ೫೦–೫೪, ಓದಿನೋಡಿ). ಈ ರೀತಿಯ ಸ್ವಂತದ ತಪ್ಪು ಅಭಿಪ್ರಾಯದಿಂದಾಗಿ, ಅವರು ಅಪಾರ ಅತೃಪ್ತಿ ಮತ್ತು ಅಸಂತುಷ್ಟಿ ಹೊಂದಿ ನರಳುತ್ತಾರೆ. ಅಂಥವರು ವಿಶ್ವವಿದ್ಯಾಲಯಗಳ ವಲಯಗಳಲ್ಲಿ ಮತ್ತು ರಾಷ್ಟ್ರೀಯ ಸಂಸ್ಥೆಗಳಲ್ಲಿ ಎಲ್ಲೆಲ್ಲೂ, ಕಂಡುಬಂದು ಕಾಡ್ಗಿಚ್ಚಿನಂತೆ ಬೇಗ ಹರಡಿಹೋಗುತ್ತಾರೆ.

ವಿದ್ಯಾಭ್ಯಾಸದ ಪಾಠಕ್ರಮದ ಒಳ ಅಂಶಗಳಿಂದಾಗಿ, ಎಂದರೆ, ವಿದೇಶೀ ಭಾಷೆಗಳು (ಮುಖ್ಯವಾಗಿ ಇಂಗ್ಲಿಷ್), ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಬಗ್ಗೆ ಕಲಿಯುವಿಕೆ, ಮುಖ್ಯವಾಗಿರುವ ಈ ದಿನಗಳಲ್ಲಿನ ಎಂದರೆ ತಂತ್ರಜ್ಞಾನ ಮತ್ತು ಅಂತಾರಾಷ್ಟ್ರೀಯತೆಯೇ ಮುಖ್ಯವಾಗಿರುವ ಈ ದಿನಗಳಲ್ಲಿ, ನಾವು ಒಂದು ವಿಧವಾದ ಬೇಡದ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದೇವೆ ಎಂಬುದನ್ನು ಗಮನಿಸಬೇಕು. ಈ ವಿಷಯಗಳ ಬಗ್ಗೆ ಯಾರಾದರೂ ಆಸಕ್ತಿ ವಹಿಸಿದರೆ, ಕೆಲವರು ಭಾವಿಸುವಂತೆ, ವ್ಯಕ್ತಿಯು ತನ್ನನ್ನು ತಾನು ಎಲ್ಲಾ ಸ್ಥಳೀಯ ಸಾಂಸ್ಕೃತಿಕ ಸರಪಳಿಗಳಿಂದಲೂ ಬಿಡಿಸಿಕೊಳ್ಳಬೇಕು ಎಂದೇನೂ ಅರ್ಥವಲ್ಲ. ವೈಯಕ್ತಿಕ ಜೀವನದಲ್ಲಿ ಉದಾಹರಣೆಗೆ ನಾವು ಇತರರ ಒಳಿತಿನ ಬಗ್ಗೆ ಮನಃಪೂರ್ವಕವಾಗಿ ಆಸಕ್ತಿ ವಹಿಸಬಹುದು. ಆದರೆ ಅದೇ ಸಮಯದಲ್ಲಿ ನಮ್ಮ ತಾಯಿಯೊಂದಿಗೆ, ಅಗಾಧವಾದ ಭಾವನಾತ್ಮಕ ಸಂಬಂಧವನ್ನು ನಿಭಾಯಿಸಬಹುದು. ಅದಕ್ಕೆ ಬದಲಾಗಿ, ಅವರನ್ನು ನಾವು ಅನಾದರಿಸಿ ಸಂಬಂಧವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೆ, ಅದು ಖಂಡಿತವಾಗಿಯೂ ಅಸಹಜದ್ದಾಗುತ್ತದೆ. ಅದೇ ರೀತಿಯಲ್ಲಿ, ನಾವು ನಮ್ಮ ಸಂಸ್ಕೃತಿ ಮತ್ತು ಆನುವಂಶಿಕ ಪ್ರಾಪ್ತಿಯೊಂದಿಗೆ ಒಂದು ಚೈತನ್ಯಯುಕ್ತ ಸಂಬಂಧ ಬೆಳೆಸಿಕೊಂಡರೆ, ಅದೇ ಸಮಯದಲ್ಲಿ ವಿದೇಶೀ ಭಾಷೆಗಳು, ವಿಜ್ಞಾನ ಮತ್ತು ತಾಂತ್ರಿಕತೆಯ ಬಗ್ಗೆಯ ಅತ್ಯಗತ್ಯವಾದ ಮತ್ತು ಮುಖ್ಯವಾದ ಸಾಮರಸ್ಯವನ್ನೂ ನಿಭಾಯಿಸಬಹುದು. ಎಲ್ಲಕ್ಕಿಂತಲೂ ಹೆಚ್ಚಾಗಿ ನಮ್ಮ ಆನುವಂಶಿಕತೆ ಮತ್ತು ಆಧುನಿಕ ವಿಜ್ಞಾನದ ಉತ್ಸಾಹ ಎರಡೂ ಸಮಂಜಸವಾಗಿರುವುದರಿಂದಲೂ ನಾವು ಹಾಗೆ ಮಾಡಲು ಸಾಧ್ಯ.

ಆಧುನಿಕ ವಿದ್ಯಾವಂತ ಭಾರತೀಯರಿಗೆ ಸಂಬಂಧಿಸಿದಂತೆ ಮಾಡಲಾಗಿರುವ, ಮೇಲೆ ಹೇಳಿರುವ ಅಭಿಪ್ರಾಯಗಳನ್ನು ಒಂದು ಸಂಖ್ಯಾಸಂಗ್ರಹಣದ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಬೇಕು. ನಿಜವಾಗಿಯೂ, ಕೆಲವೇ ಮಂದಿ ವಿದ್ಯಾವಂತರಾದ ಭಾರತೀಯರು ಮೇಲೆ ಹೇಳಲಾದ ಮನೋವೈಜ್ಞಾನಿಕ ಭಿನ್ನಾಭಿಪ್ರಾಯಗಳು ಮತ್ತು ಜಗಳದಿಂದ ಪೂರ್ಣವಾಗಿ ಸ್ವತಂತ್ರರಾಗಿದ್ದಾರೆ. ಜೊತೆಗೆ ಜನತೆಯಲ್ಲಿ ನರಳಿಕೆ ಸಮಾನರೂಪದ್ದಾಗಿರುವುದಿಲ್ಲ. ಗಮನಾರ್ಹರು ಎಂದರೆ ಯಾರು ಸದ್ಯದ ವಿದ್ಯಾಭ್ಯಾಸದ ಕ್ರಮದ ಮಿತಿಗಳನ್ನು, ಪಠ್ಯವಿಷಯಗಳಿಂದ ಹೊರತಾದ

ಪ್ರಯತ್ನಗಳಿಂದಲೋ, ಅಲ್ಲದೆಯೋ, ಮೀರಲು ಕಷ್ಟಪಡುವವರೇ, ಹೌದು. ಹಾಗೆ ನೋಡಿದರೆ, ಎಲ್ಲಾ ಹಿರಿಯ ಭಾರತೀಯರೂ ಹಾಗೆ ಮಾಡಿದ್ದಾರೆ. ಉದಾಹರಣೆಗೆ ವಿವೇಕಾನಂದ, ತಿಲಕ್, ಅರವಿಂದರು, ಗಾಂಧಿ ಮುಂತಾದವರು ತಮ್ಮ ಪಾಶ್ಚಾತ್ಯ ಶಿಕ್ಷಣದ ನಂತರವೂ ಹಾಗೆ ಮಾಡಿ ತೋರಿಸಿದ್ದಾರೆ. ಅವರ ಮಾರ್ಗದರ್ಶನದಂತೆ, ನಾವೆಲ್ಲರೂ, ಪತ್ಯೇತರ ಪ್ರಯತ್ನಗಳನ್ನು ಮಾಡಿದರೆ, ಎಂದರೆ ಸದ್ಯದ ವಿದ್ಯಾಭ್ಯಾಸದ ಪದ್ಧತಿ ನಮ್ಮ ಸ್ವಂತ ಆನುವಂಶಿಕ ಪ್ರಾಪ್ತಿಯೊಂದಿಗೆ ಹೆಚ್ಚು ಸಮತೋಲನದಿಂದ ಮತ್ತು ಹೊಂದಾಣಿಕೆಯಿಂದ ಇರುವಂತೆ ಮಾಡುವವರೆಗೆ, ಒಳ್ಳೆಯದು.

### ನವಯೌವನ

ಈ ಚಿಕ್ಕ ಪ್ರಬಂಧವನ್ನು ಆಧುನಿಕ ಭಾರತೀಯ ಯುವಕರಿಗೆಂದು ತತ್ತ್ವಶಃ ಸಂಬೋಧಿಸಲಾಗಿದೆ. ಅವರ ತೊಂದರೆಗಳೆಲ್ಲದರ ಬಗ್ಗೆಯ ವ್ಯಾಪ್ತವಾದ ಚರ್ಚೆಯಂತೂ ಸಾಧ್ಯವಾಗದ್ದು (ಅವುಗಳ ಬಗ್ಗೆಯ ವಿಸ್ತಾರವಾದ ವಿಚಾರಣೆಗೆ, ಸುಧೀರ್ ಕಾಕರ್ ಮತ್ತು ಕಮಲಾ ಚೌಧುರಿ ರಚಿಸಿರುವ, ಸೌಮ್ಯ–ಪಬ್ಲಿಕೇಷನ್ಸ್, ಬಾಂಬೆ, ಅವರ, "ಇಂಡಿಯನ್ ಯೂತ್ ಇನ್ ಎ ಛೇಂಜಿಂಗ್ ಸೊಸೈಟಿ" ಓದಿ ನೋಡಿ). ಉದಾಹರಣೆಗೆ, ಎಲ್ಲಾ ಕಾಲದಲ್ಲಿಯೂ ಯುವಕರು, ಭಿನ್ನಾಭಿಪ್ರಾಯ ಮತ್ತು ಆಯ್ಕೆಯ ತಡೆಯಲಾಗದಂಥ ಹಾಗೂ ಪ್ರಾಕೃತಿಕವಾದ ತೊಂದರೆಗಳನ್ನು ಎದುರಿಸಬೇಕು. ಎಲ್ಲಾ ಕಾಲದಲ್ಲಿಯೂ ಎಂದರೆ, ಬಾಲ್ಯದಿಂದಲೂ ಪ್ರಾಕೃತಿಕ ಮತ್ತು ತಡೆಯಲಸಾಧ್ಯವಾದ ವಿರೋಧಗಳು ಮತ್ತು ಆಯ್ಕೆಗಳ ತೊಂದರೆಗಳಿಂದ ನರಳಲೇ ಬೇಕು. ಇದು ಅವರು ಬೆಳೆದು ದೊಡ್ಡವರಾಗುವವರೆಗಿನ ಎಲ್ಲಾ ಕಾರ್ಯ ಕ್ಷೇತ್ರಗಳಲ್ಲಿ, ವಿದ್ಯಾಭ್ಯಾಸ, ಜೀವನೋಪಾಯದ ಆಯ್ಕೆಗಳಲ್ಲಿ, ಹಿರಿಯರೊಂದಿಗಿನ ಸಂಬಂಧದಲ್ಲಿ, ಇತ್ಯಾದಿಗಳಲ್ಲಿ ಅವರು ಎದುರಿಸಲೇಬೇಕಾಗುತ್ತದೆ. ಆಧುನಿಕ ಭಾರತೀಯ ಯುವಕರ ತೊಂದರೆಗಳು, ಶೀಘ್ರವಾಗಿ ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗಳಿಂದ (ಎಂದರೆ ವಸಾಹತುಶಾಹಿ ಆಳ್ವಿಕೆಯಿಂದ ಇತ್ತೀಚೆಗೆ ಪಡೆದ ಮುಕ್ತಿಯಿಂದಾಗಿ ಶೀಘ್ರವಾಗಿ ಬದಲಾಗುತ್ತಿರುವ) ಮತ್ತು ವಿಶ್ವವ್ಯಾಪಕ ಮಹತ್ತರ ಬದಲಾವಣೆಯನ್ನು ಉಂಟುಮಾಡುವ ಪ್ರಗತಿಗಳಿಂದಾಗಿ, ಇನ್ನೂ ಹೆಚ್ಚಾಗಿ ಬೆಳೆಯುತ್ತಿವೆ. ಅದೇನೇ ಇದ್ದರೂ, ನಿಜವಾದ ಅಸ್ತವ್ಯಸ್ತತೆಯನ್ನಂತೂ ಪ್ರಭಾವಾತ್ಮಕವಾಗಿ ಓರಣಗೊಳಿಸುವುದು, ನಮ್ಮ ಸ್ವಂತ ಸಂಸ್ಕೃತಿಯ ಮತ್ತು ಅಮೂರ್ತ ಬಳುವಳಿಯ ಪ್ರಸಕ್ತತೆಯ ಪ್ರಶ್ನೆಯನ್ನು ಪ್ರಭಾವಾತ್ಮಕವಾಗಿ ಸ್ಪಷ್ಟಗೊಳಿಸಲ್ಪಟ್ಟಾಗಲೇ, ಎಂದು ಭಾವಿಸಲಾಗಿದೆ. ಅದು ಅವುಗಳ ಹೆಚ್ಚಿನ ಆಕಾರಗಳು ಮತ್ತು ಶಿಷ್ಟಾಚಾರಗಳ ಸಂಬಂಧದಲ್ಲಲ್ಲದೆ, ಅವುಗಳ ಮೂಲ ಸಿದ್ಧಾಂತಗಳು ಮತ್ತು ಸಾರದ ದೃಷ್ಟಿಯಿಂದ ಎಂತಲೂ ಹೌದು. ಈ ಅಂತ್ಯವನ್ನು ಗಮನದಲ್ಲಿ ಇಟ್ಟುಕೊಂಡು, ನಮ್ಮ ಸದ್ಯದ



ವಿದ್ಯಾಭ್ಯಾಸದ ಪದ್ಧತಿಗೆ ಸಂಬಂಧಿಸಿದಂತೆ ಕೆಲವು ಮನೋವೈಜ್ಞಾನಿಕ ಅಂಶಗಳನ್ನು ಇಲ್ಲಿ ಸೂಚಿಸಿರುವುದು, ಅವುಗಳಿಗೆ ಸಂಬಂಧಿಸಿರುವವರಿಂದ ಅವುಗಳೆಲ್ಲವೂ ಪರ್ಯಾಲೋಚಿಸಲ್ಪಡುತ್ತವೆ ಎಂಬ ನಂಬಿಕೆಯಿಂದಷ್ಟೇ.

ಕರಗಳನ್ನು ನೀಡಿ, ಅಥವಾ ಸಮಾಜಕ್ಕೆ ಕಡಿಮೆ ಬೆಲೆಯಲ್ಲಿ ಕೆಲಸಗಾರರನ್ನು ಕಳುಹಿಸಿಕೊಡುವ ಸಾಮಾನ್ಯ ಮನುಷ್ಯರಿಗೆ, ವಿಶ್ವವಿದ್ಯಾಲಯದ ವಿದ್ಯಾಭ್ಯಾಸವು ಕೃತಜ್ಞನಾಗಿರುವಂತೆ ಸೂಚಿಸುತ್ತದೆ ಎಂಬುದು ಎಲ್ಲರಿಗೂ ತಿಳಿಯದ ಹಾಗೂ ವ್ಯಾಪಕವಾಗಿ ಮೆಚ್ಚುಗೆಯಾದದ್ದಲ್ಲ (ಎರಡನೇ ವಿಶ್ವಯುದ್ಧಕ್ಕೆ ಮುಂಚೆ ಚೀನಾದೇಶ ಮಾಡಿದ ಲೆಕ್ಕಾಚಾರಗಳಿಗೆ ಅನುಸಾರವಾಗಿ, ವಿಶ್ವವಿದ್ಯಾಲಯದಲ್ಲಿ ಒಬ್ಬ ಮನುಷ್ಯ ಅಥವಾ ಹೆಂಗಸನ್ನಿಡಲು ಮೂವತ್ತು ಮಂದಿ ರೈತರು ಬೇಕಾಗಿದ್ದರು). ನಮ್ಮ ವಿಶ್ವವಿದ್ಯಾಲಯಗಳಲ್ಲಿ ಓದಿದ ಗಂಡಸರು ಮತ್ತು ಹೆಂಗಸರು, ತಮ್ಮನ್ನು ತಾವು ದೇಶದ ಹಾಗೂ ಸಾಮಾನ್ಯ ಜನರ ನೌಕರರೆಂದು ಭಾವಿಸಿಕೊಂಡು, ತಮ್ಮ ಋಣವನ್ನು ತೀರಿಸಲು ಕಲಿಯುವವರೆಗೆ, ದೇಶದಲ್ಲಿನ ಈ ಅಗಾಧವಾದ ಬಡತನದ ನಿವಾರಣೆಗೆ ಬೇಕಾದ ಸೂಕ್ತ ಮುಖಂಡತ್ವ ಏಳಲು ಹೇಗೆ ತಾನೆ ಸಾಧ್ಯ?

ಇಂದಿನ ವಿದ್ಯಾಭ್ಯಾಸಕ್ಕೆ ಅದರಲ್ಲಿಯೂ ಮುಖ್ಯವಾಗಿ, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಇರುವ ಆಸಕ್ತಿ ಎಂದರೆ ಹಣ ಸಂಪಾದನೆಯೇ ಹೌದು. ಈ ವಿದ್ಯಾಭ್ಯಾಸ, ಈ ವಿಧವಾಗಿ, ಒಬ್ಬ ವಿದ್ಯಾರ್ಥಿಯ ಪೂರ್ಣ ವ್ಯಕ್ತಿತ್ವದ ಸುಧಾರಣೆಗೆ ಪೂರ್ಣವಾಗಿ ಹೊಂದಿಕೆಯಾಗಿಲ್ಲ. ಅದರಿಂದ ಸಮಾಜದ ಉನ್ನತ ಆಸಕ್ತಿಗಳ ಬಗ್ಗೆ ಹೊಂದಿಕೊಂಡು ಬಾಳುವಂತೆ ಮನುಷ್ಯನನ್ನು ಯೋಗ್ಯನನ್ನಾಗಿಸಲೂ ಸಾಧ್ಯವಾಗುತ್ತಿಲ್ಲ. ನಮ್ಮ ವಿದ್ಯಾವಂತರು ಅತ್ಯಂತ ಉನ್ನತ ಮಟ್ಟದ ವಿಚಾರಶಕ್ತಿಯ ಯೋಗ್ಯತೆಯನ್ನು ತೋರಿಸಲು ಯೋಗ್ಯರು. ಆದರೆ ಸೃಷ್ಟ್ಯಾತ್ಮಕ ಚಟುವಟಿಕೆಯತ್ತ ತೊಡಗಿಸಿಕೊಳ್ಳುವುದಿಲ್ಲ ಮತ್ತು ಅತ್ಯಂತ ಕಡಿಮೆ ಆಸಕ್ತಿ ಹೊಂದಿರುತ್ತಾರೆ. ಜೊತೆಗೆ ಗುರುವಿನ ಗಣ್ಯತೆ, ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಬಲವತ್ತಾದ್ದಾಗಿದ್ದರೂ, ಆಧುನಿಕ ಕಾಲದಲ್ಲಿ ಎಷ್ಟೋ ರೀತಿಗಳಲ್ಲಿ ಅದನ್ನು ದುರ್ಬಲಗೊಳಿಸಲಾಗಿದೆ. ಆಧುನಿಕ ಕಾಲವೂ ಹಾಗೆ ನೋಡಿದರೆ, ವಿದ್ಯೆಯ ಮಟ್ಟವೇ ನರಳುತ್ತಿರುವಂಥ ಪರಿಸ್ಥಿತಿಗೆ ಬಂದಿರುವ ಕಾಲವೇ ಹೌದು. ಇವೆಲ್ಲವೂ ನಾವು ಇಂದು ಸಿಕ್ಕಿಕೊಂಡಿರುವ ದುರ್ನೀತಿಯ ವಲಯದ ಒಂದು ಬಲೆಯೇ ಆಗಿ ನಿರ್ಮಿತವಾಗಿವೆ.

### ತನ್ನ ಸ್ವಂತ ಸ್ಥಳದಲ್ಲಿ ಪ್ರತಿಯೊಂದೂ ಉತ್ತಮವಾದದ್ದೇ!

ಪ್ರಾಕೃತಿಕವಾಗಿ ಮನುಷ್ಯ ಸಂಘಜೀವಿಯೇ ಆಗಿದ್ದರೂ, ಅವನ ಜೀವನದ ಗುಣವನ್ನು, ಅವನ ಸಾಮಾಜಿಕ ನಾಯಕತ್ವದ ಗುಣದಿಂದಲೇ ಹೆಚ್ಚಾಗಿ ನಿರ್ಧರಿಸುವುದು. ಈ ಮುಖಂಡತ್ವವನ್ನು ವಿದ್ಯಾವಂತರ ಸಮಾಜ ಮತ್ತು ಧೀಮಂತರು

ಸಾಮಾನ್ಯವಾಗಿ ಒದಗಿಸುತ್ತಾರೆ. ಏಕೆಂದರೆ ಸಾಮಾನ್ಯ ಮನುಷ್ಯನು ಮಾರ್ಗದರ್ಶನಕ್ಕಾಗಿ ಅವರತ್ತಲೇ ಪ್ರಾಕೃತಿಕವಾಗಿ ದೃಷ್ಟಿ ಹರಿಸುತ್ತಾನೆ. ಈ ಧೀಮಂತರ ಪ್ರಾಕೃತಿಕ ಸ್ಥಿತಿ, ಸಾಮಾಜಿಕ ಶ್ರೇಣಿ ವ್ಯವಸ್ಥೆಯಲ್ಲಿ ಗುರುತಿಸಲ್ಪಟ್ಟಿದ್ದು, ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯಿಂದಲೇ. ವಿದ್ಯಾಭ್ಯಾಸದ ಗುಣಮಟ್ಟ ಮತ್ತು ಬೌದ್ಧಿಕ ಹಾಗೂ ನೈತಿಕ ತರಬೇತಿ ಕಳಪೆ ಗುಣಮಟ್ಟದ್ದಾದರೆ, ಆಗ ಮುಖಂಡತ್ವ ಅವರ ಕೈ ಬಿಟ್ಟು ಹೋಗುವುದು, ಆನುವಂಶಿಕತೆಯ ಯಾವ ಅನುಕೂಲವನ್ನೂ ತಡೆದುಕೊಳ್ಳಲಾಗದಿದ್ದರಿಂದಲೇ, ಹೌದು. ಇಂದು ನಿಜವಾಗಿ ನಡೆಯುತ್ತಿರುವುದೂ ಅದೇ. ನ್ಯಾಯವೋ ಅನ್ಯಾಯವೋ, ಮುಖಂಡತ್ವ ಹಣವಂತರತ್ತಲೇ ಹೋಗುತ್ತದೆ. ನಮ್ಮ ಸಾಂಪ್ರದಾಯಿಕ ಚಿಂತನೆಯಿಂದಾದ ಈ ಬಳಸುದಾರಿಯ ಪರಿಣಾಮಗಳು, ಸಾದ್ಯಂತವಾಗಿ ಹೇಳಲು ಅತ್ಯಂತ ವಿಶದವಾಗಿವೆ.

ನಮ್ಮ ಸಾಂಪ್ರದಾಯಿಕ ಪ್ರಯೋಜನಗಳಿಗೆ ಅನುಗುಣವಾಗಿ, ಬುದ್ಧಿವಂತನು ಜೀವನದ ಬಗ್ಗೆ ಒಂದು “ವಿಸ್ತಾರವಾದ ದೃಷ್ಟಿಕೋನ” ಹೊಂದಿರಬೇಕು. ಇಂದು, ಅಂಥ ದೃಷ್ಟಿಯನ್ನು ಹೊಂದಿರದೆ, ನಾವು ಒಂದು ಮಿತವಾದ ದೃಷ್ಟಿಕೋನವನ್ನು ಎಂದರೆ ಜೀವನದ ಕೇವಲ ಲಾಭಕ್ಕಾಗಿ ನಡೆಸುವ ಹಾಗೂ ಪ್ರಾಪಂಚಿಕ ಆಸಕ್ತಿಗಳ ಬಗ್ಗೆಯ ದೃಷ್ಟಿಕೋನ ಹೊಂದಿದ್ದೇವೆ. ಎರಡನೆಯ ದೃಷ್ಟಿಕೋನವೂ ಮುಖ್ಯವಾದದ್ದೇ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಒಂದು ಅಂಶದವರೆಗೆ ಮಾತ್ರ. ವಿದ್ಯಾವಂತನೊಬ್ಬ ಪೂರ್ಣವಾಗಿ ತನ್ನ ತೊಂದರೆಗಳನ್ನು ತಾನೇ ಗಮನಿಸದಿದ್ದರೆ, ಅವನು ಸಮಾಜಕ್ಕೆ ಏನು ತಾನೇ ಮಾಡಿಯಾನು? ಜೊತೆಗೆ, ಇಂದಿನ ‘ಆಧುನಿಕ’ ಎನ್ನಿಸಿಕೊಂಡ ವಿದ್ಯಾಭ್ಯಾಸದ ಮೂಲಕ, ವ್ಯಕ್ತಿಯು ಒಂದು ಬಂಧನರಹಿತ, ನಿಷ್ಪಾಕ್ಷಿಕ ಮತ್ತು ಕ್ರಿಯಾತ್ಮಕ ದೃಷ್ಟಿಕೋನ ಹೊಂದುವುದನ್ನು ಕಲಿಯದೆ, ಸುಮ್ಮನಿರುತ್ತಾನೆ. ನಮ್ಮ ಧಾರ್ಮಿಕ ಗ್ರಂಥಗಳು ತಿಳಿಸಿರುವಂತೆ, ಅಂಥ ದೃಷ್ಟಿಕೋನಗಳು ಪ್ರಾಸಂಗಿಕವಾಗಿ ವೈಜ್ಞಾನಿಕವೂ ಆಗಿರುತ್ತವೆ. ಅಂಥ ಗುಣಗಳಿಲ್ಲದ ಮುಖಂಡತ್ವ ಒಂದು ವಾಸ್ತವವಾದ ಅನಾಹುತದ್ದೇ ಆಗಿರುತ್ತದೆ ಎಂಬುದನ್ನೂ ನಾವೀಗ ಯಾತನೆಯಿಂದ ಗಮನಿಸುತ್ತಿದ್ದೇವೆ.

ಸದ್ಯದ ವಿದ್ಯಾಭ್ಯಾಸದ ಪದ್ಧತಿಯು ಆಧುನಿಕತೆ ಮತ್ತು ಪಾಶ್ಚಾತ್ಯ ಭಾವನೆಗಳಿಂದ ತುಂಬಿಹೋಗಿದೆ ಮತ್ತು ನಮ್ಮ ಸ್ವಂತದ ವಿಶಿಷ್ಟ ಲಕ್ಷಣಗಳು, ಮೂಲ ಪ್ರಕೃತಿ ಮತ್ತು ಸಾಧ್ಯತೆಗಳಿಗನುಗುಣವಾಗಿ ರೂಪಿತಗೊಂಡಿಲ್ಲ ಎನ್ನುವಂತೆ ಕಂಡುಬರುತ್ತದೆ. ಇಲ್ಲಿನ ಮೂಲ ರಚನೆಗಳ ಬಗ್ಗೆ ವಿದ್ಯಾರ್ಥಿಗಳು ಹೆಚ್ಚು ಕಲಿಯಲಿಲ್ಲ. ಬದಲಿಗೆ ಪಾಶ್ಚಾತ್ಯ ಪ್ರಭಾವದಿಂದ ಸ್ವತಂತ್ರರಾಗಿರಲಿಲ್ಲ. ಆದ್ದರಿಂದ ರಾಷ್ಟ್ರೀಯ ಕೀಳರಿಮೆಯ ಭಾವನೆಯಿಂದ ನಿವೃತ್ತರಾಗಲೂ ಇಲ್ಲ. ಜೊತೆಗೆ ಸ್ವಂತದ ಸಂಸ್ಕೃತಿಯನ್ನು ತ್ಯಜಿಸಿ, ಅದನ್ನು ಇತರರ ಕಣ್ಕಟ್ಟಿನ ವಿಷಯಕ್ಕಾಗಿ, ನಿಕೃಷ್ಟವಾಗಿ ನೋಡುವುದು ಬುದ್ಧಿವಂತಿಕೆ



ಅಲ್ಲವೇ ಅಲ್ಲ. ಏಕೆಂದರೆ ಅದು ದೀರ್ಘಕಾಲದ ನಂತರ ಒಳಗಿನ ಮನೋವೈಜ್ಞಾನಿಕ ಸಮತೆಯನ್ನು ಕಲಕುತ್ತದೆ. ಅದೇ ಈಗ ನಿಜವಾಗಿಯೂ ಆಗಿರುವುದು ಮತ್ತು ವಿದ್ಯಾವಂತರ ಶ್ರೇಣಿಯಲ್ಲಿ ಕಂಡುಬರುವ ಸಾಕಷ್ಟು ಹೆಚ್ಚು ಕಡಿಮೆಗಳ ಮೂಲವೂ ಆಗಿದೆ. ಲೇಖಕರು ಅಂಥ ಆಧಾರಭೂತವಾದ ಮನೋವೈಜ್ಞಾನಿಕ ಪ್ರಶ್ನೆಗಳನ್ನು, ನಿಜವಾಗಿ, ಸಾಮಾನ್ಯ ವಿದ್ಯಾವಂತ ಭಾರತೀಯನೇ ಆಗಲಿ ಅಥವಾ ನಮ್ಮ ದೇಶದ ಶೈಕ್ಷಣಿಕ ಕಾರ್ಯನೀತಿಯನ್ನು ರೂಪಿಸುವ ಜನರೇ ಆಗಲಿ, ಗಮನಿಸುತ್ತಿರುವರೇ ಎಂದು ಲೇಖಕರು ಆಶ್ಚರ್ಯಪಡುತ್ತಾರೆ.

ಎಲ್ಲವನ್ನೂ ನಾವು ಮತ್ತೆ ಹೇಳಬೇಕು ಎಂದರೆ, ನಮ್ಮ ವಿದ್ಯಾಭ್ಯಾಸದಲ್ಲಿನ ಕೊರತೆಗಳು ಒಳ ಅಂಶಗಳಿಗೆ ಸಂಬಂಧಿಸಿದಂತೆ ಇಲ್ಲವೇ ಇಲ್ಲ. ಎಂದರೆ, ಇಂಗ್ಲಿಷ್ ಕೂಡ ಸೇರಿದಂತೆ ಪರಭಾಷೆಗಳ ಕಲಿಕೆ, ವಿಜ್ಞಾನ ಮತ್ತು ಔದ್ಯೋಗಿಕ ವಿಜ್ಞಾನ ಇತ್ಯಾದಿಗಳ ಬಗ್ಗೆ ನಮ್ಮ ಆಸಕ್ತಿ ಪೂರ್ಣವಾಗಿರಬೇಕು. ಜೊತೆಗೆ ಅದೇ ಸಮಯದಲ್ಲಿ ನಾವು ನಮ್ಮ ಸಂಸ್ಕೃತಿ ಮತ್ತು ಪರಂಪರೆಯಿಂದ ಪ್ರಾಪ್ತವಾದ ಸಿದ್ಧಾಂತವನ್ನು, ನಮ್ಮ ಸಂತರು ಮತ್ತು ಅವಧೂತರು ವ್ಯಾಖ್ಯಾನಿಸಿರುವಂತೆ, ತಪ್ಪದೆ ಉಳಿಸಿಕೊಂಡು ಬರಬೇಕು. ಆಧುನಿಕ ವಿಜ್ಞಾನದ ಸ್ಫೂರ್ತಿಯೂ ಸಹ, ಯಾವುದರಲ್ಲಿಯೂ, ನಮ್ಮ ಸಾಂಸ್ಕೃತಿಕ ಆನುವಂಶಿಕ ಪ್ರಾಪ್ತಿಗಿಂತ ಬೇರೆಯಲ್ಲ.

ಒಂದು ದೇಶದ ಆರ್ಥಿಕ ಸ್ಥಿತಿಗೆ ಸಂಬಂಧಿಸಿದಂತೆ, ನಮ್ಮ ಇಂದಿನ ದಿನಗಳ ಕೆಡಕುಗಳ ವಿಂಗಡಣೆಗಳಿಗೆ ಸಂಬಂಧಿಸಿದಂತೆ ಬಾಹ್ಯ ದೇಶಗಳ ಭಾವನೆಗಳು ಮತ್ತು ತಾಂತ್ರಿಕತೆಯ ಹೆಚ್ಚಿನ ಪ್ರಮಾಣದ ಆಮದು, ಹೆಚ್ಚಿನ ನಿಭಾವಣೆ ತಜ್ಞರನ್ನು ಯಾವ ನಿಷ್ಕರ್ಷೆಗೆ ತಂದು ನಿಲ್ಲಿಸುತ್ತಿದೆ ಎಂದರೆ, ವ್ಯಕ್ತಿಯೊಬ್ಬ ತನ್ನ ಸ್ವಂತ ಸಂಸ್ಕೃತಿಯಲ್ಲಿ ಕಾಲೂರಿ ನಿಂತಾಗಲೇ, ಅವನು ಇತರ ಸಂಸ್ಕೃತಿಗಳ ಅಥವಾ ಆ ಮೂಲಕದ ಸಹಾಯಾತ್ಮಕ ವಿಷಯಗಳಿಂದ, ಲಾಭ ಪಡೆಯಬಲ್ಲ.

* * * *

# ೫. ನಿರ್ಣಯಾತ್ಮಕ ಅಥವಾ ಸಿದ್ಧಾಂತಕ್ಕೆ ಬರುವ ಹೇಳಿಕೆಗಳು

ಆಧುನಿಕ ಯುಗ, ಅನುಮಾನವೇ ಇಲ್ಲದಂತೆ, ಆಧುನಿಕ ವಿಜ್ಞಾನದಿಂದ ಆಧರಿಸಲ್ಪಟ್ಟ ತಂತ್ರಶಾಸ್ತ್ರದ ಯುಗವೇ ಆಗಿದೆ. ಏನೇ ಇದ್ದರೂ, ಆಧುನಿಕ ತಂತ್ರಶಾಸ್ತ್ರದ ನಿಯಂತ್ರಣವಿಲ್ಲದ ಪ್ರಾಧಾನ್ಯ, ಸಮಾಜಕ್ಕೆ ಒಳ್ಳೆಯದನ್ನು ಮಾಡುವುದಕ್ಕಿಂತ ಕೆಟ್ಟದ್ದನ್ನೇ ಹೆಚ್ಚಾಗಿ ಮಾಡುವುದು, ಒಂದು ರೀತಿಯ ಸಾಂಸ್ಕೃತಿಕ ಅಧಃಪತನದ ಮೂಲಕವೇ. ಏಕೆಂದರೆ ಅಂಥ ಸಮಾಜವು ವಿಜ್ಞಾನದ ಸ್ಫೂರ್ತಿಯನ್ನು ಇಷ್ಟಪಡುವುದಿಲ್ಲ. ಅಧಃಪತನದ ಮುಖ್ಯವಾದ ಸೂಚನೆಗಳು, ಮಿತಿಮೀರಿದ ಸಂಕುಚಿತ ದೃಷ್ಟಿ ಮತ್ತು ಅತಾರ್ಕಿಕದ್ದು ಎಂದೇ ಕಂಡುಬರುತ್ತವೆ. ಆಧುನಿಕತೆಯ ಪ್ರವೀಣರಿಂದ ಸೂಚಿಸಲಾಗುತ್ತಿರುವಂತೆ, ಪ್ರಾಯಶಃ ಒಂದು ಮಿತಿಯವರೆಗೆ, ಸಂಕುಚಿತ ದೃಷ್ಟಿ ಮತ್ತು ಅತಾರ್ಕಿಕತೆ ಖಂಡಿತವಾಗಿಯೂ, ಹೊರಕೋರಿಕೆಯಲ್ಲಿ ಧಾರ್ಮಿಕರು ಮತ್ತು ವಿಧಿವತ್ತಾದ ನಡವಳಿಕೆಯಲ್ಲಿ ತೊಡಗಿಕೊಂಡವರಲ್ಲಿ ಖಂಡಿತವಾಗಿಯೂ ಇರುವಂತೆ ಕಂಡುಬರುತ್ತದೆ. ಆದರೆ ನಮ್ಮ ಸಾಂಪ್ರದಾಯಿಕ ಸಂಸ್ಕೃತಿ ಮತ್ತು ಧರ್ಮವನ್ನು, ಆ ಆಧಾರದ ಮೇಲೆ ಟೀಕಿಸುವುದು ಖಂಡಿತವಾಗಿಯೂ ಸರಿಯಲ್ಲ. ಏಕೆಂದರೆ ಧಾರ್ಮಿಕ ಮತ್ತು ಇತರ ಹೊರಗಿನ ರೀತಿ ನೀತಿಗಳು, ನಮ್ಮ ಸಂಸ್ಕೃತಿಯ ಅಂಗವೇ ಆಗಿದ್ದರೂ, ತಾವಾಗಿ ಮೂಲ ಸ್ಫೂರ್ತಿ ಇಲ್ಲದಾಗ ನಿಭಾಯಿಸಲಾಗದಂಥವು. ಧರ್ಮದ ಹಿರಿಮೆಯನ್ನು ಆಸ್ವಾದಿಸಲು, ವ್ಯಕ್ತಿಯು ರೀತಿ ಮತ್ತು ಸ್ಫೂರ್ತಿ ಎರಡನ್ನೂ ಹೊಂದಿರಬೇಕು. ನಮ್ಮ ಸಂಸ್ಕೃತಿ ಮತ್ತು ಧರ್ಮಗಳ ಮೂಲ ಮನೋಭಾವ ಏನೆಂಬುದರ ಬಗ್ಗೆ ಈಗಾಗಲೇ ನಾವು ಮೂರನೆಯ ಅಧ್ಯಾಯ, "ನಮ್ಮ ಸಂಸ್ಕೃತಿ ಮತ್ತು ಮೂರ್ತ ಅಮೂರ್ತ ಬಳುವಳಿ" ಎಂಬುದರಲ್ಲಿ ವಿಚಾರಣೆ ಮಾಡಿದ್ದೇವೆ.

ಪಾಶ್ಚಾತ್ಯ ವಿದ್ಯಾವಂತ ಮಹಿಳೆಯರು ಮತ್ತು ಪುರುಷರಲ್ಲಿ ದೂರದೃಷ್ಟಿಯಿಲ್ಲದ ಭಾವನೆಯೂ ಕಡಿಮೆ ಅತಿರೇಕದ್ದಲ್ಲ. ನಿಜವಾದ ಅಭ್ಯಾಸದಲ್ಲಿ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕತೆಯ ಅನೌಪಚಾರಿಕ ಬಾಯಿಮಾತಿನ ಬೆಂಬಲಿಗರೂ ಸಹ ವೈಜ್ಞಾನಿಕ ಸ್ಫೂರ್ತಿಯ ಸಾಕ್ಷಿಯಾಗಿ ಹೆಚ್ಚಿಗೆ ಏನನ್ನೂ ತೋರಿಸುತ್ತಿಲ್ಲವೆನ್ನಿಸುತ್ತಿದೆ. ಹೆಚ್ಚಿನ ಇಂದಿನ ವಿದ್ಯಾವಂತ ಭಾರತೀಯರು, ಸಂಸ್ಕೃತಿಯನ್ನು ಲಾಭಕ್ಕಾಗಿ ನಡೆಸುವ ಅಂತಸ್ತಿಗೇ ಸರಿಯಲ್ಲದ ರೀತಿಯಲ್ಲಿ, ದಿಕ್ಕುಗೆಡಿಸುತ್ತಾರೆ ಎಂಬುದು ದುಃಖದ ಅಂಶ. ಹಾಗೆ ನೋಡಿದರೆ, ನಮ್ಮ ದೇಶದಲ್ಲಿ ಈಗ ಕಂಡುಬರುತ್ತಿರುವ ಮುಖಂಡತ್ವದ



ಗುಣಗಳ ನಿಜವಾದ ವಿಷಮ ಪರಿಸ್ಥಿತಿಯೇ ಉಂಟಾಗಿದೆ ಎಂಬುದನ್ನು ಎಷ್ಟೋ ಮಂದಿ ಸದಾಚಾರಿಗಳು ಆಗಾಗ ತಿಳಿಸುತ್ತಲೇ ಇರುತ್ತಾರೆ. ಮುಖಂಡತ್ವದ ಗುಣಗಳ ಈ ಪ್ರಶ್ನೆ, ವಿದ್ಯಾಭ್ಯಾಸದ ಕಾರ್ಯನೀತಿಯೊಂದಿಗೆ ನೇರವಾಗಿ ಸಂಬಂಧಿಸಿದ್ದು, ಎರಡನ್ನೂ ಸಾಮಾಜಿಕ ಹಾಗೂ ವೈಯಕ್ತಿಕ ಮಟ್ಟದಲ್ಲಿ, ವಿಮರ್ಶಾತ್ಮಕ ಲೇಖನವಾಗಿ ನಾಲ್ಕನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಅರ್ಥಶಾಸ್ತ್ರಕ್ಕೆ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಎಷ್ಟೋ, ಬದುಕಿನಲ್ಲಿ ಸಮಕಾಲೀನವಾದ ಪ್ರಶ್ನೆಗಳು ಇದ್ದು, ಅವೆಲ್ಲವೂ ತಕ್ಷಣದ ಗಮನವನ್ನು ಆಶಿಸುತ್ತಿವೆ. ಆದರೂ ಲೇಖಕರು, ಆ ಮನೋವೈಜ್ಞಾನಿಕ ಸ್ಥಾಯಿತ್ವದ ನಿರ್ಧಾರಕ ತೊಂದರೆಯನ್ನು ಕಡೆಗಣಿಸಿ ಅಥವಾ ಬಳಸುದಾರಿ ಹಿಡಿದು ಸಾಗುವುದು, ಸದ್ಯದ ಭಾರತೀಯ ಪರಿಸ್ಥಿತಿಯಲ್ಲಿ ಗಾಡಿಯ ಹಿಂದೆ ಕುದುರೆ ಕಟ್ಟಿದಂತಾಗುತ್ತದೆ.

ನಮ್ಮ ಸದ್ಯದ ಸಾಂಸ್ಕೃತಿಕ ಅವನತಿಯನ್ನು, ಕೇವಲ ಇತರ ವಿದೇಶಗಳ ಸಂಸ್ಕೃತಿಗಳನ್ನು, ಮತಗಳನ್ನು ಅಥವಾ ಭಾವನೆಗಳನ್ನು ಆಯಾತ ಮಾಡಿಕೊಂಡು ಅಥವಾ ಬಲವಂತವಾಗಿ ಹೊರಿಸಿಕೊಂಡು, ವಿರೋಧಿಸುವುದಕ್ಕಾಗುವುದಿಲ್ಲ. ಆಗ ತೊಂದರೆಯು ಮತ್ತೊಂದು ಅಸಂಬದ್ಧ ಪ್ರಕೃತಿಯನ್ನು ಸೃಷ್ಟಿಸಿ, ಇನ್ನೂ ಹೆಚ್ಚು ಗೋಜಾಗುತ್ತದೆ. ನಮಗೀಗ ಬೇಕಾಗಿರುವುದು, ಒಂದು ಅತ್ಯಂತ ಪ್ರಾಕೃತಿಕ ಮತ್ತು ಹೊಂದಾಣಿಕೆಯ ಸಾಂಸ್ಕೃತಿಕ ಪರಿಸ್ಥಿತಿ ಅಷ್ಟೇ. ಅದರಲ್ಲಿ ವ್ಯಕ್ತಿತ್ವದ ವಿವಿಧ ನುಣುಪು ಮುಖಗಳು ತಮ್ಮತಮ್ಮಲ್ಲೇ ಹೊಂದಿಕೊಳ್ಳುವಂಥ ಒಂದು ಅವಕಾಶ ಪಡೆದುಕೊಂಡು, ಪೂರ್ಣ ವ್ಯಕ್ತಿತ್ವವನ್ನು ಆ ಮೂಲಕ ಸಾಮಾನ್ಯಗೊಳಿಸಿಕೊಳ್ಳಬಹುದು. ಅತ್ಯಂತ ಪ್ರಾಕೃತಿಕ ಹಾಗೂ ಒಗ್ಗುವ ಪರಿಸರ, ಒಂದು ಕ್ರಿಯಾತ್ಮಕ ದೃಷ್ಟಿಕೋನದ ಮೂಲಕ ಒದಗಿ ಬರಬಹುದಾದುದು ಯಾವುದೆಂದರೆ ವ್ಯಕ್ತಿಯ ಸ್ವದೇಶೀ ಸಂಸ್ಕೃತಿ ಮತ್ತು ಸಂಪ್ರದಾಯದ್ದು. ಅವುಗಳೊಂದಿಗೆ ಜನರ ಮೌಲ್ಯಸಂಚಯಗಳು ಮತ್ತು ಪ್ರಾಕೃತಿಕ ಮನೋವೃತ್ತಿಗಳೂ ಕೂಡಿಕೊಂಡಿರುತ್ತವೆ.

ಆಧುನಿಕ ವಿದ್ಯಾವಂತ ಭಾರತೀಯರು, ತಾವಾಗಿ ಭಾರತೀಯ ಸಂಸ್ಕೃತಿಯ ಮೂಲ ಸಿದ್ಧಾಂತಗಳು ಮತ್ತು ಬೇಕಾಗಿರುವ ಧ್ಯೇಯಗಳನ್ನೊಳಗೊಂಡಿರುವ ವಿಷಯಗಳ ಬಗ್ಗೆ ತಾವಾಗಿ ಕಂಡುಕೊಳ್ಳಲು ಸೂಕ್ತ ಸಮಯ. ಅದಕ್ಕೆ ಬದಲಾಗಿ ತಪ್ಪಾದ ಮತ್ತು ದಾರಿತಪ್ಪಿಸುವ ಭಾವನೆಗಳ ಆಧಾರಿತ ವಿರೋಧಾಭಿಪ್ರಾಯಗಳು ಅಥವಾ ಸದ್ಯದಲ್ಲಿ ಕೀಳುಮಟ್ಟಕ್ಕಿಳಿದಿರುವ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆಯ ತೋರಿಕೆಯ ಅಭಿಪ್ರಾಯಗಳ ಮೇಲೆ ನಿಲ್ಲದೆ ಇರುವುದೇ ಎಷ್ಟೋ ವಾಸಿ. ಸದ್ಯದ ವಿದ್ಯಾಭ್ಯಾಸದ ಪದ್ಧತಿಯ ಮೇಲಿನ ಪ್ರತಿಬಂಧಗಳನ್ನು ದಾಟಿ ಹೋಗಿ, ಹಿಂದಿನ ಕಾಲದ ಹಿರಿಯ ಭಾರತೀಯರು ತಮ್ಮ ಪಾಶ್ಚಾತ್ಯ ವಿದ್ಯಾಭ್ಯಾಸದ ನಂತರವೂ ನಮ್ಮ ಪರಂಪರೆಯ ಬಾವುಟವನ್ನು ಎತ್ತಿ ಹಿಡಿದ ರೀತಿಯಲ್ಲಿ, ನಾವೂ ಸಾಧಿಸಬೇಕು.

ಭಾರತೀಯ ಸಾಹಿತ್ಯದ ಅಂಗವಾದ ಶಾಸ್ತ್ರಗಳ ಮತ್ತು ಕಾಲಾಂತರಗಳಿಂದ ನಮ್ಮ ಸಂತರು ಮತ್ತು ಋಷಿಗಳ ಅನುಭವ, ಜ್ಞಾನ ಮತ್ತು ಬುದ್ಧಿಮತ್ತೆಯ ದಾಖಲೆಗಳಾಗಿರುವ ಶಾಸ್ತ್ರಗಳ ಬಗ್ಗೆಯ ಗಾಢವಾದ ಅರಿವು, ಈ ಮುಖಂಡತ್ವ ವನ್ನರಸಿ ಹೋಗುವವರಿಗಾದರೂ ಬೇಕಾಗುತ್ತದೆ. ಈ ಮೂಲಗ್ರಂಥಗಳು, ನಮಗೆ, ಅವುಗಳಲ್ಲಿರುವ ಅಂತರ್ನಿವಿಷ್ಟ ಯುಕ್ತಾಯುಕ್ತ ಪರಿಜ್ಞಾನವನ್ನು ಮತ್ತು ಅವುಗಳೊಳಗಿನ ವಿವಿಧ ಲಾಂಛನಗಳ ನಿಜವಾದ ಅರ್ಥವನ್ನು ಒದಗಿಸುತ್ತದೆ. ಪ್ರಾಯಶಃ ಅವುಗಳೇ ರೂಪಗಳು, ನಿಯಮಾನುಷ್ಠಾನಗಳು ಮತ್ತು ವಿಧಿವತ್ತಾದ ನಡವಳಿಕೆಗಳು ಮುಂತಾದವುಗಳ ಮೂಲವಾಗಿದ್ದು, ಇಂದು ಪ್ರಚಾರದಲ್ಲಿರುವು ದಾಗಿರಬಹುದು. ಆದರೆ ಯಾವ ನಿಜವಾದ ಮನೋಭಾವಗಳನ್ನೂ ಹೊಂದಿಲ್ಲದಂತಾಗಿದೆ. ನಮ್ಮ ಸ್ವಂತ ಸಂಸ್ಕೃತಿಯ ಹೊರಗಿನ ಶಿಷ್ಟಾಚಾರಗಳಲ್ಲಿ ಚೈತನ್ಯವನ್ನುಂಟಾಗಿಸಲು ಮತ್ತು ಕಾಳನ್ನು ಹೊಟ್ಟಿನಿಂದ ಜರಡಿಯಾಡುವುದಕ್ಕಾಗಿ ಇರುವುದು ಒಂದೇ ವಿಧಾನ. ಭಾರತೀಯ ಸಮಾಜದಿಂದ ಅಧಃಪತನದ ಅವಿವೇಕದ ಹೇಳಿಕೆಗಳಿಗೆ ಅಡ್ಡಗಟ್ಟೆಯನ್ನು ನಿರ್ಮಿಸುವುದಕ್ಕೆ ಅದೇ ಮೊದಲ ಹೆಜ್ಜೆಯಾಗುತ್ತದೆ ಪ್ರಾಯಶಃ.

ಅಂಥ ನಿರ್ಧಾರದ ಕೆಲಸ, ಚರಿತ್ರೆಯಲ್ಲಿ ಹಿಂದಕ್ಕೆ ಹೋಗುವುದೆಂದು ಆಗುವುದಿಲ್ಲ. ಬದಲಿಗೆ, ವಿದ್ಯಾವಂತರು ಸರಿಯಾದ ಚಾರಿತ್ರಿಕ ಹಿನ್ನೆಲೆಯಲ್ಲಿ ಇಂದಿನ ದಿನಗಳ ರಾಷ್ಟ್ರೀಯ ತೊಂದರೆಗಳನ್ನು ನೋಡುವಂತೆ ಪ್ರೋತ್ಸಾಹಿಸುತ್ತದೆ. ಜೊತೆಗೆ ನಮ್ಮ ಸಮಾಜದಲ್ಲಿರುವ ಹೆಚ್ಚಿನ ಗೊಂದಲಗಳನ್ನು ಸರಿಪಡಿಸಲು ಸಹಾಯ ಮಾಡುತ್ತದೆ.

ಅಂಥ ಅನೌಪಚಾರಿಕ ವರ್ತನೆ ಮತ್ತು ಸಮನ್ವಯ ಸಾಧನೆಗೆ, ಪ್ರತ್ಯೇಕ ವ್ಯಕ್ತಿಯ ವ್ಯಾಸಂಗ ಮತ್ತು ಅದರ ಬಗ್ಗೆಯ ದೀರ್ಘ ಚಿಂತನೆಯ ಸಾಂಪ್ರದಾಯಿಕ ಅಭ್ಯಾಸಗಳು, ಗುಂಪಾಗಿ ಸೇರಿ ಬುದ್ಧಿಜೀವಿಗಳೊಂದಿಗೆ ವಿಚಾರ ವಿಮರ್ಶೆ ಮತ್ತು ಭಾರಿ ಸಭೆಗಳಲ್ಲಿ ವಿದ್ವಾಂಸರಿಂದ ಭಾಷಣಗಳು (ಸ್ವಾಧ್ಯಾಯ, ವಿಚಾರ, ಸತ್ಸಂಗ, ಕಥಾ ಇತ್ಯಾದಿಗಳು) ಮುಂತಾದವನ್ನು ಸುಲಭವಾಗಿ ಅಳವಡಿಸಿಕೊಳ್ಳಬಹುದು. ಜ್ಞಾನೋದಯ ಪಡೆದಿರುವವರಿಂದ ಮಾರ್ಗದರ್ಶನವನ್ನು ಪಡೆಯಬಹುದು. ನಮ್ಮಗಳ ನಡುವೆ ಅಂಥ ಮಹನೀಯರು ಎಷ್ಟೇ ಕಡಿಮೆ ಸಂಖ್ಯೆಯಲ್ಲಿದ್ದರೂ, ನಮ್ಮ ಸಂಸ್ಕೃತಿಯ ಒಳಗಿನ ಅಂತಸ್ಸತ್ವವನ್ನು ಎತ್ತಿ ಹಿಡಿಯುತ್ತಾರೆ. ಈ ಮುಂಚೆ ಹೇಳಲ್ಪಟ್ಟ ಅಭ್ಯಾಸಗಳು ಹಿಂದಿನ ಕಾಲದಲ್ಲಿ ಸಾಕಷ್ಟಿದ್ದವು ಮತ್ತು ಸ್ವಾತಂತ್ರ್ಯ ಚಳುವಳಿಯ ದಿನಗಳಲ್ಲಿಯೂ ಅವನ್ನು ಮರೆತಿರಲಿಲ್ಲ, ಎಂದರೂ ಈಗಲೂ ಇವೆ. ಆದರೆ, ಕೇವಲ ಕೆಲವೇ ಜನರು ಮತ್ತು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕೆಲವೇ ಸಂಸ್ಥೆಗಳಲ್ಲಿ ಮಾತ್ರ. ಒಂದು ರೀತಿಯ ಪೂರ್ಣತೆಯನ್ನು



ನೀಡಲು, ಅಂಥ ಅಭ್ಯಾಸಗಳು, ಸಾಮಾನ್ಯರಿಗೆ ಸೇವೆ ಸಲ್ಲಿಸುವ ಕಾರ್ಯಕ್ರಮಗಳೊಂದಿಗೆ ಸೇರಿರುತ್ತವೆ. ಹೆಚ್ಚು ಹಣದ ಅಥವಾ ಉತ್ತಮ ಶಕ್ತಿಯ ಪ್ರೋತ್ಸಾಹವೂ, ನಿರ್ವಹಣೆಗಾಗಿ ಬೇಕಾಗುವುದಿಲ್ಲ.

ಕಡೆಯದಾಗಿ, ಈ ವಿಧವಾದ ಕೆಲಸ ಕಾರ್ಯಗಳನ್ನು ಆಂತರಿಕ ಅವಲಂಬನೆ ಗಳೊಂದಿಗೆ ನಿಭಾಯಿಸಿದಾಗ, ಅವುಗಳಿಂದ, ಮನುಷ್ಯನಲ್ಲಿ ಅಡಗಿರುವ ನಿರ್ವಿಕಲ್ಪ ಏಕೀಕರಣದ ಯಥಾರ್ಥತೆಯನ್ನು ಅರಿಯುವ ಸಲುವಾಗಿ, ಒಳಗಿರುವ ಪ್ರಬಲ ಅಪೇಕ್ಷೆ ಕೇಂದ್ರೀಕೃತಗೊಳ್ಳುತ್ತದೆ. ಆ ಯಥಾರ್ಥತೆ, ಬದಲಾಗುತ್ತಿರುವ ಪ್ರಪಂಚದ ಎಲ್ಲಾ ನಿಜವೆಂದು ತೋರುವ ವೈವಿಧ್ಯಗಳ ಹಿಂದೆ ಇರುತ್ತದೆ. ಇದರೊಂದಿಗೆ ನಾವು ಇಂದಿನಂತೆ ಯಾವ ವ್ಯತಿರಿಕ್ತ ಪರಿಸ್ಥಿತಿಗಳನ್ನೂ ಪ್ರತಿಭಟಿಸದೆ, ಸಮತೆ, ನಿಖರತೆ, ಮತ್ತು ಪೂರ್ಣತೆಗಾಗಿ ಹೋರಾಡುವುದರ ಮೌಲ್ಯವನ್ನು ಅರಿಯುತ್ತೇವೆ.

ಈ ಪೂರ್ಣತೆಗಾಗಿ ಇರುವ ಮಾನವನ ಪ್ರಯತ್ನ ನಿಸ್ಸಂಶಯವಾಗಿಯೂ ದೃಷ್ಟಿ ವೈಶಾಲ್ಯವಿಲ್ಲದ ವ್ಯಕ್ತಿತ್ವವನ್ನು ಮೀರುತ್ತದೆ. ಛಿದ್ರವಾದ ಜ್ಞಾನದ ತಿಳಿಗೇಡಿತನವನ್ನು ಬಹಿರಂಗಪಡಿಸುವುದರೊಂದಿಗೆ, ಅಂಥ ಅಭ್ಯಾಸಗಳು ನಿಜವಾಗಿಯೂ, ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯದ ಸಮರ್ಥವಾದ ಕಾರ್ಯಪ್ರವೃತ್ತಿಗಳು ಮತ್ತು ಸಂಪ್ರದಾಯ ಪಾಲನೆಯನ್ನು ಸರಿಯಾದ ದೃಷ್ಟಿಕೋನದಲ್ಲಿ ನೋಡುವಂತೆ ಖಂಡಿತವಾಗಿಯೂ ಪ್ರೋತ್ಸಾಹಿಸುತ್ತವೆ. ಆದ್ದರಿಂದ ಅವುಗಳ ಯೋಗ್ಯ ಕಿಮ್ಮತ್ತು ಮತ್ತು ಪ್ರಯೋಜನ ಎರಡೂ, ಸಮಾಜದ ಪ್ರಾಕೃತಿಕ ಸತ್ವ ಮತ್ತು ಶಕ್ತಿಗಳನ್ನು ಮತ್ತೆ ಪಡೆಯುವಂತೆ ಸಹಾಯ ಮಾಡುತ್ತವೆ ಮತ್ತು ಅಂತಿಮವಾಗಿ ವಿಶ್ವದ ಕಲೆಗಳಲ್ಲಿ ಉನ್ನತಿ ಪಡೆದ ಸಮಾಜದ ಸ್ಥಿತಿಯನ್ನು ಸಮನ್ವಯಗೊಳಿಸಲು ಪ್ರಾಯಶಃ ಸಹಾಯ ಮಾಡುತ್ತದೆ.

* * * *

# ಅನುಬಂಧ

ಶ್ರೀ ಕೆ. ಸೀತಾರಾಮ್, ಶ್ರೀ ವಿ. ಶಿವ ಮತ್ತು ಶ್ರೀ ಜೆ. ಬಂದ್ಯೋಪಾಧ್ಯಾಯ ಎಂಬುವರು ಬರೆದಿದ್ದ "ಸೈನ್ಸ್ ಅಂಡ್ ಟೆಕ್ನಾಲಜಿ ಇನ್ ಇಂಡಿಯ: ಆ್ಯನ್ ಆಲ್ಟರ್ನೇಟಿವ್ ಪರ್ಸ್ಪೆಕ್ಟಿವ್" ಎಂಬ ಪುಸ್ತಕದಿಂದ ಆಯ್ದುಕೊಂಡ ಭಾಗ: ಪುಟ ೨೩೪ರಿಂದ ೨೪೧.

**ಸಾರಾಂಶ:**

ಸದ್ಯದ ವಿಜ್ಞಾನ ಮತ್ತು ತಂತ್ರಶಾಸ್ತ್ರದ ತಿಳಿವಳಿಕೆಯಿಂದ, ಮುಂದುವರಿದ ರಾಷ್ಟ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಶಾಸ್ತ್ರದ ಹೆಸರಿನಲ್ಲಿ ಯಾವ ರೀತಿಯ ಕುರುಡು ಅನುಸರಣೆ ನಡೆಯುತ್ತಿದೆಯೋ, ಅದೊಂದೇ ಭಾರತದಲ್ಲಿ ಮುಂದುವರಿಸಬೇಕಾಗಿರುವ, ಏಕೈಕ ವಿಧಿವತ್ತಾದ ಚಟುವಟಿಕೆ ಎಂಬಂತೆ ಕಂಡುಬರುತ್ತದೆ. ಒಟ್ಟಿನಲ್ಲಿ ಜನತೆಯ ಆಸಕ್ತಿಗೆ ವಿರುದ್ಧವಾದ ವಿಜ್ಞಾನ ಮತ್ತು ತಂತ್ರಶಾಸ್ತ್ರದ ನಿತ್ಯಗಟ್ಟಳೆಯ ಬಳಕೆಯನ್ನು ಮಾತ್ರ ಸ್ಪಷ್ಟವಾಗಿ ಬಹಿರಂಗಪಡಿಸಲಾಗಿಲ್ಲ.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಒಂದು ಕಾರ್ಯಾಗಾರದಲ್ಲಿ, ಈ ವಿದ್ವತ್‌ಪ್ರಬಂಧ ಹಾಗೂ ವರದಿಯನ್ನು, "An Alternate Approach to the Management of Research, Development and Education" ಎಂಬ ವಿಷಯದ ಮೇಲೆ ನೀಡಲಾಯಿತು.

**ವಿಜ್ಞಾನ ಮತ್ತು ತಂತ್ರಶಾಸ್ತ್ರದ ಚರಿತ್ರೆ**

ಚರಿತ್ರೆಯ ಸ್ವಲ್ಪ ಮಾತ್ರ ವಿಕೃತಗೊಳಿಸಲ್ಪಟ್ಟ ಅರಿವಿನ ಮೂಲಕ, ನಾವು ಭಾರತದಲ್ಲಿ ವೈಜ್ಞಾನಿಕ ವಿಧಾನದ ಪ್ರಸ್ತಾವನೆಯನ್ನು ಬ್ರಿಟಿಷರ ಆಡಳಿತದ ಆಗಮನದಿಂದಾಗಿ, ಗುರುತಿಸಲು ಪ್ರವೃತ್ತರಾದೆವು. ಹಾಗೆ ನೋಡಿದರೆ, ಚರಿತ್ರೆಯಲ್ಲಿನ ಅತ್ಯಂತ ಹಿಂದಿನ ದಾಖಲೆಗಳಲ್ಲಿ, ಒಂದು ರೀತಿಯ ಮುಂದುವರಿದ ವೈಜ್ಞಾನಿಕ ಹಾಗೂ ತಂತ್ರಶಾಸ್ತ್ರದ ಜ್ಞಾನವು ಭಾರತದಲ್ಲಿ ಇತ್ತು ಎಂದು ತಿಳಿಯುತ್ತದೆ. ಭಾರತದ ವಸಾಹತುಶಾಹಿಗಿಂತ ಹಿಂದಿನ ಚರಿತ್ರೆಯಲ್ಲಿನ ಅಲ್ಪ ತಪಾಸಣೆ, ವಿಜ್ಞಾನದ ಪ್ರಾಯೋಗಿಕ ಪರೀಕ್ಷೆಗಳು ಮತ್ತು ಮೊತ್ತ ಗೊತ್ತುಮಾಡುವ ವಿಧಾನಗಳಲ್ಲಿ ನಂಬಿಕೆಯ



ಬಗ್ಗೆ ಕೊರತೆಯೇ ಇರಲಿಲ್ಲ ಎಂದು ಸೂಚಿಸುತ್ತವೆ. ಆರ್ಯಭಟ, ಭಾಸ್ಕರ, ಚರಕ ಎಲ್ಲರೂ, ತಮ್ಮ ತಮ್ಮ ತಪಾಸಣೆಗಳ ಕ್ಷೇತ್ರಗಳಲ್ಲಿ ಅತ್ಯಂತ ಜಟಿಲವಾದ ಗಣಿತಶಾಸ್ತ್ರದ ಮತ್ತು ಪ್ರಯೋಗ ಪರೀಕ್ಷೆಗಳ ವಿಧಾನದಲ್ಲಿ ಬಳಸಿದ್ದರು. ಯೂರೋಪಿನಲ್ಲೇ ಆಧುನಿಕ ವಿಜ್ಞಾನದ ವೈಜ್ಞಾನಿಕ ಸೃಷ್ಟಿಯಾಯಿತು ಎಂಬುದು ಒಂದು ಕಾಲ್ಪನಿಕ ಕಥನವಾಗಿದ್ದು, ಅದು ಅತ್ಯಂತ ತೀಕ್ಷ್ಣವಾದ ಚಾರಿತ್ರಿಕ ವ್ಯಾಸಂಗಗಳಿಂದ ಸವೆದು ಹೋಗಲು ಆರಂಭವಾಗಿದೆ. ಏನೇ ಆದರೂ, ಎರಡು ಶತಮಾನಗಳಿಂದ ಈ ಕಾಲ್ಪನಿಕ ಕಥನ, ಸಾಂಪ್ರದಾಯಿಕ ಜ್ಞಾನ ಮತ್ತು ಸಾಂಪ್ರದಾಯಿಕ ತಾಂತ್ರಿಕತೆಗಳಿಗೆ ಒಂದು ತರ್ಕವಿರುದ್ಧವಾದ ಮತ್ತು ಅತೀಂದ್ರಿಯವಾದದ ಮಾನ್ಯತೆ ನೀಡಿ, ಅವುಗಳನ್ನು ಅಸಮರ್ಥನೀಯ ಮತ್ತು ಧ್ವಂಸಕಾರಕವೆಂದು ತೋರಿಸಿದವು. ಸಮಾವೇಶದಲ್ಲಿ ನಡೆದ ಮಾತುಕತೆಗಳಿಂದ, ನಮ್ಮ ಸಾಂಪ್ರದಾಯಿಕ ಪದ್ಧತಿಗಳು ಸದಾಕಾಲಕ್ಕೂ ಸೂಕ್ತ ವಿಜ್ಞಾನ ಮತ್ತು ತಂತ್ರಶಾಸ್ತ್ರಗಳ ಅತ್ಯಂತ ಹೆಚ್ಚಿನ ಸಂಪನ್ಮೂಲಗಳಾಗಿದ್ದವು ಎಂಬುದನ್ನು ಎತ್ತಿ ತೋರಿಸಲು ಸಾಧ್ಯವಾಯಿತು. ವಿಜ್ಞಾನ ಮತ್ತು ತಾಂತ್ರಿಕತೆಯ ಚರಿತ್ರೆಯಲ್ಲಿ, ಈ ಪದ್ಧತಿಗಳ ಬಗ್ಗೆಯ ತತ್ತ್ವಾಧಾರಗಳ ಬಗ್ಗೆ ಆದಷ್ಟೂ ಹೆಚ್ಚು ಮಾಹಿತಿಯನ್ನು, ಅವುಗಳು ಅಳಿಸಿಹೋಗುವುದಕ್ಕಿಂತ ಮೊದಲೇ, ಸೇರಿಸಿಟ್ಟುಕೊಳ್ಳಬೇಕಾಗಿರುವುದು ಅವಸರವಾಗಿ ಮಾಡಬೇಕಾಗಿರುವ ಕೆಲಸ.

**ವಿಜ್ಞಾನ ಮತ್ತು ತಾಂತ್ರಿಕತೆಯ ರಾಜಕೀಯದ ಆರ್ಥಿಕ ಸ್ವರೂಪ**

ಇಂದಿನ ಭಾರತೀಯ ವಿಜ್ಞಾನ ಮತ್ತು ತಾಂತ್ರಿಕತೆಯನ್ನು, ಪ್ರಭಾವ ಶೂನ್ಯವಾದದ್ದೆಂದು ಸಾಂಪ್ರದಾಯಿಕ ದೃಷ್ಟಿಕೋನ ಪರಿಗಣಿಸುವುದು, ಕೆಲವು ಅಂಶಗಳಿಂದಲೇ. ಉದಾಹರಣೆಗೆ ಅಸಮರ್ಪಕ ವಾರ್ಷಿಕ ಆಯವ್ಯಯದ ಅಂದಾಜು ಪಟ್ಟಿ, ಸೂಕ್ತ ನಿರ್ವಹಣೆ ಇಲ್ಲದಿರುವಿಕೆ ಮತ್ತು ಕಾರ್ಯಪ್ರವೃತ್ತರನ್ನಾಗಿ ಮಾಡಲು ಮತ್ತು ಭಾರತೀಯ ವಿಜ್ಞಾನಿಗಳಲ್ಲಿ ವೈಜ್ಞಾನಿಕ ತಾತ್ತ್ವಿಕ ನಂಬಿಕೆಗಳನ್ನು ಪದೇ ಪದೇ ಒತ್ತಿ ಹೇಳುವುದು ಇತ್ಯಾದಿ. ಕಾರ್ಯಾಗಾರದಲ್ಲಿನ ಮಾತುಗಳು ಒಟ್ಟಿನಲ್ಲಿ ಸೂಚಿಸಿದ್ದು, ಭಾರತೀಯ ವಿಜ್ಞಾನದ ತೊಂದರೆ ಕೇವಲ ಹೊರಗಿನಿಂದ ವೈಜ್ಞಾನಿಕ ಚಟುವಟಿಕೆಗಳ ವರೆಗಿನ ಪರಿಸ್ಥಿತಿಗಳಿಂದ ಹೊಮ್ಮುವ ಪ್ರಭಾವಶೂನ್ಯತೆಯದೊಂದೇ ಅಲ್ಲ. ಆದರೆ, ಭಾರತೀಯ ವಿಜ್ಞಾನ ಮತ್ತು ತಾಂತ್ರಿಕತೆ ಎರಡೂ ಚಟುವಟಿಕೆಯ ಒಳ ಅಂಶದಿಂದಲೇ ವಿಷಮ ಪರಿಸ್ಥಿತಿಗೆ ಸಿಲುಕಿಕೊಂಡಿವೆ. ಭಾರತೀಯ ವಿಜ್ಞಾನಿಗಳು ಮತ್ತು ತಂತ್ರಶಾಸ್ತ್ರಜ್ಞರು ಒಂದು ರೀತಿಯ ವಿರೋಧಾಭಾಸದ ಪರಿಸ್ಥಿತಿಯಲ್ಲಿನ ಒಂದು ಚಟುವಟಿಕೆಯಲ್ಲಿ ಸೇರಿಹೋಗಿದ್ದಾರೆ. ಆ ಚಟುವಟಿಕೆ ಹೊಂದಾಣಿಕೆಯಿಲ್ಲದ ಸಂಸ್ಕೃತಿಗಳಲ್ಲಿ ಬೇರು ಬಿಟ್ಟಿದ್ದು, ಅದೇ ಸಮಯದಲ್ಲಿ ವಿಜ್ಞಾನ ಮತ್ತು ತಾಂತ್ರಿಕತೆಯ ವಿಶ್ವವ್ಯಾಪಕತೆಯ ಕಾಲ್ಪನಿಕ ಕಥನಕ್ಕೂ ಸಮರ್ಥನೆ ನೀಡುತ್ತದೆ. ಈ ಮೇಲಿನ

ದೃಷ್ಟಿಕೋನದ ಮುಗ್ಧ ವಿಮರ್ಶಕರು, ಅದನ್ನು ವಿರೋಧಿಸಲು, ಸಾಮಾನ್ಯವಾಗಿ ಕೆಲವು ಅಸಂಬದ್ಧ ಪ್ರಶ್ನೆಗಳನ್ನು ಎಂದರೆ, ನ್ಯೂಟನ್ನನ ನಿಯಮಗಳು ಭಾರತದಲ್ಲಿ ಅನ್ವಯಿಸುವುದಿಲ್ಲವೇ? ಎಂದು ಪ್ರಶ್ನಿಸುತ್ತಾರೆ.

ಏನೇ ಆದರೂ ಏಕತ್ವತಾವಾದವು, ಕೇವಲ ವಿವಿಧ ಜ್ಞಾನ ಪದ್ಧತಿಗಳ ತರ್ಕಬದ್ಧತೆ ಮತ್ತು ವಿವಿಧ ಜ್ಞಾನಗಳ ಪದ್ಧತಿಗಳನ್ನು ವೈಜ್ಞಾನಿಕ ಎಂದು ಒಪ್ಪಿಕೊಳ್ಳುವ ಮಟ್ಟದಲ್ಲಿಯೇ ಪ್ರಶ್ನಿಸಲ್ಪಡುವುದು. ವಿಶ್ವವ್ಯಾಪಿ ಸಮಂಜಸತೆ, ಎಲ್ಲಾ ಜ್ಞಾನ ಪದ್ಧತಿಗಳಲ್ಲಿರುವ ಸಾಮಾನ್ಯ ಗುಣ. ಈ ರೀತಿಯಾಗಿ, ಚೈನಾದಲ್ಲಿಯೇ ಅಥವಾ ಭಾರತದಲ್ಲಿಯೋ ಕೆಳಕ್ಕೆ ಬೀಳುವ ಸೇಬಿನಹಣ್ಣು ನ್ಯೂಟನ್ನಿನ ನಿಯಮಗಳ ನೆರವು ಪಡೆದರೆ, ಒಬ್ಬ ಬ್ರಿಟಿಷನಿಗೆ ಆಕ್ಯುಪಂಕ್ಚರ್ ಅಥವಾ ಆಯುರ್ವೇದದಿಂದ ಗುಣವಾಗಬಹುದು. ಏನೇ ಆದರೂ, ನ್ಯೂಟನ್ನನ ಯಂತ್ರಶಾಸ್ತ್ರ ಅಥವಾ ಸೂಜಿ ಚಿಕಿತ್ಸೆ (ಆಕ್ಯುಪಂಕ್ಚರ್) ಅಥವಾ ಆಯುರ್ವೇದಗಳು, ಒಂದು ಪೂರ್ಣವಾಗಿ ಏಕಾಂತವಾಗಿದ್ದ ಸಾಂಸ್ಕೃತಿಕ ಪರಿಸ್ಥಿತಿಗಳಲ್ಲಿ ವಿಕಸಿಸಿದ್ದು, ಅವು ತಮ್ಮ ಸ್ವಂತದ ಸಮರ್ಥನೀಯತೆಯ ಒರೆಗಲ್ಲನ್ನು, ತಮ್ಮ ಸ್ವಂತದ ಅಭ್ಯಾಸಗಳನ್ನು ಮಾಡುತ್ತಿದ್ದ ಜನಸಮುದಾಯದವರೇ ಹೊಂದಿರುವಂತೆ ಮಾಡಿಕೊಂಡಿದ್ದವು. ವಿಜ್ಞಾನ ಮತ್ತು ತಾಂತ್ರಿಕತೆಯ ಈ ಮೂಲಾಂಶವೇ ವಿಶ್ವವ್ಯಾಪಕವಾಗಿಲ್ಲದೆ ಇರುವುದು.

ಭಾರತದಲ್ಲಿ ಮಾಡಿದ ಸುಮಾರು ಮೂವತ್ತು ವರ್ಷಗಳ ಕಾಲದ ಯೋಜಿತ ವೈಜ್ಞಾನಿಕ ಸಂಶೋಧನೆಗಳಲ್ಲಿ, ಭಾರತೀಯ ಪರಿಸ್ಥಿತಿಯ ವಿಶೇಷತೆಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಕಾರ್ಯಕ್ರಮಗಳ ಒಂದು ಸಂಪ್ರದಾಯವನ್ನು ಬೆಳೆಸಲಾಗಲಿಲ್ಲ. ಪಾಶ್ಚಾತ್ಯ ವಿಜ್ಞಾನ ಮತ್ತು ತಾಂತ್ರಿಕತೆಗೆ ಸಂಬಂಧಿಸಿದಂತೆ, ಮಾನ್ಯತೆ ಮತ್ತು ಬಹುಮಾನದ ಪದ್ಧತಿಗಳ ವಿಧಾನಗಳು, ಎಷ್ಟೋ ಸಾಧ್ಯತೆಗಳ ನಡುವೆ ಒಂದೇ ಒಂದಾಗಿದ್ದವು. ಪಾಶ್ಚಾತ್ಯ ಪದ್ಧತಿಗೆ, ವಿಶ್ವದ ಅನುಮೋದನೆಯನ್ನು ಅನಿವಾರ್ಯಗೊಳಿಸುವ ಕಾರ್ಯದ ಬಗ್ಗೆ, ಯಾವ ರೀತಿಯ ನ್ಯಾಯಬದ್ಧ ಅಥವಾ ತರ್ಕಾಧಾರಿತ ವಾದಸರಣಿಯೂ ಇಲ್ಲ. ವಿಜ್ಞಾನ ಮತ್ತು ತಾಂತ್ರಿಕತೆಯ ಬಗ್ಗೆ ಒಂದು ಪರ್ಯಾಯದ ಪ್ರಾರಂಭಿಸುವ ರೀತಿ ನಮ್ಮ ಜನರ ಆವಶ್ಯಕತೆಗಳಿಗೆ ಸಮರ್ಪಕವಾಗಿದ್ದು, ತಾನಾಗಿ ತನ್ನನ್ನೇ ಕುರಿತು, ನಮ್ಮ ವಿಜ್ಞಾನ ಮತ್ತು ತಾಂತ್ರಿಕತೆಯ ಪರಿಶೋಧನೆಯ ಬಗ್ಗೆ– ಸಂಸ್ಥೆಯ ಮಟ್ಟದಲ್ಲಿ ಅಥವಾ ಇನ್ನೂ ಹೆಚ್ಚಿನ ಸಾಂಸ್ಕೃತಿಕ ಚಿಂತನ ಮಾರ್ಗದ ಮಟ್ಟದಲ್ಲಿ, ಹೇಳಿಕೊಳ್ಳಬೇಕು.

...ವಿದೇಶದಿಂದ ಬಂದ ತಾಂತ್ರಿಕತೆಗಳು ಸಾಮಾಜಿಕವಾಗಿಯೂ ನಿಷ್ಪಕ್ಷಪಾತದ್ದಾಗಿರಲಿಲ್ಲ ಅಥವಾ ಅವುಗಳ ಬಳಕೆಗಳು ಅನಿವಾರ್ಯದ್ದೂ ಮತ್ತು ತಾಂತ್ರಿಕ ಬೆಳವಣಿಗೆಗಾಗಿ ಇದ್ದ ಏಕೈಕ ಆಯ್ಕೆಯೂ ಆಗಿರಲಿಲ್ಲ. ಉದಾಹರಣೆಗೆ, ಹಸಿರು ಕ್ರಾಂತಿಯ ತಾಂತ್ರಿಕತೆಯೊಂದೇ, ಇಡೀ ತಾಂತ್ರಿಕತೆಗಳ ಸಾಧ್ಯತೆಗಳ



ವ್ಯಾಪ್ತಿಯಲ್ಲಿನ ಏಕೈಕ ಆಯ್ಕೆ ಮತ್ತು ಅದು ಕೆಲವು ನಿರ್ದಿಷ್ಟ ಸ್ಥಿತಿಗಳಲ್ಲಿ ಉತ್ತಮ ಫಸಲು ಕೊಡುವಂಥ ಹೊಸ ಸಂಕರ ತಳಿಯ ಬೀಜಗಳನ್ನು ಹುಟ್ಟಿಸಿದೆ. ಈ ವಿಶಿಷ್ಟ ಹಸಿರು ಕ್ರಾಂತಿಯ ತಾಂತ್ರಿಕತೆ ಒಂದು ಆಯ್ಕೆಯಾಗಿದ್ದು, ಕ್ಷಾಮ ಮತ್ತು ಹಾನಿಕಾರಕ ಕೀಟಗಳನ್ನು ಚೆನ್ನಾಗಿ ತಡೆದುಕೊಳ್ಳುವಂಥ ಬೀಜಗಳನ್ನು ಆರಂಭಿಸುವುದಕ್ಕಾಗಿರಲಿಲ್ಲ. ಫಲದಾಯಕವಾದ, ಹೆಚ್ಚಿನ ದುಡಿಮೆಯ ಮತ್ತು ಪಾಶ್ಚಾತ್ಯರು ಒಳಕ್ಕೆ ಸೇರಿಸಬಹುದಾದ್ದರಿಂದ ಸ್ವತಂತ್ರವಾಗಿದ್ದ ಒಂದು ತಾಂತ್ರಿಕತೆಯನ್ನು ವಿಕಸಿಸದಂತೆ ಮಾಡಬೇಕಿದ್ದ ಒಂದು ಆಯ್ಕೆಯಾಗಿತ್ತು. ಜೊತೆಗೆ ಕಾಳುಗಳು ಹಾಗೂ ಧಾನ್ಯಗಳ ಸಮತೋಲನದ ಸಾಂಪ್ರದಾಯಿಕ ಆಹಾರಕ್ರಮವನ್ನು ಬಲಪಡಿಸುವತ್ತ ಗಮನ ಹರಿಸದಂಥ ಆಯ್ಕೆಯೂ ಆಗಿತ್ತು.

ಭಾರತೀಯ ಪೂರ್ವಾಪರಗಳ ಸಂದರ್ಭಗಳಲ್ಲಿ ಪಾಶ್ಚಾತ್ಯ ತಾಂತ್ರಿಕತೆಯನ್ನು ಪರಿಚಯಿಸುವುದು, ಭಾರತೀಯರಲ್ಲಿನ ಹೆಚ್ಚಿನವರಿಗೆ ವಿರುದ್ಧವಾಗಿ ಪಕ್ಷಪಾತ ತೋರಿಸಿದಂತಾಗುತ್ತದೆ... ಇಂಥದ್ದು ಭಾರತದ ಕೈಮಗ್ಗದ ತಾಂತ್ರಿಕತೆ, ಮೀನಿನ ಮಾಂಸದ ತಾಂತ್ರಿಕತೆ ಮತ್ತು ಕಾಡಿನ ತಾಂತ್ರಿಕತೆಗಳಲ್ಲಿ ಸ್ಪಷ್ಟವಾಗಿ ನಡೆದಿದೆ.

ಭಾರತದ ಕಸುಬುದಾರ ಮೀನುಸಾಕಣೆ ಮಾಡುವವರು ಒಟ್ಟು ೬.೫ ದಶಲಕ್ಷ ಜನರ ಜನಾಂಗವಾಗಿದ್ದು ಅವರ ಬಳಿ ೧,೯೨,೦೦೦ ದೋಣಿಗಳು, ಮರದ ತೆಪ್ಪಗಳನ್ನು ಹೊಂದಿದ್ದು, ೨.೭ ದಶಲಕ್ಷ ಜನರು ಯಂತ್ರ ಮತ್ತು ಇತರ ವಸ್ತುಗಳಿಂದ ಮೀನುಗಳನ್ನು ಹಿಡಿದು, ಇಂದು ಕಷ್ಟದಲ್ಲಿ ಸಿಲುಕಿ ಒದ್ದಾಡುತ್ತಿರುವುದು ೧೬,೫೦೦ ಯಾಂತ್ರಿಕ ರಚನೆಯ ಮೀನನ್ನು ಹಿಡಿಯುವ ದೊಡ್ಡ ದೋಣಿಗಳಿಂದ ಮತ್ತು ಆಳವಾದ ನೀರಿಗಿಳಿಯವ ಬಲೆಗಳಿಂದಲೇ ಹೌದು. ಅವುಗಳನ್ನು ಹೊಂದಿರುವವರು ೮೦೦೦ ಜನರು. ಅವರು ನೇರವಾಗಿಯೋ ಅಥವಾ ಅಲ್ಲದೆಯೋ ೧,೬೫೦೦೦ ಜನರನ್ನು ಕೆಲಸಕ್ಕೆ ಗೊತ್ತುಮಾಡಿಕೊಂಡು ಒಟ್ಟು ಮೀನಿನ ಹುಟ್ಟುವಳಿಯಲ್ಲಿ ೩೦% ಹಿಡಿಯುತ್ತಾರೆ...

ಅದೇ ರೀತಿ, ಪಾಶ್ಚಾತ್ಯ ದೇಶಗಳು, ತಮ್ಮ ಸ್ವಂತ ಕಾಡುಗಳಿಗೆ ಪ್ರಯೋಗಿಸುವ ಕಟ್ಟುನಿಟ್ಟಿನ ಜೀವಿ ಪರಿಸ್ಥಿತಿ ಶಾಸ್ತ್ರದ ಒಳ್ಳೆಯ ವಿಷಯಗಳನ್ನು ಕಾಡಿನ ಪದ್ಧತಿಗಳನ್ನು ನಿರ್ಣಯಿಸುವ ಮೂರನೆಯ ವಿಶ್ವದ ರಾಷ್ಟ್ರಗಳ ಕಾಡಿನ ಕಾರ್ಯನೀತಿ ನಿರ್ಧರಿಸುವ ಜನರು ಪೂರ್ತಿಯಾಗಿ ಕಡೆಗಣಿಸುತ್ತಾರೆ... ಭಾರತದಲ್ಲಿ ಈ ಕಾರ್ಯಭಾರದ ಯೋಜನೆಗಳಿಗೆ ಮೇಲುಮೇಲಿನ ಸೇವೆಯ ಭರವಸೆ ನೀಡಲಾದರೂ, ಕಾಡಿನ ನಿಜವಾದ ಸ್ಥಿತಿ ಮಾತ್ರ ಗುಟ್ಟಾಗಿಲ್ಲ...

**ಜನರ ಆರೋಗ್ಯ ರಕ್ಷಣೆಯ ಪರ್ಯಾಯಗಳು**

...ಸದ್ಯದಲ್ಲಿನ ಭಾರತದ ಆರೋಗ್ಯ ರಕ್ಷಣೆಯನ್ನು ...ಬ್ರಿಟಿಷ್ ಪ್ರಭುಗಳೇ ರಾಜ್ಯದ ಪ್ರೋತ್ಸಾಹದ ಮೂಲಕ ಪ್ರಾರಂಭಿಸಿದರು ಮತ್ತು ತರ್ಕಬದ್ಧವಾಗಿ ಮಾಡಿದರು. ಸಾಂಪ್ರದಾಯಿಕವಾದ ಮತ್ತು ಸ್ವದೇಶೀ ಆರೋಗ್ಯ ರಕ್ಷಣಾ ಪದ್ಧತಿಯ ವ್ಯವಸ್ಥಿತವಾದ ನಿರುತ್ಸಾಹಗೊಳಿಸುವಿಕೆಯಿಂದ, ಜನರು ತಾವಾಗಿ ತಮಗೆ ಸ್ಥಳೀಯವಾಗಿ ದೊರಕುತ್ತಿದ್ದ ಮೂಲವಸ್ತುಗಳು ಮತ್ತು ಜಾಣ್ಮೆಗಳ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದ ರೀತಿಯು ಪೂರ್ತಿಯಾಗಿ ಅಳಿದುಹೋಯಿತು. ಉದಾಹರಣೆಗೆ, ಸಾಂಪ್ರದಾಯಿಕವಾಗಿ ದೊರಕುವ ಹುದುಗೆಬ್ಬಿಸಿದ ಆಹಾರವನ್ನು ಬಳಸಿ ಪ್ರೊಟೀನು ಕಡಿಮೆ ಇದ್ದ ಮಕ್ಕಳನ್ನು ಪುನಶ್ಚೈತನ್ಯಗೊಳಿಸಬಹುದು. ಅದಕ್ಕಾಗಿ ಬಹುರಾಷ್ಟ್ರೀಯರು ಸಿದ್ಧಪಡಿಸಿದ ಮಕ್ಕಳ ಆಹಾರಗಳನ್ನೇ ನಂಬಿಕೊಳ್ಳಬೇಕಾಗಿಲ್ಲ.

**ನಿರ್ಣಯಗಳು**

ಭಾರತ ಮತ್ತು ಇತರ ಮುಂದುವರಿದಿಲ್ಲದ ರಾಷ್ಟ್ರಗಳ ವೈಜ್ಞಾನಿಕರು, ತಮ್ಮ ಸಾಮಾಜಿಕ, ರಾಜಕೀಯದ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳಿಗಾಗಿ ಯಾವವು ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಗಳೋ ಅವುಗಳನ್ನೇ ಸ್ವತಂತ್ರವಾಗಿ ಗುರುತಿಸುವಂಥ ಒಂದು ಸ್ವತಂತ್ರವಾದ ಪರ್ಯಾಯ ಪದ್ಧತಿಯನ್ನು ಬೆಳೆಸಿಕೊಳ್ಳಬೇಕು. ಮುಂದುವರಿದ ರಾಷ್ಟ್ರಗಳ ಎರಡನೇ ದರ್ಜೆಯ ವೈಜಾನಿಕ ಹಾಗೂ ತಾಂತ್ರಿಕ ಸಂಶೋಧನೆಯ ನಕಲು, ನಮ್ಮ ರಾಷ್ಟ್ರೀಯ ಮುನ್ನಡೆಯಲ್ಲಿ ಯಾವುದೇ ರೀತಿಯ ಕ್ರಿಯಾತ್ಮಕ ಹಾಗೂ ಬೌದ್ಧಿಕ ಚಟುವಟಿಕೆಗಳತ್ತ ನಮ್ಮನ್ನು ಕೊಂಡೊಯ್ದಿಲ್ಲ. ಕಡೆಗೆ ರಾಷ್ಟ್ರೀಯ ಅಭಿವೃದ್ಧಿಯತ್ತ ಯಾವ ಕ್ರಿಯಾತ್ಮಕ ಪಾತ್ರವನ್ನೂ ವಹಿಸಿಲ್ಲ. ಅದಕ್ಕೆ ಬದಲಾಗಿ, ಪಾಶ್ಚಾತ್ಯ ತಂತ್ರಶಾಸ್ತ್ರದ ಅಂಥ ಸ್ವಚ್ಛಂದ ಬಳಕೆಯು, ಮೊದಲಿದ್ದ ಜೀವಿ ಪರಿಸ್ಥಿತಿ ಶಾಸ್ತ್ರ, ಸಾಮಾಜಿಕ ಹಾಗೂ ಮಾನವೀಯ ಸಂಪನ್ಮೂಲಗಳನ್ನು ಮತ್ತು ಯೋಗ್ಯತೆಗಳನ್ನು ನಾಶ ಮಾಡಿದೆ. ಮೇಲೆ ನೀಡಿರುವ ಪರ್ಯಾಯವಾದ ದೃಷ್ಟಿಕೋನ, ಹಿಂದಿನ ಚರಿತ್ರೆಗೆ ಹೋಗಬೇಕಾದ ಸೂಚಿ ಅಲ್ಲ. ವಿಜ್ಞಾನ ಮತ್ತು ತಾಂತ್ರಿಕತೆಗಳ ಪದ್ಧತಿಗಳ ಬಗ್ಗೆಯ ಒಂದು ಗಾಢವಾದ ಚಾರಿತ್ರಿಕ ವಿಶ್ಲೇಷಣೆಯ ಪ್ರಾಮುಖ್ಯ ಇರುವುದು, ಈ ಸಮಾಜಗಳಲ್ಲಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸೃಷ್ಟಿಸಬೇಕಾಗಿರುವ ಸಾಧ್ಯತೆಗಳ ಒಂದು ವಿಶಾಲವಾದ ವ್ಯಾಪ್ತಿಯ ಬಗ್ಗೆಯ ಒಳ್ಳೆಯ ಫಲಿತಾಂಶಗಳಲ್ಲಿಯೇ ಹೌದು.

* * * *